ನವೆಂಬರ್ 2016

₹ 15/-

# ಯುಗರಶ್ಮಿ

ತ್ರೈಮಾಸಿಕ



- ಲೋಕದ ಇಂದಿನ ಸ್ಥಿತಿ ಅತ್ಯಂತ ಆಪತ್ಕರವಾಗಿದೆ. ನೀವು ಪ್ರಾರ್ಥನೆಗಳ ಕಡೆಗೆ ಗಮನ ಹರಿಸಿರಿ
- ಜಾಗತಿಕ ಅಸ್ತವ್ಯಸ್ತತೆಯ ಕಾಲದಲ್ಲಿ ಶಾಂತಿ ಸ್ಥಾಪನೆಗಿರುವ ಕೀಲಿಗೈಗಳು
- ಭೂಮಿಯಲ್ಲಿ ವಾಸ್ತವಿಕ ಶಾಂತಿ
- ಹಝ್‌ರತ್ ಮುಹಮ್ಮದ್ ಪೈಗಂಬರರು(ಸ) ಭಯೋತ್ಪಾದನೆಯನ್ನು ಎಂದೂ ಸಮರ್ಥಿಸಿರಲಿಲ್ಲ
- ಅಹ್ಮದಿಯಾ ಸಂದೇಶ

"ಊರುಗಳನ್ನು, ಅದರಲ್ಲಿ ನೆಲೆಸಿರುವವರು ಸಜ್ಜನರಾಗಿದ್ದರೆ, ನಿನ್ನ ಪ್ರಭು ಅನ್ಯಾಯವಾಗಿ ಅದನ್ನು ನಾಶಪಡಿಸಲಾರ." – ಪವಿತ್ರ ಖುರ್‌ಆನ್ 11:118

ವಿಷಯ ಸೂಚಿಕೆ


| ವಿಷಯ | ಪುಟ |
|---|---|
| ಸಹೃದಯತೆ ಮತ್ತು ಸ್ನೇಹವನ್ನು ಬೆಳೆಸಿರಿ | 1 |
| ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು | 2 |
| ಲೋಕದ ಇಂದಿನ ಸ್ಥಿತಿ ಅತ್ಯಂತ ಆಪತ್ಕರವಾಗಿದೆ. ನೀವು ಪ್ರಾರ್ಥನೆಗಳ ಕಡೆಗೆ ಗಮನ ಹರಿಸಿರಿ | 3 |
| ಜಾಗತಿಕ ಅಸ್ತವ್ಯಸ್ತತೆಯ ಕಾಲದಲ್ಲಿ ಶಾಂತಿ ಸ್ಥಾಪನೆಗಿರುವ ಕೀಲಿಗೈಗಳು | 7 |
| ಭೂಮಿಯಲ್ಲಿ ವಾಸ್ತವಿಕ ಶಾಂತಿ | 12 |
| ಕವನ * ಝುಂ ಝುಂ | 15 |
| ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಭಯೋತ್ಪಾದನೆಯನ್ನು ಎಂದೂ ಸಮರ್ಥಿಸಿರಲಿಲ್ಲ | 16 |
| ಅಹ್ಮದಿಯಾ ಸಂದೇಶ | 24 |
| ತಾಯಿಯೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಲು ಉಪದೇಶ | 34 |
| ಸಂಪಾದಕರಿಗೆ ಪತ್ರ | 35 |
| ವಾರ್ತೆಗಳು | |
| * ಅಹ್ಮದಿಯಾ ಜಮಾಅತಿನ ಪ್ರಗತಿ | 36 |
| * ಖುದ್ದಾಮುಲ್ ಅಹ್ಮದಿಯಾ, ಅತ್‌ಫಾಲುಲ್ ಅಹ್ಮದಿಯಾ ಕರ್ನಾಟಕ ದಕ್ಷಿಣ ವಲಯ ಇಜ್ತಿಮಾ | 37 |
| * ಮಜ್ಲಿಸ್ ಅನ್ಸಾರುಲ್ಲಾಹ್ ಇಜ್ತಿಮಾ ಬೆಂಗಳೂರು | |
| * ಮಜ್ಲಿಸ್ ಅನ್ಸಾರುಲ್ಲಾಹ್ ಇಜ್ತಿಮಾ ಮಡಿಕೇರಿ | 38 |
| ಓದಿದ್ದು | |
| * ಭಯೋತ್ಪಾದನೆ ಹರಾಮ್: 1 ಲಕ್ಷ ಮೌಲ್ವಿಗಳಿಂದ ಫತ್ವಾ | |
| * ಆರೆಸ್ಸೆಸ್ ಶಾಲೆಗಳಲ್ಲಿ ಮುಸ್ಲಿಮರ ಸಂಖ್ಯೆ ಡಬಲ್ | |
| * ಹಮಾಲರಾಗಲು ಎಂಫಿಲ್ ಪದವೀಧರರ ಅರ್ಜಿ | |
| * ಅಟೆಂಡರ್ ಹುದ್ದೆಗೆ 12 ಸಾವಿರ ಎಂಜಿನಿಯರುಗಳ ಅರ್ಜಿ | 39 |
| * ಮ.ಪ್ರ: 14000 ಪೇದೆ ಹುದ್ದೆಗೆ 9 ಲಕ್ಷ ಅರ್ಜಿ | |
| * ಧರ್ಮ ಪ್ರವಚನ ನೀಡಲು ಝಾಕಿರ್ ಅಯೋಗ್ಯ | |
| * ಝಾಕಿರ್ ನ್ಯಾಕ್ ಪೀಸ್ ಟಿವಿಗೆ ಬಾಂಗ್ಲಾ ನಿಷೇಧ | |
| * ಗೋ ರಕ್ಷಿಸಿ : ಮುಸ್ಲಿಮರಿಗೆ ಅಜ್ಮೇರ್ ದರ್ಗಾ ಕರೆ | 40 |
| * ಬಾಂಗ್ಲಾ ಜಮಾತೆ ಮುಖಂಡ ಅಲಿ ನೇಣುಗಂಬಕ್ಕೆ * ಹಿಂದೂ ಕಾಯ್ದೆಯ ಪರಿಷ್ಕರಣೆ | |
| * ಇಸ್ಲಾಂನಿಂದ ಹಫೀಜ್ ಉಚ್ಚಾಟನೆ: ಫತ್ವಾ | 41 |
| * ಚಂದ್ರನ ಮೇಲೆ ಮಾನವ: ಎಷ್ಟು ಸತ್ಯ? * ಕುರಾನ್‌ನ ಭಾರ ಎಂಟು ಕ್ವಿಂಟಾಲ್ | |
| * ಆರೋಗ್ಯ | 42 |
| * ನಿಧನ ವಾರ್ತೆ | 43 |


ಯುಗರಶ್ಮಿ

ಮುಖಪುಟ ಚಿತ್ರ : ಸುಬ್‌ಹಾನ್ ಮಸ್ಜಿದ್. ಮೋರ್‌ಫೆಲ್‌ಡನ್, ವಾಲ್‌ಡೋರ್ಫ್, ಜರ್ಮನಿ


ಬಿಡಿ ಪ್ರತಿ : ರೂ. 15/– ವಾರ್ಷಿಕ ಚಂದಾ : ರೂ. 60/– ಅಂಚೆ ಮೂಲಕ : ರೂ. 70/–

ವಿಳಾಸ : 10–23–1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು – 575 001.

ಯುಗರಶ್ಮಿ

ನವೆಂಬರ್ 2016

ಸಂಪಾದಕ : ಮುಹಮ್ಮದ್ ಯೂಸುಫ್

ಆರಂಭ : 1975 | ಸಂಪುಟ : 33 | ನುಬುವ್ವತ್ : 1395 ಹಿಜರೀ ಶಮ್ಸೀ | ಸಂಚಿಕೆ : 3-4

# ಸಹೃದಯತೆ ಮತ್ತು ಸ್ನೇಹವನ್ನು ಬೆಳೆಸಿರಿ

ಸುಕೃತ ದಾಸರ ಹೊರತು ಅಲ್ಲಾಹನು ಯಾರನ್ನೂ ಗಣ್ಯಮಾಡುವುದಿಲ್ಲ. ನೀವು ಪರಸ್ಪರ ಸಹೃದಯತೆ ಮತ್ತು ಸ್ನೇಹವನ್ನು ಬೆಳೆಸಿರಿ. ಎಲ್ಲ ವಿಧ ಅಪಹಾಸ್ಯ ಮತ್ತು ಪರಿಹಾಸೋಕ್ತಿಗಳಿಂದ ನೀವು ಪೂರ್ಣವಾಗಿ ದೂರವಿದ್ದುಕೊಳ್ಳಿರಿ. ಪರಿಹಾಸ ಮನುಷ್ಯನ ಹೃದಯವನ್ನು ಸತ್ಯದಿಂದ ದೂರಮಾಡಿ ಎಲ್ಲಿಗೋ ಕೊಂಡೊಯ್ಯುತ್ತದೆ. ನೀವು ಪರಸ್ಪರ ಆದರದಿಂದ ವರ್ತಿಸಿರಿ. ಪ್ರತಿಯೊಬ್ಬನು ತನ್ನ ಸುಖಾರಾಮಕ್ಕಿಂತ ತನ್ನ ಸಹೋದರರನ ಸುಖಾರಾಮಕ್ಕೆ ಆದ್ಯತೆ ನೀಡಲಿ. ಅಲ್ಲಾಹನೊಂದಿಗೆ ಸತ್ಯಸಂಧವಾದ ಸಂಧಿ ಮಾಡಿರಿ. ಅವನ ಅನುಸರಣೆಗೆ ಮರಳಿರಿ. ದೇವಕ್ರೋಧ ಭೂಮಿಗೆ ಇಳಿಯುತ್ತಿದೆ. ಪೂರ್ಣವಾಗಿ ತನ್ನ ತಪ್ಪುಗಳಿಂದ ಪಶ್ಚಾತ್ತಾಪಪಟ್ಟು ಅವನ ಸನ್ನಿಧಾನದಲ್ಲಿ ಹಾಜರಾಗುವವನು ಮಾತ್ರವೇ ಅದರಿಂದ ರಕ್ಷೆಹೊಂದುವನು. (ಮಲ್‌ಫೂಝಾತ್)

– ಹಝ್ರತ್ ಮಿರ್ಝಾ ಗುಲಾಂ ಅಹ್ಮದ್,
ಅಹ್ಮದಿಯಾ ಮುಸ್ಲಿಂ ಜಮಾಅತ್ ಸ್ಥಾಪಕರು

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

ಯಾರಾದರೂ ಏನಾದರೂ ಒಳಿತು ಮಾಡಲು ಕರೆದರೆ ಆ ಕರ್ಮ ಮಾಡುವವನಿಗೆ ಲಭಿಸುವಷ್ಟು ಪ್ರತಿಫಲ ಕರೆದವನಿಗೂ ಲಭಿಸುವುದು. ಕರ್ಮ ಮಾಡುವವನ ಪ್ರತಿಫಲದಲ್ಲಿ ಏನೂ ಕಡಿಮೆಯಾಗದು. ಯಾರಾದರೂ ಕೆಡುಕು ಮಾಡಲು ಕರೆದರೆ ಆ ಕೆಡುಕು ಮಾಡುವವನಿಗೆ ತುಲ್ಯವಾದಷ್ಟು ಪಾಪ ಕರೆದವನಿಗೂ ಸಿಗುವುದು. ಕೆಡುಕು ಮಾಡುವವನ ಪಾಪದಲ್ಲಿ ಏನೂ ಕಡಿಮೆಯಾಗದು. (ಮುಸ್ಲಿಂ)

ಒಳಿತು ಉಪದೇಶಿಸುವವನು ಅದನ್ನು ಮಾಡಿದವನ ಹಾಗೆಯೇ. (ಮುಸ್ನದ್ ಅಹ್ಮದ್)

ಜನರಿಗೆ ಸುಲಭ ಮಾಡಿರಿ. ಅವರಿಗೆ ಕಷ್ಟಕೊಡಬೇಡಿರಿ. ಶುಭವಾರ್ತೆ ತಿಳಿಸಿರಿ. ನಿರಾಶೆಗೊಳಿಸಬೇಡಿರಿ. (ಮುಸ್ಲಿಂ)

ಯಾರಾದರೂ ಕೆಡುಕು ಕಂಡರೆ ಅದನ್ನು ತಡೆಯಲು ಸಾಧ್ಯವಿದ್ದರೆ ಕೈಯಿಂದ ತಡೆಯಬೇಕು. ಅದು ಸಾಧ್ಯವಿಲ್ಲದಿದ್ದರೆ ನಾಲಗೆಯಿಂದ ತಡೆಯಲು ಪ್ರಯತ್ನಿಸಬೇಕು. ಅದಕ್ಕೂ ಸಾಧ್ಯವಿಲ್ಲದಿದ್ದರೆ ಮನಸ್ಸಿನಲ್ಲಿ ಅದರ ಬಗ್ಗೆ ದ್ವೇಷಿಸಬೇಕು. ಇದು ಈಮಾನಿನ (ವಿಶ್ವಾಸದ) ಅತಿ ಕೆಳಗಿನ ಮಟ್ಟವಾಗಿದೆ. (ಮುಸ್ಲಿಂ)

ತಮ್ಮ ಆಯುಷ್ಯ ಹೆಚ್ಚಲಿಕ್ಕೂ ಜೀವಿತ ವಿಭವಗಳು ವೃದ್ಧಿಗೊಳ್ಳಲಿಕ್ಕೂ ಇಚ್ಛಿಸುವವರು ಮಾತಾಪಿತರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಲಿ. ಬಂಧುತ್ವವನ್ನು ದೃಢಪಡಿಸಲಿ. (ಮುಸ್ನದ್ ಅಹ್ಮದ್)

ತನ್ನ ಜೀವಿತ ವಿಭವ ವಿಶಾಲವಾಗಬೇಕೆಂದೂ ತನ್ನ ಆಯುಸ್ಸು ವೃದ್ಧಿಗೊಳ್ಳಬೇಕೆಂದೂ ತನ್ನ ಸದ್‌ಸ್ಮರಣೆ ಹೆಚ್ಚಾಗಬೇಕೆಂದೂ ಬಯಸುವವನು ಬಂಧುಗಳೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಲಿ. (ಮುಸ್ಲಿಂ)

ಮೇಲಿನ ಕೈ (ದಾನ ನೀಡುವ ಕೈ) ಕೆಳಗಿನ ಕೈಗಿಂತ ಉತ್ತಮವಾಗಿದೆ. ದಾನಧರ್ಮ ಮಾಡುವುದರಲ್ಲಿ ನಿನ್ನ ಹೊಣೆಗಾರಿಕೆಯಲ್ಲಿರುವ ಜನರಿಗೆ ಆದ್ಯತೆ ನೀಡು. ತನ್ನ ಆವಶ್ಯಕತೆಗಳನ್ನು ಸಹ ಪರಿಗಣಿಸಿ ಮಾಡುವ ದಾನ ಅತಿ ಉತ್ತಮವಾದುದಾಗಿದೆ. ಇಂದು ಸ್ವಂತ ದಾನಮಾಡಿ ನಾಳೆ ಅದರ ಅಗತ್ಯವುಳ್ಳವನಾಗಿ ಅಲೆದಾಡುವ ಅವಸ್ಥೆ ಉಂಟಾಗಬಾರದು. ಯಾಚಿಸುವುದರಿಂದ ರಕ್ಷೆ ಹೊಂದಲು ಪ್ರಯತ್ನಿಸುವವನನ್ನು ಅಲ್ಲಾಹು ಅನುಗ್ರಹಿಸುತ್ತಾನೆ. ಐಶ್ವರ್ಯವನ್ನು ಪ್ರಕಟಿಸುವವನನ್ನು ಅಲ್ಲಾಹನು ಐಶ್ವರ್ಯವಂತನನ್ನಾಗಿ ಮಾಡುತ್ತಾನೆ. (ಬುಖಾರಿ)

ಅಭಿಪ್ರಾಯ ಕೇಳಲ್ಪಡುವವನು ನಂಬಿಕಸ್ತನಾಗಿರಬೇಕು. (ತಿರ್ಮಿದೀ)

ಯಾರಾದರೂ ನಿಮ್ಮೊಡನೆ ಅಭಿಪ್ರಾಯ ಕೇಳಿದರೆ ಒಳ್ಳೆಯ ಅಭಿಪ್ರಾಯ ಹೇಳಿಕೊಡಿರಿ. ನೀವು ಹಾಗೆ ಮಾಡದಿದ್ದರೆ ವಂಚನೆ ಮಾಡುವವರಾಗುವಿರಿ. (ಮುಸ್ನದ್ ಅಹ್ಮದ್)

ವರ್ತಿಸುವುದಕ್ಕಿಂತ ಮುಂಚೆ ಚೆನ್ನಾಗಿ ಆಲೋಚಿಸಿರಿ. ಒಳ್ಳೆಯದು ಮತ್ತು ಪ್ರಯೋಜನಕರವಾಗಿ ಕಾಣುವುದನ್ನು ಮಾಡಿರಿ. ಕೆಟ್ಟದ್ದು ಮತ್ತು ನಾಶಕರವಾಗಿ ಕಾಣುವುದರಿಂದ ಹಿಮ್ಮೆಟ್ಟಿರಿ. (ಮಿಷ್ಕಾತ್)


**ಯುಗರಶ್ಮಿಗೆ ಚಂದಾದಾರರಾಗಿರಿ**

ವಾರ್ಷಿಕ ಚಂದಾ : **ರೂ. 60/–**, ಅಂಚೆ ಮೂಲಕ : **ರೂ. 70/–**

ಸಂಪರ್ಕಿಸಿರಿ : 99 00 410 789

# ಲೋಕದ ಇಂದಿನ ಸ್ಥಿತಿ ಅತ್ಯಂತ ಆಪತ್ಕರವಾಗಿದೆ ನೀವು ಪ್ರಾರ್ಥನೆಗಳ ಕಡೆಗೆ ಗಮನ ಹರಿಸಿರಿ

**(ಅಹ್ಮದಿಯಾ ಮುಸ್ಲಿಮ್ ಜಮಾಅತ್‍ನ ಐದನೇ ಖಲೀಫ, ಹಝ್ರತ್ ಮಿರ್ಝಾ ಮಸ್‍ರೂರ್ ಅಹ್ಮದ್, ಅವರು ಲಂಡನಿನ 'ಬೈತುಲ್ ಫುತೂಹ್' ಮಸೀದಿಯಲ್ಲಿ 29–07–2016ರಂದು ನೀಡಿದ ಜುಮುಅ ಖುತ್‍ಬದ ಸಾರಾಂಶ)**

ಇಂದಿನ ಕಾಲದಲ್ಲಿ ಲೋಕದ ಸ್ಥಿತಿ ಬಹಳ ವೇಗವಾಗಿ ಕೆಟ್ಟುಹೋಗುತ್ತಾ ಇದೆ. ದುರದೃಷ್ಟಕರವಾಗಿ ಇದಕ್ಕೆ ಕಾರಣವಾಗಿರುವುದು ಮುಸ್ಲಿಮರ ಕೆಲವು ಗುಂಪುಗಳಾಗಿವೆ. ಮುಸ್ಲಿಮ್ ದೇಶಗಳ ನಾಯಕರು, ತಮ್ಮನ್ನು ಇಸ್ಲಾಮ್ ವಿರುದ್ಧ ಶಕ್ತಿಗಳು ತಮ್ಮ ವಶಕ್ಕೆ ಒಳಪಡಿಸಲು ಪ್ರಯತ್ನಿಸುತ್ತಿವೆ ಎಂಬ ಅವರ ಕಾರಸ್ಥಾನಗಳನ್ನು ಮನವರಿಕೆ ಮಾಡಿಕೊಳ್ಳುವುದಿಲ್ಲ. ಇಸ್ಲಾಮಿನ ಹೆಸರಲ್ಲಿ ಮತ್ತು ಜಿಹಾದ್ ಹೆಸರಲ್ಲಿ ನಡೆಸಲಾಗುತ್ತಿರುವ ದೌರ್ಜನ್ಯಗಳಿಗೆ ಇಸ್ಲಾಮಿನೊಂದಿಗೆ ಯಾವ ಸಂಬಂಧವೂ ಇಲ್ಲ. ಇದೇ ರೀತಿ ಮುಸ್ಲಿಮ್ ಸರಕಾರಗಳು ತಮ್ಮ ಪ್ರಜೆಗಳ ಮೇಲೆ ಮಾಡುತ್ತಿರುವ ದೌರ್ಜನ್ಯಗಳಿಗೆ ಸಹ ಇಸ್ಲಾಮ್‍ನೊಂದಿಗೆ ದೂರದ ಸಂಬಂಧ ಕೂಡ ಇರುವುದಿಲ್ಲ. ಭಯೋತ್ಪಾದಕರು ಇಸ್ಲಾಮಿನ ಹೆಸರಲ್ಲಿ ಮುಸ್ಲಿಮೇತರರನ್ನು ಮಾತ್ರ ಹತ್ಯೆ ಮಾಡುವುದಿಲ್ಲ. ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಅವರು ಮುಸ್ಲಿಮರ ಸಾಮೂಹಿಕ ಹತ್ಯೆಗಳನ್ನು ಮಾಡುತ್ತಿದ್ದಾರೆ. ಹೀಗೆ ಹತ್ಯೆ ಮಾಡಲ್ಪಡುವವರಲ್ಲಿ ನಿಷ್ಕಳಂಕ ಜನರು, ಮಕ್ಕಳು, ವೃದ್ಧರು, ಮಹಿಳೆಯರು ಎಲ್ಲರೂ ಸೇರುತ್ತಾರೆ. ಮುಸ್ಲಿಮ್ ದೇಶಗಳ ಶಕ್ತಿ ಬಲಹೀನ ಸ್ಥಿತಿಯಿಂದ ಮತ್ತಷ್ಟು ಬಲಹೀನ ಸ್ಥಿತಿಗೆ ತಳ್ಳಲ್ಪಡುತ್ತಿದೆ. ಇದನ್ನೇ ಇಸ್ಲಾಮ್ ವಿರುದ್ಧ ಶಕ್ತಿಗಳು ಇಚ್ಛಿಸುತ್ತವೆ. ಮುಸ್ಲಿಮ್ ಸರಕಾರಗಳು ಎಂದೂ ಬಲಿಷ್ಠವಾಗಬಾರದು ಎಂದು ಅವು ಬಯಸುತ್ತವೆ. ಮುಸ್ಲಿಮ್ ದೇಶಗಳು ಆರ್ಥಿಕವಾಗಿಯೂ ಶಾಂತಿ ನೆಲೆಸುವ ದೃಷ್ಟಿಯಲ್ಲಿಯೂ ಬಲಶಾಲಿ ಆಗಬಾರದೆಂದು ಅವು ಬಯಸುತ್ತವೆ. ಮುಸ್ಲಿಮ್ ದೇಶಗಳ ನಾಯಕರು ಮತ್ತು ಅವರನ್ನು ಬೆಂಬಲಿಸುವ ಮತಪಂಡಿತರು ಇಸ್ಲಾಮ್ ಏನೆಂದು ಮನವರಿಕೆ ಮಾಡಿಕೊಂಡಿಲ್ಲ ಮತ್ತು ಮನವರಿಕೆ ಮಾಡಿಕೊಳ್ಳಲು ಇಚ್ಛಿಸುವುದೂ ಇಲ್ಲ. ಅಲ್ಲಾಹನು ತನ್ನ ವಾಗ್ದಾನ ಪ್ರಕಾರ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಭವಿಷ್ಯವಾಣಿ ಪ್ರಕಾರ ಈ ಕಾಲಘಟ್ಟದಲ್ಲಿ ಇಸ್ಲಾಮಿನ ವಾಸ್ತವಿಕ ಉಪದೇಶಗಳನ್ನು ಲೋಕದಲ್ಲಿ ಜಾರಿಗೊಳಿಸಲು ನಿಯೋಜಿಸಿದ ಈ ಕಾಲಘಟ್ಟದ ಇಮಾಮ್ ಮತ್ತು ಮಾರ್ಗದರ್ಶಕರಾದವರ ಮಾತುಗಳನ್ನು ಆಲಿಸಲು ಅವರು ನಿರಾಕರಿಸುತ್ತಾರೆ. ಇದರ ಪರಿಣಾಮ ಏನೆಂಬುದನ್ನು ನಾವು ನೋಡುತ್ತಿದ್ದೇವೆ. ಇಸ್ಲಾಮ್ ಧರ್ಮ ಶಾಂತಿ ಮತ್ತು ನ್ಯಾಯವನ್ನು ಸ್ಥಾಪಿಸುವ ಎಲ್ಲದಕ್ಕಿಂತಲೂ ದೊಡ್ಡ ಧ್ವಜವಾಹಕ ಆಗಿದೆ. ಶಾಂತಿ ಮತ್ತು ನ್ಯಾಯ ಸ್ಥಾಪಿಸುವುದೇ ಇಸ್ಲಾಮೀ ಸರಕಾರಗಳ ಸರ್ವಶ್ರೇಷ್ಠ ಕಡ್ಡಾಯ ಕರ್ತವ್ಯವಾಗಿದೆ ಎಂದು ಇಸ್ಲಾಮ್ ಉಪದೇಶಿಸುತ್ತದೆ. ಆದರೆ ಈ ಸರಕಾರಗಳು ಶಾಂತಿ ಮತ್ತು ನ್ಯಾಯವನ್ನು ದಬ್ಬಿ ಹಾಕುತ್ತಿವೆ. ಪ್ರತಿಯೊಂದು ಮುಸ್ಲಿಮ್ ದೇಶದಲ್ಲಿ ನಡೆಯುವ ಕಲಹಗಳಿಗೂ ಹಿಂಸಾಚಾರಗಳಿಗೂ ಕಾರಣವೇನೆಂದರೆ ಸರಕಾರಗಳು ಜನರ ಹಿತಕ್ಕಾಗಿ ಮತ್ತು ಪ್ರಗತಿಗೋಸ್ಕರ ಕೆಲಸ ಮಾಡುವುದಕ್ಕೆ ಬದಲಾಗಿ ತಮ್ಮ ಸ್ವಂತ ಸ್ವಾರ್ಥ ಹಿತಾಸಕ್ತಿಗಳಿಗೆ ಆದ್ಯತೆ ನೀಡುತ್ತವೆ. ಈ ಪರಿಸ್ಥಿತಿಯ ಲಾಭವನ್ನು ಸ್ವಾರ್ಥ ಶಕ್ತಿಗಳು ಪಡೆಯುತ್ತವೆ. ಮುಸ್ಲಿಮರು ಮುಸ್ಲಿಮರನ್ನು ಕೊಲ್ಲುತ್ತಿದ್ದಾರೆ. ಮುಸ್ಲಿಮ್ ನಾಯಕರಲ್ಲಿ ಸಹನೆಯ ಗುಣವೇ ಇಲ್ಲವಾಗಿದೆ. ಇತ್ತೀಚೆಗೆ ತುರ್ಕಿಯಲ್ಲಿ ನಡೆದ ವಿದ್ರೋಹವನ್ನು ಇಸ್ಲಾಮೀ ತತ್ವಗಳ ಪ್ರಕಾರ ಸಮರ್ಥಿಸಲು ಸಾಧ್ಯವಿಲ್ಲವಾದರೂ ಅದರ ಪರಿಣಾಮವಾಗಿ ತುರ್ಕಿ ಸರಕಾರ ಕೈಗೊಂಡ ಕ್ರಮಗಳು ದೌರ್ಜನ್ಯಭರಿತವಾಗಿವೆ. ರಾಜಕೀಯವಾಗಿ ಸರಕಾರವನ್ನು ವಿರೋಧಿಸುವ ಗುಂಪುಗಳು ಈ ವಿದ್ರೋಹದಲ್ಲಿ ಭಾಗವಹಿಸದಿದ್ದರೂ ಅವುಗಳ ವಿರುದ್ಧ ಕ್ರಮಗಳು ಜರಗಿಸಲ್ಪಡುತ್ತಿವೆ. ಇವುಗಳನ್ನೆಲ್ಲ ನೋಡಿಯೂ ಮುಸ್ಲಿಮ್ ಆಡಳಿತೆಗಾರರಿಗೆ ವಿವೇಕ ಮೂಡಿ ಬರುವುದಿಲ್ಲ. ಅವರು ಪವಿತ್ರ ಖುರ್‍ಆನಿನ ಉಪದೇಶಗಳ ಬಗ್ಗೆ ಚಿಂತಿಸಲು ಬಯಸುವುದಿಲ್ಲವಾದರೂ, ಮುಸ್ಲಿಮರೆಂದು ಹೇಳಿಕೊಂಡು ಮುಸ್ಲಿಮರಾಗಿರಲು ಬಯಸುವುದಿಲ್ಲವಾದರೂ, ಅವರು ಸಾಮಾನ್ಯ ಬುದ್ಧಿಯನ್ನು ಬಳಸಿಯಾದರೂ ತಮ್ಮ ಕ್ರಮಗಳನ್ನು ಕೈಗೊಳ್ಳಬೇಕಾಗಿತ್ತು. ಆದುದರಿಂದ ನಾವು ಈ ಮುಸ್ಲಿಮ್ ದೇಶಗಳಿಗೋಸ್ಕರ ಬಹಳ ಪ್ರಾರ್ಥಿಸಬೇಕಾಗಿದೆ. ಅಲ್ಲಾಹನು ಅವರಿಗೆ ಬುದ್ಧಿಯನ್ನು ದಯಪಾಲಿಸಲಿ.

ಇನ್ನು ಭಯೋತ್ಪಾದಕ ಗುಂಪುಗಳು ಪಾಶ್ಚಿಮಾತ್ಯ ದೇಶಗಳಲ್ಲಿ ನಿರಪರಾಧಿ ಜನರನ್ನು ಹತ್ಯೆ ಮಾಡುವುದರಲ್ಲಿ ಅತ್ಯಂತ ಹೇಯವಾಗಿ ವರ್ತಿಸಿ ಇಸ್ಲಾಮ್ ಧರ್ಮಕ್ಕೆ ಅಪಕೀರ್ತಿ ಉಂಟುಮಾಡಲು ಆರಂಭಿಸಿವೆ. ಭಯೋತ್ಪಾದಕರಿಂದ ಇಂತಹ ದೌರ್ಜನ್ಯಗಳನ್ನು ಮುಸ್ಲಿಮೇತರ ದೇಶಗಳಲ್ಲಿ ನಡೆಸುವವರು ಇಸ್ಲಾಮ್ ವಿರುದ್ಧ ಶಕ್ತಿಗಳೇ ಆಗಿರಲು ಸಹ ಸಾಧ್ಯತೆಗಳಿವೆ. ಆ ಮೂಲಕ ಅವರು ಇಸ್ಲಾಮಿಗೆ ಅಪಕೀರ್ತಿ ಉಂಟುಮಾಡಲು ಇಚ್ಛಿಸುತ್ತಾರೆ. ಅಲ್ಲದೆ ಭಯೋತ್ಪಾದನೆಗೆ ಗುರಿಯಾದ ದೇಶಗಳಿಗೆ ನೆರವು ನೀಡುವ ಹೆಸರಲ್ಲಿ ಮತ್ತು ಲೋಕವನ್ನು ಭಯೋತ್ಪಾದನೆಯಿಂದ ರಕ್ಷಿಸುವ ಹೆಸರಿನಲ್ಲಿ ತಮ್ಮ ಕಾರ್ಯಕ್ಷೇತ್ರವನ್ನು ಆ ದೇಶಗಳಲ್ಲಿ ಸ್ಥಾಪಿಸಲು ಒಂದು ಹೇತುವಾಗಲು ಹೀಗೆ ಮಾಡಿಸುತ್ತಾ ಇರಬಹುದು.

ಇಸ್ಲಾಮ್ ಧರ್ಮದ ನೈಜ ತತ್ವಗಳೇನೆಂದು ತಿಳಿದುಕೊಂಡವರು ಮನವರಿಕೆ ಮಾಡಿಕೊಳ್ಳಬೇಕಾದುದೇನೆಂದರೆ ಈ ರೀತಿ ನಿರಪರಾಧಿ ಜನರನ್ನು ಕೊಲ್ಲುವುದು, ವಿಮಾನ ನಿಲ್ದಾಣಗಳಲ್ಲೂ ರೈಲ್ವೇ ಸ್ಟೇಷನ್‌ಗಳಲ್ಲೂ ಸಂಚಾರಿಗಳನ್ನೂ ಮಕ್ಕಳನ್ನೂ ಮಹಿಳೆಯರನ್ನೂ ವೃದ್ಧರನ್ನೂ ರೋಗಿಗಳನ್ನೂ ಕೊಲ್ಲುವುದು, ಚರ್ಚ್‌ಗಳಿಗೆ ಪ್ರವೇಶಿಸಿ ಜನರನ್ನೂ ಪಾದರಿಗಳನ್ನೂ ಕೊಲ್ಲುವುದು, ಇಸ್ಲಾಮೀ ಉಪದೇಶಗಳ ಪ್ರಕಾರವಲ್ಲ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಯುದ್ಧ ಮಾಡಲು ಸೈನಿಕರನ್ನು ಕಳುಹಿಸುವಾಗ ಸಹ ಅವರಿಗೆ ಮಾರ್ಗದರ್ಶನ ನೀಡುತ್ತಿದ್ದರು. ಮಹಿಳೆಯರನ್ನೂ ಮಕ್ಕಳನ್ನೂ ವೃದ್ಧರನ್ನೂ ಸನ್ಯಾಸಿಗಳನ್ನೂ ಪಾದರಿಗಳನ್ನೂ ಕೊಲ್ಲಬಾರದೆಂದು, ಆಯುಧ ಎತ್ತದವನಿಗೆ ಮತ್ತು ಮುಸ್ಲಿಮರ ವಿರುದ್ಧ ಯುದ್ಧದಲ್ಲಿ ಭಾಗವಹಿಸದವನಿಗೆ ಯಾವುದೇ ರೀತಿ ಹಾನಿ ಉಂಟುಮಾಡ ಬಾರದೆಂದು ಆಜ್ಞಾಪಿಸುತ್ತಿದ್ದರು. ಅಂತಹ ಜನರನ್ನು ಕೊಲ್ಲುವ ಪ್ರಶ್ನೆಯೇ ಇರುವುದಿಲ್ಲ. ಪವಿತ್ರ ಖುರ್‌ಆನ್ ಉಪದೇಶಗಳ ಪ್ರಕಾರವಾಗಲಿ, ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನಡೆವಳಿಕೆ ಪ್ರಕಾರವಾಗಲಿ, ಇಸ್ಲಾಮಿನ ಖಲೀಫರ ವರ್ತನೆಗಳ ಮೂಲಕವಾಗಲಿ ಅಥವಾ ಸಹಾಬರ(ಪ್ರವಾದಿ ಶಿಷ್ಯರ) ಯಾವುದಾದರೂ ಕೃತ್ಯದಿಂದಾಗಲಿ ಇಂತಹ ದೌರ್ಜನ್ಯ ಮಾಡಿರುವುದು ಸಾಬೀತಾ ಗುವುದಿಲ್ಲ. ಅಲ್ಲಾಹನು ನಮ್ಮ ಧರ್ಮವನ್ನು **ಇಸ್ಲಾಮ್** ಎಂದು ಹೆಸರಿಸಿದ್ದಾನೆ. ಈ ಹೆಸರೇ ಭಯೋತ್ಪಾದನೆ ಮತ್ತು ದೌರ್ಜನ್ಯವನ್ನು ವಿರೋಧಿಸುತ್ತದೆ. ಅದು ಶಾಂತಿ, ಸಮಾಧಾನ ಮತ್ತು ನೆಮ್ಮದಿಯ ಸಂದೇಶ ನೀಡುತ್ತದೆ. ಇಸ್ಲಾಮ್ ಎಂಬ ಪದದ ಅರ್ಥವೇ ಶಾಂತಿಯಿಂದ ಇರುವುದು ಮತ್ತು ಶಾಂತಿ ನೀಡುವುದು ಎಂದಾಗಿದೆ.

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ: **ವಲ್ಲಾಹು ಯದ್‌ಊ ಇಲಾ ದಾರಿಸ್ಸಲಾಮ್–** ಅಲ್ಲಾಹನು ಶಾಂತಿ ಮತ್ತು ಸಮಾಧಾನದ ಮನೆಗೆ ಕರೆಯುತ್ತಿದ್ದಾನೆ. ಒಬ್ಬ ನೈಜ ಮುಸ್ಲಿಮನು ನಮಾಝ್ ಮಾಡುವಾಗ ಅಲ್ಲಾಹನ ದಯೆ ಮತ್ತು ಅವನ ಅನುಗ್ರಹವನ್ನು ಬೇಡುತ್ತಾನೆ. ನಮಾಝ್ ಮಾಡುವ ಒಬ್ಬ ಮುಸ್ಲಿಮನು ತನ್ನನ್ನು ಉದ್ಧಟತನದಿಂದಲೂ ಕೆಟ್ಟ ಕೆಲಸಗಳಿಂದಲೂ ರಕ್ಷಿಸಿಕೊಳ್ಳುತ್ತಾನೆ. ಅಲ್ಲಾಹನು ಹೀಗೆ ಹೇಳಿದ್ದಾನೆ: ನಮಾಝ್ ಕೆಟ್ಟ ಕೃತ್ಯಗಳಿಂದಲೂ ಇಷ್ಟಕರವಲ್ಲದ ಕೃತ್ಯಗಳಿಂದಲೂ ತಡೆಯುತ್ತದೆ. ಸಲಾಮ್ ಹೇಳುವುದನ್ನು ಜಾರಿಗೊಳಿಸಿರಿ ಮತ್ತು ಶಾಂತಿಯನ್ನು ಹರಡಿರಿ ಎಂದು ಇಸ್ಲಾಮ್ ಹೇಳುತ್ತದೆ. ಸಲಾಮ್ ಹೇಳುವುದು ಕೇವಲ ಮುಸ್ಲಿಮರಿಗೆ ಮಾತ್ರ ಎಂದು ಸೀಮಿತಗೊಳಿಸಿಲ್ಲ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಕಾಲದಲ್ಲಿ ಎಲ್ಲರಿಗೂ ಸಲಾಮ್ ಹೇಳಲಾಗುತ್ತಿತ್ತು. ಯಾರಿಗೂ ಅದನ್ನು ಪ್ರತ್ಯೇಕಗೊಳಿಸಿರಲಿಲ್ಲ. ನೀವು ಇಸ್ಲಾಮ್ ಧರ್ಮದ ಯಾವ ಆಜ್ಞೆಯನ್ನು ನೋಡುವುದಾದರೂ ಅದು ಶಾಂತಿಯ ಧರ್ಮವಾಗಿದೆಯೇ ಹೊರತು ಭಯೋತ್ಪಾದನೆಯ ಧರ್ಮವಲ್ಲ ಎಂದು ಸಾಬೀತಾಗುವುದು. ಇಸ್ಲಾಮಿನ ಸುಂದರ ಉಪದೇಶಗಳಿಂದ ಮಾತ್ರ ಲೋಕದ ಹೃದಯವನ್ನು ಜಯಿಸಲು ಸಾಧ್ಯವೇ ಹೊರತು ಭಯೋತ್ಪಾದಕ ಜನರಿಂದ ಮತ್ತು ಈ ಮತಪಂಡಿತರ ಸ್ವಯಂ ನಿರ್ಮಿತ ಉಪದೇಶಗಳಿಂದ ಅದು ಸಾಧ್ಯವಾಗದು. ಆದರೆ ಲೋಕದ ಹೃದಯವನ್ನು ಜಯಿಸುವ ಈ ಮಾರ್ಗವನ್ನು ಅಲ್ಲಾಹನು ಈ ಕಾಲದ ಇಮಾಮರನ್ನಾಗಿ ನಿಯೋಜಿಸಿ ಕಳುಹಿಸಿದವರು ಮಾತ್ರ ತೋರಿಸಿ ಕೊಡಬಲ್ಲರು. ಹಝ್ರತ್ ವಾಗ್ದತ್ತ ಮಸೀಹ್(ಅ) ಒಂದು ಸ್ಥಳದಲ್ಲಿ ಹೀಗೆ ಹೇಳಿದ್ದಾರೆ: ಇಸ್ಲಾಮ್ ತನ್ನ ಉಪದೇಶಗಳನ್ನು ಎರಡು ಭಾಗಗಳನ್ನಾಗಿ ಮಾಡಿದೆ. ಒಂದನೆಯದು **ಹುಖೂಖುಲ್ಲಾಹ್** ಮತ್ತು ಎರಡನೆಯದು **ಹುಖೂಖುಲ್ ಇಬಾದ್.**

**ಹುಖೂಖುಲ್ಲಾಹ್** ಎಂದರೆ ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳು, ಅಲ್ಲಾಹನ ಆರಾಧನೆ ಮಾಡಬೇಕಾದ ಕರ್ತವ್ಯಗಳು. **ಹುಖೂಖುಲ್ ಇಬಾದ್** ಎಂದರೆ ಅಲ್ಲಾಹನ ಸೃಷ್ಟಿಗಳಿಗೆ ಸಲ್ಲಿಸಬೇಕಾದ ಹಕ್ಕುಗಳಾಗಿವೆ. ಅವರೊಂದಿಗೆ ಸಹಾನುಭೂತಿ ಹೊಂದುವುದಾಗಿದೆ. ಒಬ್ಬನು ಬೇರೆ ಧರ್ಮವನ್ನು ಅನುಸರಿಸುವ ಕಾರಣಕ್ಕಾಗಿ ಮಾತ್ರ ಅವನಿಗೆ ಕಷ್ಟ ನೀಡುವುದು ಯಾವತ್ತೂ ಸರಿಯಾದುದಲ್ಲ. ಧಾರ್ಮಿಕ ವ್ಯತ್ಯಾಸ ಬೇರೆಯೇ ವಿಷಯವಾಗಿದೆ. ಸಹಾನುಭೂತಿ ಮತ್ತು ಉತ್ತಮ ನಡೆವಳಿಕೆಗೆ ಅದರೊಂದಿಗೆ ಸಂಬಂಧವಿಲ್ಲ.

ಈ ಉಪದೇಶವನ್ನು ಅನುಸರಿಸಿ ಮುಸ್ಲಿಮರು ಲೋಕದಲ್ಲಿ ಇಸ್ಲಾಮಿನ ವೈಭವವನ್ನು ಪುನಃ ಸ್ಥಾಪಿಸಬಹುದಾಗಿದೆ. ಅವರು ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳನ್ನು ಮತ್ತು ಒಬ್ಬನು ಇನ್ನೊಬ್ಬನಿಗೆ ನೀಡಬೇಕಾದ ಹಕ್ಕುಗಳನ್ನು ಅರಿತುಕೊಳ್ಳಬೇಕು. ಯಾವ ಧರ್ಮದವರು ಎಂದು ಪರಿಗಣಿಸದೆ ಎಲ್ಲ ಮಾನವರಲ್ಲಿ ಪರಸ್ಪರ ಪ್ರೀತಿ ಹುಟ್ಟಿಸಲು ಪ್ರಯತ್ನಿಸಬೇಕು. ದೌರ್ಜನ್ಯದಿಂದ ನಿರಪರಾಧಿಗಳನ್ನು ಕೊಲ್ಲುವುದಕ್ಕೆ ಬದಲಾಗಿ ಇಸ್ಲಾಮ್ ಧರ್ಮದ ಶಾಂತಿ ಮತ್ತು ಸೌಹಾರ್ದದ ಖಡ್ಗದಿಂದ ಹೃದಯಗಳನ್ನು ಗಾಯಗೊಳಿಸಿ ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಸನ್ನಿಧಿಗೆ ಅವರನ್ನು ತರಲು ಪ್ರಯತ್ನಿಸಬೇಕು. ದಾರಿ ತಪ್ಪಿದ ಈ ಜನರು ಇಸ್ಲಾಮಿನ ಹೆಸರಲ್ಲಿ ಮಾಡುವ ಪ್ರತಿಯೊಂದು ಆಕ್ರಮಣ, ನಾವು ನಮ್ಮ ಹೊಣೆಗಾರಿಕೆಗಳನ್ನು ಮೊದಲಿಗಿಂತ ಹೆಚ್ಚಿನ ಮಟ್ಟದಲ್ಲಿ ಈಡೇರಿಸಬೇಕು ಎನ್ನುವುದರ ಬಗ್ಗೆ ಗಮನ ಹರಿಸುತ್ತದೆ ಎಂದು ಅಹ್ಮದಿಯರಾದ ನಾವು ತಿಳಿದುಕೊಳ್ಳಬೇಕು. ಇಸ್ಲಾಮಿಗೆ ಅಪಕೀರ್ತಿ ಉಂಟುಮಾಡುವ ಪ್ರತಿಯೊಂದು ಆಕ್ರಮಣದ ನಂತರ ನಾವು ಲೋಕಕ್ಕೆ ಮನವರಿಕೆ ಮಾಡಿಕೊಡಬೇಕು– ನಮ್ಮ ಧರ್ಮದ ಅಸ್ತಿಭಾರ ಶಾಂತಿ ಮತ್ತು ಸಮಾಧಾನ ಎಂದು. ನಮ್ಮ ಪೈಕಿ ಪ್ರತಿಯೊಬ್ಬನು ಹೀಗೆ ಪ್ರಸ್ತಾಪಿಸಬೇಕು: ಇಸ್ಲಾಮಿನ ಅನುಯಾಯಿ ಎಂದು ಹೇಳುವ ಯಾರಾದರೂ ಶಾಂತಿ ಸಮಾಧಾನಗಳನ್ನು ನಾಶ ಮಾಡುವವ ನಾಗಿದ್ದರೆ ಆ ವ್ಯಕ್ತಿ ಅಥವಾ ಆ ಗುಂಪು ಮಾಡುವ ಕೆಲಸ ತಮ್ಮ ಸ್ವಾರ್ಥಕ್ಕಾಗಿದೆ. ಇಸ್ಲಾಮ್ ಧರ್ಮಕ್ಕೆ ಅದರೊಂದಿಗೆ ಯಾವ ಸಂಬಂಧವೂ ಇರುವುದಿಲ್ಲ. ಇವು ಧರ್ಮ ವಿರುದ್ಧ ಕೆಲಸಗಳಾಗಿದ್ದು ಅವುಗಳ ಹೊಣೆಗಾರಿಕೆ ಅವುಗಳನ್ನು ಮಾಡುವವರ ಮೇಲಿದೆಯೇ

ಹೊರತು ಇಸ್ಲಾಮಿನ ಮೇಲಿಲ್ಲ ಎಂಬುದನ್ನು ನಾವು ಲೋಕಕ್ಕೆ ತಿಳಿಸಿಕೊಡಬೇಕು.

ಇಸ್ಲಾಮ್ ಧರ್ಮದ ವಾಸ್ತವಿಕ ತತ್ವಗಳನ್ನು ಲೋಕಕ್ಕೆ ತಲಪಿಸಲು ನಾವು ಮಾಡಬೇಕಾದ ಕೆಲಸಗಳು ಬಹಳ ಇವೆ. ನಮ್ಮ ಜಮಾಅತ್ ಮೂಲಕ ಲೋಕಕ್ಕೆ ಮೊದಲಿಗಿಂತ ಹೆಚ್ಚಿನ ಮಟ್ಟದಲ್ಲಿ ಇಸ್ಲಾಮಿನ ಬಗ್ಗೆ ಪರಿಚಯವಾಗಿದೆಯಾದರೂ ತೃಪ್ತಿಕರವಾಗಿ ಕೆಲಸವನ್ನು ನಡೆಸಲಾಗಿದೆ ಎಂದು ಹೇಳಲು ನಮಗೆ ಈಗ ಸಾಧ್ಯವಿಲ್ಲ. ವಿರೋಧಗಳಿರುವ ಈ ಕಾಲದಲ್ಲಿ ನಾವು ಜಾಣ್ಮೆಯಿಂದಲೂ ಪರಿಶ್ರಮಪೂರ್ಣವಾಗಿಯೂ ಈ ಕೆಲಸ ಮಾಡಬೇಕಾಗಿದೆ. ಲೋಕದಲ್ಲಿ ಹರಡಲಿರುವ ಧರ್ಮ ಇಸ್ಲಾಮ್ ಎನ್ನುವುದರ ಬಗ್ಗೆ ಸಂಶಯವಿಲ್ಲ– ಇನ್‌ಶಾಅಲ್ಲಾಹ್. ಇಸ್ಲಾಮ್ ಪುನಶ್ಚೇತನ ಗೊಳ್ಳಬೇಕಾದುದು ಅಹ್ಮದಿಯ್ಯತ್ ಮೂಲಕವೇ ಎಂಬುದರ ಬಗ್ಗೆಯೂ ಸಂಶಯವಿಲ್ಲ – ಇನ್‌ಶಾಅಲ್ಲಾಹ್. ಇದು ಅಲ್ಲಾಹನು ನಿರ್ಧರಿಸಿದ್ದಾಗಿದೆ. ಆದರೆ ನಾವು ಪ್ರಯತ್ನ ಮಾಡಬೇಕು ಮತ್ತು ಪ್ರಾರ್ಥನೆ ಮಾಡಬೇಕು. ನಾವು ಈ ಪ್ರಗತಿಯ ದೃಶ್ಯಗಳನ್ನು ನಮ್ಮ ಜೀವಿತ ಕಾಲದಲ್ಲಿಯೇ ಕಾಣುವ ಭಾಗ್ಯ ಲಭಿಸಲಿ. ನಮ್ಮ ಬಲಹೀನತೆಗಳೂ ನಮ್ಮ ಕುಂದು ಕೊರತೆಗಳೂ ಈ ಅಭಿವೃದ್ಧಿಯನ್ನು ನಮ್ಮಿಂದ ದೂರ ಸರಿಸುವಂತಹದಾಗದಿರಲಿ. ನಮ್ಮ ತಪ್ಪುಗಳನ್ನು ಮರೆಮಾಡಲು ಮತ್ತು ಅಲ್ಲಾಹನ ಅನುಗ್ರಹವನ್ನು ಪಡೆಯಲು ನಾವು ಕಷ್ಟಪಟ್ಟು ದುಡಿಯುವುದು ಮತ್ತು ಪ್ರಾರ್ಥಿಸುವುದು ಆವಶ್ಯಕವಾಗಿದೆ. ನಾನು ಹೇಳಿದ ಹಾಗೆ, ಇಸ್ಲಾಮಿಗೆ ವಿರುದ್ಧ ವಾಗಿರುವ ಶಕ್ತಿಗಳು ನಮಗೆ ವಿರುದ್ಧವಾಗಿವೆ. ಮತಪಂಡಿತರೆಂಬ ನಾಮಧಾರಿಗಳ ಹಿಂದೆ ಚಲಿಸುವ ಮುಸ್ಲಿಮರೂ ನಮಗೆ ವಿರುದ್ಧವಾಗಿದ್ದಾರೆ. ಆದರೆ ನಾವು ಪ್ರತಿಯೊಂದು ಭಯವನ್ನು ದೂರಸರಿಸಿ ಹಝ್ರತ್ ವಾಗ್ದತ್ತ ಮಸೀಹರ(ಅ) ಆಗಮನದ ಉದ್ದೇಶ ಲಕ್ಷ್ಯವನ್ನು ಪೂರ್ಣಗೊಳಿಸಲು ಪ್ರಯತ್ನಿಸಬೇಕಾಗಿದೆ.

ಇಂದಿನ ಕಾಲದ ಲೋಕದ ಸ್ಥಿತಿಗಳ ಬಗ್ಗೆ, ಪ್ರತಿಯೊಬ್ಬ ಅಹ್ಮದಿ ಕೆಡುಕುಗಳಿಂದ ರಕ್ಷಣೆ ಪಡೆಯುವ ಬಗ್ಗೆ, ಅಹ್ಮದಿಯಾ ಜಮಾಅತ್ ಲೋಕದಲ್ಲಿ ಪ್ರತಿಯೊಂದು ಸ್ಥಳದಲ್ಲಿ ದುರ್ಜನರ ಆಕ್ರಮಣಗಳಿಂದ ರಕ್ಷಣೆ ಪಡೆಯುವ ಬಗ್ಗೆ ನಾವು ಪ್ರಾರ್ಥಿಸಬೇಕು ಮತ್ತು ದಾನಧರ್ಮಗಳನ್ನು ನೀಡಲು ಗಮನ ಹರಿಸಬೇಕು. ನಾನು ಹೇಳಿದ ಹಾಗೆ ಇಂದು ಲೋಕವು ಕೆಟ್ಟ ಸ್ಥಿತಿಯಿಂದ ಇನ್ನಷ್ಟು ಕೆಟ್ಟ ಸ್ಥಿತಿಗೆ ಹೋಗುತ್ತಿದೆ. ಇಸ್ಲಾಮ್‌ಗೆ ಅಪಕೀರ್ತಿ ಉಂಟುಮಾಡುತ್ತಿರುವ ದುರ್ಜನರ ದುಷ್ಕೃತ್ಯಗಳು ಅವರ ಮೇಲೆಯೇ ಮರಳುವಂತಾಗಲಿ. ಅವರು ದೌರ್ಜನ್ಯಗಳನ್ನೂ ಹಿಂಸಾಚಾರಗಳನ್ನೂ ಮಾಡಿ ಅಲ್ಲಾಹನ ಧರ್ಮವನ್ನು ಅಪಕೀರ್ತಿಗೆ ಗುರಿ ಮಾಡುತ್ತಿದ್ದಾರೆ. ಅಲ್ಲಾಹನು ಅವರನ್ನು ಹಿಡಿಗೂಡುವ ಕ್ರಮಗಳನ್ನು ಬೇಗನೆ ಕೈಗೊಳ್ಳಲಿ ಮತ್ತು ಎಲ್ಲ ವಿಪತ್ತುಗಳನ್ನೂ ಕಷ್ಟಗಳನ್ನೂ ದೂರ ಸರಿಸಲಿ.

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಪ್ರಾರ್ಥನೆಗಳ ಬಗ್ಗೆ ಗಮನ ಹರಿಸುತ್ತಾ ಒಮ್ಮೆ ಹೀಗೆ ಹೇಳಿದ್ದರು: ಯಾರಿಗೋಸ್ಕರ ಪ್ರಾರ್ಥನೆಯ ಬಾಗಿಲು ತೆರೆಯಲ್ಪಟ್ಟಿದೆಯೋ ಆತನಿಗೆ ಅನುಗ್ರಹದ ಬಾಗಿಲು ತೆರೆಯಲ್ಪಟ್ಟಿದೆ. ಅಲ್ಲಾಹನಿಂದ ಬೇಡಿಕೊಳ್ಳುವ ವಿಷಯಗಳಲ್ಲಿ ಅವನ ಆಶ್ರಯವನ್ನು ಬೇಡಿಕೊಳ್ಳುವುದು ಅವನಿಗೆ (ಅಲ್ಲಾಹನಿಗೆ) ಹೆಚ್ಚು ಪ್ರಿಯವಾದುದಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೀಗೆ ಸಹ ಹೇಳಿದರು: ಸಂಭವಿಸಿದ ವಿಪತ್ತಿನ ಕುರಿತು ಮತ್ತು ಸಂಭವಿಸಲಿರುವ ವಿಪತ್ತಿನ ವಿರುದ್ಧ ಪ್ರಾರ್ಥನೆಯು ಪ್ರಯೋಜನಕರವಾಗುತ್ತದೆ. ಆದುದರಿಂದ ಅಲ್ಲಾಹನ ದಾಸರೇ, ನೀವು ಪ್ರಾರ್ಥನೆ ಮಾಡುವುದು ನಿಮಗೆ ಕಡ್ಡಾಯವಾಗಿದೆ.

ಇನ್ನೊಂದು ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೇಳಿದರು: ಪ್ರಾರ್ಥನೆಗಿಂತ ಹೆಚ್ಚು ಗೌರವಾರ್ಹ ವಾದುದು ಅಲ್ಲಾಹನ ಬಳಿ ಬೇರೊಂದಿಲ್ಲ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೀಗೆ ಸಹ ಹೇಳಿದರು: ಪರೀಕ್ಷೆಗಳ ಅಗ್ನಿಯಿಂದ ರಕ್ಷಣೆ ಪಡೆಯಲು ನೀವು ದಾನಧರ್ಮ ನೀಡಿರಿ. ಮುಸ್ಲಿಮರು ದಾನಧರ್ಮ ನೀಡಬೇಕಾದುದು ಅವರಿಗೆ ಕಡ್ಡಾಯ (ಫರ್ಝ್) ಆಗಿದೆ.

ಹಝ್ರತ್ ವಾಗ್ದತ್ತ ಮಸೀಹ್(ಅ) ಒಂದು ಸಂದರ್ಭದಲ್ಲಿ ಹೇಳಿದರು: ಸದಖ ಮತ್ತು ದುಆ ಮೂಲಕ ವಿಪತ್ತು ದೂರ ಸರಿಸಲ್ಪಡುತ್ತದೆ. ಆದರೆ ಪ್ರಾರ್ಥನೆಗಳು ಅಲ್ಲಾಹನಿಂದ ಸ್ವೀಕಾರ ಪಡೆಯಲು ಮನುಷ್ಯನು ತನ್ನಲ್ಲಿ ಪರಿಶುದ್ಧ ಬದಲಾವಣೆಯನ್ನು ಉಂಟುಮಾಡಬೇಕಾದುದು ಆವಶ್ಯಕವಾಗಿದೆ. ಕೆಡುಕಿನಿಂದ ತನ್ನನ್ನು ರಕ್ಷಿಸಿಕೊಳ್ಳದಿದ್ದರೆ ಮತ್ತು ಅಲ್ಲಾಹನು ನಿಗದಿಪಡಿಸಿದ ಹದ್ದುಬಸ್ತು ಗಳನ್ನು ಮೀರಿ ವರ್ತಿಸಿದರೆ ಪ್ರಾರ್ಥನೆಯಿಂದ ಯಾವ ಪರಿಣಾಮವೂ ಉಂಟಾಗಲಾರದು. ಆದುದರಿಂದ ಅಲ್ಲಾಹನು ನಿಗದಿಪಡಿಸಿದ ಹದ್ದುಬಸ್ತುಗಳೊಳಗೆ ಇದ್ದುಕೊಂಡು ಪ್ರಾರ್ಥನೆ ಮತ್ತು ದಾನಧರ್ಮದ ಬಗ್ಗೆ ಹೆಚ್ಚು ಪ್ರಯತ್ನ ಮಾಡಬೇಕಾಗಿದೆ. ಆ ಮೂಲಕ ನಾವು ಅಲ್ಲಾಹನ ಅನುಗ್ರಹವನ್ನು ಗಳಿಸುತ್ತಾ ಮುಂದುವರಿಯುವೆವು. ಹಝ್ರತ್ ವಾಗ್ದತ್ತ ಮಸೀಹ್(ಅ) ಒಂದು ಸಂದರ್ಭದಲ್ಲಿ ಪ್ರಾರ್ಥನೆ ಬಗ್ಗೆ ನಮ್ಮ ಗಮನ ಹರಿಸುತ್ತಾ ಹೇಳಿದರು: ನಾನು ಯಾವಾಗಲೂ ಪ್ರಾರ್ಥನೆ ಮಾಡುತ್ತಾ ಇರುತ್ತೇನೆ. ನೀವು ಸಹ ಯಾವಾಗಲೂ ಪ್ರಾರ್ಥಿಸುತ್ತಾ ಇರಬೇಕಾದುದು ಆವಶ್ಯಕವಾಗಿದೆ. ನೀವು ನಮಾಝ್ ಮಾಡುತ್ತಾ ಇರಬೇಕು. ತೌಬ ದುಆ ಸಹ ಮಾಡುತ್ತಾ ಇರಬೇಕು. ನೀವು ಈ ಸ್ಥಿತಿಯಲ್ಲಿದ್ದರೆ ಅಲ್ಲಾಹನು ನಿಮ್ಮನ್ನು ರಕ್ಷಿಸುವನು. ಮನೆಯಲ್ಲಿ ಒಬ್ಬನಾದರೂ ಹೀಗೆ ಇದ್ದಲ್ಲಿ ಅಲ್ಲಾಹನು ಅವನ ಕಾರಣದಿಂದ ಮನೆಯಲ್ಲಿರುವ ಎಲ್ಲರನ್ನೂ ಸಂರಕ್ಷಿಸುವನು. ಅಲ್ಲಾಹನೊಂದಿಗೆ ವಿಶಿಷ್ಟವಾಗಿ ವಿಶ್ವಾಸಹೊಂದಿದವರ ಕಡೆಗೆ ಅಲ್ಲಾಹನು ಗಮನಿಸುತ್ತಾನೆ ಮತ್ತು ಅವರನ್ನು ಸಂರಕ್ಷಿಸುತ್ತಾನೆ. ಅಲ್ಲಾಹನು ಯಾವುದೇ ಸತ್ಯವಂತನನ್ನು ಕೈ ಬಿಡುವುದಿಲ್ಲ. ಲೋಕವಿಡೀ ಅವನ ಶತ್ರುವಾದರೂ ಅವನಿಗೆ ಯಾವುದೇ ಹಾನಿಯುಂಟುಮಾಡಲು ಸಾಧ್ಯವಾಗಲಾರದು. ಅಲ್ಲಾಹನು ಬಹಳ ಶಕ್ತಿ ಸಾಮರ್ಥ್ಯ ಹೊಂದಿದವನಾಗಿದ್ದಾನೆ. ಮನುಷ್ಯನು ತನ್ನ ವಿಶ್ವಾಸದ ಶಕ್ತಿಯ ಕಾರಣದಿಂದ ಅಲ್ಲಾಹನ ಸಂರಕ್ಷಣೆಗೆ ಅಧೀನನಾಗುವಾಗ ಅಲ್ಲಾಹನ ಶಕ್ತಿ ಸಾಮರ್ಥ್ಯಗಳ

ಅದ್ಭುತಗಳನ್ನು ಅವನು ಕಾಣುತ್ತಾನೆ. ಅನಂತರ ಆ ಮನುಷ್ಯನಿಗೆ ಹೀನಸ್ಥಿತಿ ಉಂಟಾಗಲಾರದು. ನೆನಪಿಡಿರಿ, ಅಲ್ಲಾಹನು ಬಲಶಾಲಿಗಳಲ್ಲಿ ಬಲಿಶಾಲಿಯಾಗಿದ್ದಾನೆ. ಅವನು ತಾನು ಉದ್ದೇಶಿಸಿದುದನ್ನು ಮಾಡಬಲ್ಲವನಾಗಿದ್ದಾನೆ. ಆದುದರಿಂದ ನೀವು ಸತ್ಯ ಹೃದಯದೊಂದಿಗೆ ನಮಾಝ್ ಮಾಡಿರಿ. ಪ್ರಾರ್ಥನೆಯಲ್ಲಿ ನಿರತರಾಗಿರಿ. ನಿಮ್ಮ ಎಲ್ಲ ಸಂಬಂಧಿಕರಿಗೆ ಇದನ್ನೇ ಉಪದೇಶಿಸಿರಿ. ಪೂರ್ಣವಾಗಿ ಅಲ್ಲಾಹನ ಕಡೆಗೆ ಬಾಗಿದರೆ ಯಾರಿಗೂ ಯಾವ ಹಾನಿಯೂ ಉಂಟಾಗಲಾರದು. ಹಾನಿ ಉಂಟಾಗುವುದಕ್ಕೆ ಕಾರಣ ಪಾಪಕೃತ್ಯವಾಗಿದೆ.

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಕೆಲವು ಪ್ರಾರ್ಥನೆಗಳನ್ನು ಕಲಿಸಿದ್ದಾನೆ. ಆ ಪ್ರಾರ್ಥನೆಗಳನ್ನು ಮನವರಿಕೆ ಮಾಡಿಕೊಂಡು ಮಾಡಬೇಕು. ಹಝ್ರತ್ ವಾಗ್ದತ್ತ ಮಸೀಹ್(ಅ) ಈ ಕೆಳಗಿನ ಪ್ರಾರ್ಥನೆ ಮಾಡುವ ಬಗ್ಗೆ ಬಹಳ ಗಮನ ಸೆಳೆದಿದ್ದಾರೆ:

رَبَّنَا آتِنَا فِي الدُّنْيَا حَسَنَةً وَفِي الْآخِرَةِ حَسَنَةً وَقِنَا عَذَابَ النَّارِ

**ರಬ್ಬನಾ ಆತಿನಾ ಫಿದ್ದುನ್‌ಯಾ ಹಸನತನ್ ವಫಿಲ್ ಆಖಿರತಿ ಹಸನತನ್ ವಖಿನಾ ಅಧ್ಹಾಬನ್ನಾರ್.**

ನಮ್ಮ ಪ್ರಭೂ, ನಮಗೆ ಇಹಲೋಕ ಜೀವನದಲ್ಲಿ ಒಳಿತನ್ನು ಅನುಗ್ರಹಿಸು. ಹಾಗೆಯೇ ಪರಲೋಕ ಜೀವನದಲ್ಲಿ ಸಹ ಒಳಿತನ್ನು ದಯಪಾಲಿಸು ಮತ್ತು ನರಕ ಯಾತನೆಯಿಂದ ನಮ್ಮನ್ನು ರಕ್ಷಿಸು. ಹಝ್ರತ್ ವಾಗ್ದತ್ತ ಮಸೀಹ್(ಅ) ಹೀಗೆ ಹೇಳುತ್ತಾರೆ: ಮನುಷ್ಯನಿಗೆ ತನ್ನ ಜೀವಿತದ ಸುಖಕ್ಕಾಗಿ ಎರಡು ವಸ್ತುಗಳ ಆವಶ್ಯಕತೆ ಇದೆ. ಒಂದನೆಯದು, ಲೋಕದ ತನ್ನ ಸೀಮಿತ ಜೀವಿತದ ಕಾಲದಲ್ಲಿ ಸಂಭವಿಸುವ ಕಷ್ಟ ವಿಪತ್ತುಗಳಿಂದ ರಕ್ಷಣೆ ಪಡೆಯುವುದು. ಎರಡನೆಯದಾಗಿ, ಅಲ್ಲಾಹನಿಂದ ದೂರ ಸರಿಸುವ ಅಶ್ಲೀಲ ಕೃತ್ಯಗಳಿಂದ ತನ್ನನ್ನು ರಕ್ಷಿಸಿಕೊಳ್ಳುವುದಾಗಿದೆ.

ಇನ್ನೊಂದು ಪ್ರಾರ್ಥನೆ ಹೀಗಿದೆ:

رَبَّنَا اغْفِرْ لَنَا ذُنُوبَنَا وَإِسْرَافَنَا فِي أَمْرِنَا وَثَبِّتْ أَقْدَامَنَا وَانْصُرْنَا عَلَى الْقَوْمِ الْكَافِرِينَ

**ರಬ್ಬನಗ್‌ಫಿರ್‌ಲನಾ ಧುನೂಬನಾ ವ ಇಸ್‌ರಾಫನಾ ಫೀ ಅಮ್‌ರಿನಾ ವ ಸಬ್ಬಿತ್ ಅಖ್‌ದಾಮನಾ ವನ್‌ಸುರ್‌ನಾ ಅಲಲ್ ಖೌಮಿಲ್ ಕಾಫಿರೀನ್.**

ನಮ್ಮ ಪ್ರಭೂ, ನಮ್ಮ ಪಾಪಗಳನ್ನೂ ನಾವು ಮಾಡಿದ ತಪ್ಪುಗಳನ್ನೂ ನಮಗೆ ಕ್ಷಮಿಸಿ ಕೊಡು. ನಮ್ಮ ಪಾದಗಳನ್ನು ಸ್ಥಿರಪಡಿಸು. ಅವಿಶ್ವಾಸಿಗಳ ವಿರುದ್ಧ ನಮಗೆ ಸಹಾಯವನ್ನು ನೀಡು.

ಹಝ್ರತ್ ವಾಗ್ದತ್ತ ಮಸೀಹ್(ಅ) ಹೇಳುತ್ತಾರೆ: ಅಲ್ಲಾಹನು ಕ್ಷಮಿಸುವವನಾಗದಿರುತ್ತಿದ್ದರೆ ಇಂತಹ ಪ್ರಾರ್ಥನೆ ಮಾಡಬೇಕೆಂದು ಕಲಿಸಿ ಕೊಡುತ್ತಿರಲಿಲ್ಲ.

ಇನ್ನೊಂದು ಪ್ರಾರ್ಥನೆ ಹೀಗಿದೆ:

رَبِّ إِنِّي لِمَا أَنْزَلْتَ إِلَيَّ مِنْ خَيْرٍ فَقِيرٌ

**ರಬ್ಬಿ ಇನ್ನೀ ಲಿಮಾ ಅನ್‌ಝಲ್‌ತ ಇಲೈಯ್ಯ ಮಿನ್ ಖೈರಿನ್ ಫಖೀರ್.**

ಓ ನನ್ನ ಪ್ರಭೂ, ನೀನು ನಿನ್ನ ಅನುಗ್ರಹದಿಂದ ನನಗೆ ಏನನ್ನು ದಯಪಾಲಿಸಿದರೂ ನಾನದರ ಆವಶ್ಯಕತೆಯುಳ್ಳವನಾಗಿದ್ದೇನೆ.

ಇವಲ್ಲದೆ ಪವಿತ್ರ ಖುರ್‌ಆನ್‌ನಲ್ಲಿ ಇನ್ನೂ ಅನೇಕ ಪ್ರಾರ್ಥನೆಗಳಿವೆ. ಅವುಗಳನ್ನು ಸಹ ಅಲ್ಲಾಹನ ಅನುಗ್ರಹಗಳನ್ನು ಗಳಿಸಲು ಮಾಡುತ್ತಾ ಇರಬೇಕು. ಹಝ್ರತ್ ವಾಗ್ದತ್ತ ಮಸೀಹ್(ಅ) ಹೇಳಿರುವುದೇನೆಂದರೆ, ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಈ ಪ್ರಾರ್ಥನೆಗಳನ್ನು ಪ್ರಸ್ತಾಪಿಸಿರುವುದು ಏಕೆಂದರೆ ಮನುಷ್ಯನು ನಿಷ್ಠೆಯಿಂದ ಅಲ್ಲಾಹನನ್ನು ಪ್ರಾರ್ಥಿಸಿದರೆ ಅವನು ಪ್ರಾರ್ಥನೆಗಳನ್ನು ಸ್ವೀಕರಿಸುವನು.

ಇನ್ನು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪ್ರಾರ್ಥನೆಗಳಿವೆ. ಹಝ್ರತ್ ವಾಗ್ದತ್ತ ಮಸೀಹ್‌ರ(ಅ) ಪ್ರಾರ್ಥನೆಗಳು ಸಹ ಇವೆ. ಒಂದು ಪ್ರಾರ್ಥನೆಯ ಬಗ್ಗೆ ಆ ಪ್ರಾರ್ಥನೆಯನ್ನು ಅಲ್ಲಾಹನೇ ತನಗೆ ಕಲಿಸಿರುವುದಾಗಿ ಹಝ್ರತ್ ವಾಗ್ದತ್ತ ಮಸೀಹ್(ಅ) ಹೇಳಿದ್ದಾರೆ. ಅದು ಹೀಗಿದೆ:

رب كل شيء خادمك رب فاحفظني وانصرني وارحمني

**ರಬ್ಬಿ ಕುಲ್ಲು ಶೈಯಿನ್ ಖಾದಿಮುಕ ರಬ್ಬಿ ಫಹ್‌ಫಝ್‌ನೀ ವನ್‌ಸುರ್‌ನೀ ವರ್ ಹಮ್‌ನೀ.**

ನನ್ನ ಪ್ರಭೂ, ಎಲ್ಲ ವಸ್ತುಗಳು ನಿನ್ನ ಸೇವಕರಾಗಿವೆ. ನನ್ನ ಪ್ರಭೂ, ನನ್ನನ್ನು ರಕ್ಷಿಸು, ನನಗೆ ಸಹಾಯ ನೀಡು, ನನ್ನ ಮೇಲೆ ದಯೆದೋರು. ಹಝ್ರತ್ ವಾಗ್ದತ್ತ ಮಸೀಹ್(ಅ) ಹೇಳುತ್ತಾರೆ: ಈ ದುಆ **ಇಸ್‌ಮೆ ಅಲ್‌ಝುಮ್** ಆಗಿದೆ. ಈ ಪ್ರಾರ್ಥನೆ ಮಾಡುವವನು ಪ್ರತಿಯೊಂದು ವಿಪತ್ತಿನಿಂದ ರಕ್ಷಿಸಲ್ಪಡುವನು.

ಅಲ್ಲಾಹನು ಜಮಾಅತನ್ನು ಸಾಮೂಹಿಕವಾಗಿಯೂ ವೈಯಕ್ತಿಕವಾಗಿ ವ್ಯಕ್ತಿಗಳನ್ನೂ ಪ್ರತಿಯೊಂದು ಕೆಡುಕಿನಿಂದ ರಕ್ಷಿಸಲಿ. ಶತ್ರುಗಳ ಕೆಡುಕು ಅವರ ಮೇಲೆಯೇ ಮರಳಿ ಎರಗಲಿ. ಮುಸ್ಲಿಮರಿಗೆ ಬುದ್ಧಿ ಲಭಿಸಲಿ. ಅವರು ಅಲ್ಲಾಹನು ಕಳುಹಿಸಿದವರ ಶಬ್ದವನ್ನು ಆಲಿಸಿ ಏಕ ಸಮುದಾಯವಾಗಿ ಇಸ್ಲಾಮಿನ ಶಾಂತಿಭರಿತ ಸುಂದರ ತತ್ವಗಳನ್ನು ಲೋಕದಲ್ಲಿ ಸ್ಥಾಪಿಸುವವರೂ ಹರಡುವವರೂ ಆಗಲಿ – ಆಮೀನ್.

**LOVE FOR ALL - HATRED FOR NONE**

**ಎಲ್ಲರೊಂದಿಗೆ ಪ್ರೀತಿ ಯಾರೊಂದಿಗೂ ದ್ವೇಷವಿಲ್ಲ**

# ಜಾಗತಿಕ ಅಸ್ತವ್ಯಸ್ತತೆಯ ಕಾಲದಲ್ಲಿ ಶಾಂತಿ ಸ್ಥಾಪನೆಗಿರುವ ಕೀಲಿಗೈಗಳು




**2015 ನವೆಂಬರ್ ದಿನಾಂಕ 23ರಂದು ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋಚ್ಚ ನೇತಾರ ಮತ್ತು ಪಂಚಮ ಖಲೀಫರು ಜಪಾನಿನ ಟೋಕಿಯೋ ನಗರದಲ್ಲಿ ಜರಗಿಸಲಾದ ಸ್ವಾಗತ ಸಮಾರಂಭದಲ್ಲಿ ಮಾಡಿದ ಭಾಷಣ. ತನ್ನ ಭಾಷಣದಲ್ಲಿ ಖಲೀಫರು 70 ವರ್ಷಗಳ ಮೊದಲು ಹಿರೋಶಿಮಾ ಮತ್ತು ನಾಗಸಾಕಿ ನಗರಗಳ ಮೇಲೆ ನಡೆದ ಅಣ್ವಾಯುಧ ದಾಳಿ ಬಗ್ಗೆ ಪ್ರಸ್ತಾಪಿಸಿ ಅಂತಹ ದುರಂತಗಳು ಭವಿಷ್ಯದಲ್ಲಿ ನಡೆಯುವುದನ್ನು ಹೇಗೆ ತಡೆಯಬಹುದೆಂದು ಹೇಳಿದರು.**

ಸಾಂಪ್ರದಾಯಿಕ ಪ್ರಾರ್ಥನೆಗಳನ್ನು ಮಾಡಿದ ನಂತರ ಹಝ್ರತ್ ಖಲೀಫರು ಹೀಗೆ ಹೇಳಿದರು: ಎಲ್ಲ ಗಣ್ಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹಿ ವಬರಕಾತುಹು– ನಿಮಗೆ ಅಲ್ಲಾಹನಿಂದ ಶಾಂತಿ ಮತ್ತು ಅನುಗ್ರಹ ಸುರಿಸಲ್ಪಡಲಿ.

ಮೊದಲನೆಯದಾಗಿ, ನಮ್ಮ ಆಹ್ವಾನವನ್ನು ಸ್ವೀಕರಿಸಿ ಇಲ್ಲಿಗೆ ಆಗಮಿಸಿದ ಎಲ್ಲ ಅತಿಥಿಗಳಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ. ನಾವು ಈಗ ಅತ್ಯಂತ ಅಸ್ಥಿರವೂ ಭಯಾನಕವೂ ಆಗಿರುವ ಕಾಲದಲ್ಲಿ ಜೀವಿಸುತ್ತಿದ್ದೇವೆ. ಲೋಕದ ಸ್ಥಿತಿ ಬಹಳ ಆತಂಕದಾಯಕವಾಗಿದೆ. ಸಂಘರ್ಷಗಳು ಮತ್ತು ಅಸ್ತವ್ಯಸ್ತತೆಗಳು ಲೋಕವನ್ನು ಹಾಳುಗೆಡವುತ್ತಿದ್ದು ಜಾಗತಿಕ ಶಾಂತಿ ಮತ್ತು ಭದ್ರತೆಗೆ ಬೆದರಿಕೆ ಒಡ್ಡುತ್ತಿದೆ.

ನಾವು ಮುಸ್ಲಿಮ್ ಲೋಕದ ಕಡೆಗೆ ನೋಡುವಾಗ ಅನೇಕ ಮುಸ್ಲಿಮ್ ದೇಶಗಳಲ್ಲಿ ಸರಕಾರಗಳು ತಮ್ಮ ಪ್ರಜೆಗಳ ವಿರುದ್ಧ ಕ್ರೌರ್ಯಭರಿತ ಯುದ್ಧ ಮಾಡುವುದರಲ್ಲಿ ನಿರತವಾಗಿವೆ. ರಕ್ತಪಾತ ಮತ್ತು ನಿಷ್ಕರುಣ ಹಿಂಸಾಚಾರ ಆ ದೇಶಗಳ ರಚನೆಯನ್ನೇ ನಾಶಗೊಳಿಸುತ್ತಿವೆ. ಭಯೋತ್ಪಾದಕ ಗುಂಪುಗಳು ಸರಕಾರಿ ಆಡಳಿತೆ ನಿಷ್ಕ್ರಿಯವಾಗಿರುವ ಪ್ರದೇಶಗಳನ್ನು ವಶಪಡಿಸಿಕೊಂಡು ಅಲ್ಲಿ ತಮ್ಮ ತಥಾಕಥಿತ ಸರಕಾರಗಳನ್ನು ಸ್ಥಾಪಿಸಿ ಆಳುತ್ತಿವೆ. ಅವರು ಅತ್ಯಂತ ಹೇಯ ವಿಧಾನದಲ್ಲಿ ವರ್ತಿಸಿ ಅತ್ಯಂತ ಬರ್ಬರ ಕ್ರೌರ್ಯಭರಿತ ಕೃತ್ಯಗಳನ್ನು ತಮ್ಮ ದೇಶಗಳಲ್ಲಿ ನಡೆಸುತ್ತಿದ್ದಾರೆ. ಅವರು ಈಗ ಯುರೋಪನ್ನೂ ತಲಪಿದ್ದಾರೆ. ಅವರ ಕ್ರೌರ್ಯ ಕೃತ್ಯಗಳ ಇತ್ತೀಚೆಗಿನ ಉದಾಹರಣೆ ಪ್ಯಾರಿಸ್ ನಗರದಲ್ಲಿ ಅವರು ನಡೆಸಿದ ಆಕ್ರಮಣವಾಗಿದೆ.

ಪೂರ್ವ ಯುರೋಪಿನಲ್ಲಿ ರಶ್ಯ ಮತ್ತು ಉಕ್ರೈನ್ ಮತ್ತು ಇತರ ಯುರೋಪಿಯನ್ ದೇಶಗಳೊಂದಿಗೆ ಸಂಘರ್ಷ ಪ್ರಜ್ವಲಿಸುತ್ತಾ ಇದೆ. ಇದಲ್ಲದೆ ಇತ್ತೀಚೆಗೆ ಅಮೇರಿಕದ ಯುದ್ಧ ಹಡಗು ದಕ್ಷಿಣ ಚೀನಾ ಸಮುದ್ರವನ್ನು ಅಕ್ರಮ ಪ್ರವೇಶ ಮಾಡಿದ ಬಗ್ಗೆ ಯುನೈಟೆಡ್ ಸ್ಟೇಟ್ಸ್ ಮತ್ತು ಚೀನಾ ಮಧ್ಯೆ ಬಿಗುವಿನ ಪರಿಸ್ಥಿತಿ ವರ್ಧಿಸಿದೆ. ವಿವಾದಿತ ದ್ವೀಪಗಳ ಬಗ್ಗೆ ಚೀನಾ ಮತ್ತು ಜಪಾನ್ ದೇಶಗಳ ಮಧ್ಯೆ ಪ್ರಾದೇಶಿಕ ಸಂಘರ್ಷ ದೀರ್ಘ ಕಾಲದಿಂದ ಜಾರಿಯಲ್ಲಿದೆ.

ಕಾಶ್ಮೀರಕ್ಕೆ ಸಂಬಂಧಿಸಿ ಭಾರತ ಮತ್ತು ಪಾಕಿಸ್ಥಾನ ಮಧ್ಯೆ ಜಗಳ ಮುಂದುವರಿಯುತ್ತಾ ಇದೆ. ಅದು ಕೊನೆಗೊಳ್ಳುವ ಚಿಹ್ನೆಗಳು ಕಾಣುವುದಿಲ್ಲ. ಇದೇ ರೀತಿ ಇಸ್ರಾಯೇಲ್ ಮತ್ತು ಫೆಲೆಸ್ತೀನ್ ಮಧ್ಯೆ ಪ್ರಕ್ಷುಬ್ಧತೆ ಆ ಪ್ರದೇಶದ ಶಾಂತಿಯನ್ನು ನಾಶಪಡಿಸಿದೆ. ಆಫ್ರಿಕದಲ್ಲಿ ಭಯೋತ್ಪಾದಕ ಗುಂಪುಗಳು ಕೆಲವು ಪ್ರದೇಶಗಳಲ್ಲಿ ಅಧಿಕಾರ ಗಳಿಸಿದೆ. ಅವರು ಅಲ್ಲಿ ವ್ಯಾಪಕವಾಗಿ ನಾಶವನ್ನು ಮಾಡುತ್ತಿದ್ದಾರೆ.

ನಾನು ಕೇವಲ ಕೆಲವು ವಿಷಯಗಳನ್ನು ಮಾತ್ರ ಪ್ರಸ್ತಾಪಿಸಿದ್ದೇನೆ. ಲೋಕದಲ್ಲಿ ಬೇರೆ ಅನೇಕ ಅಶಾಂತಿ ಮತ್ತು ಕ್ಷೋಭೆಯ ಉದಾಹರಣೆಗಳಿವೆ. ಆದುದರಿಂದ ನಾವು ತೀರ್ಮಾನಿಸಬಹುದಾದ ವಿಷಯವೇನೆಂದರೆ, ಲೋಕವು ಈಗ ಹಿಂಸಾಚಾರ ಮತ್ತು ಅವ್ಯವಸ್ಥೆಯಿಂದ ಆವರಿಸಲ್ಪಡುತ್ತಿದೆ. ಆಧುನಿಕ ಲೋಕದಲ್ಲಿ ಹಿಂದಿನ ಶತಮಾನಗಳಿಗಿಂತ ಹೆಚ್ಚಿನ ಮಟ್ಟದಲ್ಲಿ ಯುದ್ಧದ ಸಾಧ್ಯತೆಗಳು ಇವೆ. ಲೋಕದ ಒಂದು ಭಾಗದಲ್ಲಿ ಪ್ರಾರಂಭವಾಗುವ ಸಂಘರ್ಷ ಅಲ್ಲಿಗೆ ಸೀಮಿತವಾಗಿರುವುದಿಲ್ಲ. ಅದರ ಪರಿಣಾಮ ವ್ಯಾಪಕವಾಗಿ ಹಬ್ಬುತ್ತದೆ.

ಸಂಪರ್ಕ ಮಾಧ್ಯಮಗಳ ಆಧಿಕ್ಯ ಮತ್ತು ತಕ್ಷಣ ವಾರ್ತಾವಿನಿಮಯದ ಅನುಕೂಲತೆಗಳು ಲೋಕವನ್ನು ಒಂದು ಜಾಗತಿಕ ಗ್ರಾಮವಾಗಿ ಪರಿವರ್ತಿಸಿದೆ. ಹಿಂದಿನ ಕಾಲದಲ್ಲಿ ಒಂದು ಯುದ್ಧವು ಅದರಲ್ಲಿ ನೇರವಾಗಿ ಭಾಗವಹಿಸುವ ತಂಡಗಳಿಗೆ ಸೀಮಿತವಾಗಿದ್ದಿತು. ಆದರೆ ಈಗ ಪ್ರತಿಯೊಂದು ಸಂಘರ್ಷದ ಪರಿಣಾಮ ಜಾಗತಿಕವಾಗಿರುತ್ತದೆ. ಪ್ರತಿಯೊಂದು ಸಂಘರ್ಷ ಮತ್ತು ಯುದ್ಧದ ಪರಿಣಾಮ ವಾಸ್ತವಿಕವಾಗಿಯೂ ಜಾಗತಿಕವಾಗಿರುತ್ತದೆ. ವಾಸ್ತವಿಕವಾಗಿ, ಹಲವು ವರ್ಷಗಳಿಂದ ನಾನು ಲೋಕಕ್ಕೆ ಎಚ್ಚರಿಕೆ ನೀಡುತ್ತಿದ್ದೇನೆ– ಒಂದು ಪ್ರದೇಶದಲ್ಲಿ ಪ್ರಾರಂಭವಾದ ಯುದ್ಧದ ದುಷ್ಪರಿಣಾಮಗಳು ಲೋಕದ ಇತರ ಭಾಗಗಳ ಶಾಂತಿ ಮತ್ತು ಸೌಹಾರ್ದವನ್ನು ಕೆಡಿಸುವುದೆಂದು.

ಇಪ್ಪತ್ತನೇ ಶತಮಾನದಲ್ಲಿ ನಡೆದ ಎರಡು ಜಾಗತಿಕ ಯುದ್ಧಗಳ ಚರಿತ್ರೆಯ ಕಡೆಗೆ ನೋಡುವುದಾದರೆ, ಆ ಕಾಲಘಟ್ಟದಲ್ಲಿ ಲಭ್ಯವಾಗಿದ್ದ ಆಯುಧಗಳು ಅಭಿವೃದ್ಧಿಗೊಂಡ ಇಂದಿನ ಮಾರಕ ಶಸ್ತ್ರಗಳ ಸಮೀಪ ಕೂಡ ಬರಲಾರವು. ಹೀಗಿದ್ದರೂ ದ್ವಿತೀಯ ಜಾಗತಿಕ ಯುದ್ಧದಲ್ಲಿ ಮಾತ್ರ ಎಪ್ಪತ್ತು ಮಿಲಿಯ ಜನರು ಕೊಲ್ಲಲ್ಪಟ್ಟರು ಎಂದು ವರದಿಯಾಗಿದೆ. ಹೀಗೆ ಕೊಲ್ಲಲ್ಪಟ್ಟವರಲ್ಲಿ ಬಹುಸಂಖ್ಯಾತರು ನಿಷ್ಕಳಂಕ ನಾಗರಿಕರಾಗಿದ್ದರು. ಆದುದರಿಂದ ಇಂದಿನ ಕಾಲದಲ್ಲಿ ಸಂಭವಿಸಲಿರುವ ನಾಶದ ಪರಿಮಾಣ ಊಹಾತೀತವಾಗಿರುವುದು.

ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಯುನೈಟೆಡ್ ಸ್ಟೇಟ್ಸ್ ಅಣು ಆಯುಧಗಳನ್ನು ಹೊಂದಿತ್ತು. ಅವು ಅತ್ಯಂತ ವಿನಾಶಕಾರಿಗಳಾಗಿದ್ದರೂ ಇಂದಿನ ಕಾಲದ ಅಣು ಆಯುಧಗಳ ಶಕ್ತಿಗೆ ಹೋಲಿಸಿದರೆ ಅವುಗಳ ಶಕ್ತಿ ಏನೂ ಇಲ್ಲ. ಇನ್ನೊಂದು ವಿಷಯವೇನೆಂದರೆ, ಇಂದಿನ ಕಾಲದಲ್ಲಿ ಪ್ರಮುಖ ಶಕ್ತಿಶಾಲಿ ರಾಷ್ಟ್ರಗಳು ಮಾತ್ರವಲ್ಲ ಅನೇಕ ಚಿಕ್ಕ ದೇಶಗಳು ಕೂಡ ಅಣು ಆಯುಧಗಳನ್ನು ಹೊಂದಿವೆ.

ಪ್ರಾಯಶಃ ಪ್ರಮುಖ ಶಕ್ತಿ ರಾಷ್ಟ್ರಗಳು ಅಣು ಆಯುಧಗಳನ್ನು ತಮ್ಮನ್ನು ಆಕ್ರಮಿಸುವವರಿಗೆ ತಡೆಯೊಡ್ಡಲು ಬಳಸುತ್ತಿರಬಹುದಾದರೂ ಚಿಕ್ಕ ದೇಶಗಳು ಇಂತಹ ಆತ್ಮ ನಿಯಂತ್ರಣವನ್ನು ಕಾಪಾಡುವವೆಂಬುದಕ್ಕೆ ಖಾತರಿ ಇರುವುದಿಲ್ಲ. ಈ ದೇಶಗಳು ಎಂದೂ ಅಣು ಆಯುಧ ಬಳಸಲಾರದೆಂದು ಭಾವಿಸಬಾರದು. ಇದರಿಂದ ತಿಳಿಯುವುದೇನೆಂದರೆ, ಲೋಕವು ವಿನಾಶದ ಅಂಚಿನಲ್ಲಿದೆ.

ದ್ವಿತೀಯ ಮಹಾಯುದ್ಧದ ಅಂತ್ಯಕಾಲದಲ್ಲಿ ನಿಮ್ಮ ದೇಶ ಅತ್ಯಂತ ಭಯಾನಕ ವಿನಾಶವನ್ನು ಮತ್ತು ದುಃಖವನ್ನು ಅನುಭವಿಸಿತು. ನಿಮ್ಮ ದೇಶದ ಲಕ್ಷಗಟ್ಟಲೆ ಜನರು ನಿರ್ದಯವಾಗಿ ಕೊಲ್ಲಲ್ಪಟ್ಟರು. ನಿಮ್ಮ ಎರಡು ನಗರಗಳು ಅಣು ಬಾಂಬು ವರ್ಷಿಸಿ ನಾಶಗೊಳಿಸಲ್ಪಟ್ಟು ಮಾನವೀಯತೆಗೆ ನಾಚಿಕೆ ಉಂಟುಮಾಡಲ್ಪಟ್ಟವು.

ಇಂತಹ ವಿಧ್ವಂಸಕರ ದಾರುಣ ದುರಂತವನ್ನು ಕಂಡು ಅನುಭವಿಸಿದ ಜಪಾನಿ ಜನತೆ ಅಂತಹ ಆಕ್ರಮಣ ಪುನಃ ಜಪಾನಿನಲ್ಲಿ ಅಥವಾ ಲೋಕದ ಬೇರೆ ಎಲ್ಲಿಯಾದರೂ ಸಂಭವಿಸುವುದನ್ನು ಎಂದೂ ಇಚ್ಛಿಸಲಾರದು. ಅಣು ಆಯುಧ ಬಳಸಿ ಮಾಡಿದ ಯುದ್ಧದ ಭಯಾನಕ ವಿನಾಶದ ಬಗ್ಗೆ ವಾಸ್ತವಿಕವಾಗಿ ಮನವರಿಕೆ ಮಾಡಿಕೊಂಡ ಜನತೆ ನೀವಾಗಿರುವಿರಿ. ಅಂತಹ ಆಯುಧಗಳ ಬಳಕೆಯಿಂದ ಸಂಭವಿಸಲಿರುವ ದೂರಗಾಮಿ ಪರಿಣಾಮ ಒಂದು ಪೀಳಿಗೆಗೆ ಸೀಮಿತವಾಗದೆ ಮುಂದಿನ ಪೀಳಿಗೆಗಳಲ್ಲಿ ಮುಂದುವರಿಯುವುದು ಎಂದು ತಿಳಿದುಕೊಂಡ ಜನತೆ ನೀವಾಗಿರುವಿರಿ. ಅಣು ಆಯುಧಗಳ ಅಭೂತಪೂರ್ವ ಕೆಡುಕುಗಳ ಬಗ್ಗೆ ಸಾಕ್ಷ್ಯ ನೀಡಬಲ್ಲವರು ನೀವಾಗಿರುವಿರಿ. ಆದುದರಿಂದ ಜಪಾನಿ ಜನತೆಗಿಂತ ಶಾಂತಿ ಮತ್ತು ಭದ್ರತೆ ಬಗ್ಗೆ ಚೆನ್ನಾಗಿ ತಿಳಿದವರು ಬೇರೆ ಯಾರೂ ಪ್ರಾಯಶಃ ಇಲ್ಲ.

ಜಪಾನ್ ವಿನಾಶದಿಂದ ವಿಮುಕ್ತಿ ಗಳಿಸಿದ ಬಗ್ಗೆ ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಈಗ ನೀವು ಅತ್ಯಂತ ಅಭಿವೃದ್ಧಿ ಹೊಂದಿದ ದೇಶವಾಗಿರುವಿರಿ. ನಿಮ್ಮ ಹಿಂದಿನ ಚರಿತ್ರೆಯನ್ನು ಗಮನದಲ್ಲಿರಿಸಿಕೊಂಡು ಜಪಾನಿನ ಜನತೆ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ತನ್ನ ಪಾತ್ರ ವಹಿಸಬೇಕು.

ದ್ವಿತೀಯ ಮಹಾಯುದ್ಧ ಕೊನೆಗೊಂಡ ನಂತರ ಕೆಲವು ನಿಯಂತ್ರಣಗಳನ್ನು ಮತ್ತು ಪ್ರತಿಬಂಧಗಳನ್ನು ಜಪಾನಿನ ಮೇಲೆ ಹೇರಿದುದು ವಿಷಾದಕರವಾಗಿದೆ. ಆ ಕಾರಣದಿಂದ ನಿಮ್ಮ ದೇಶ ಬೃಹತ್ ಹೆಜ್ಜೆ ಹಾಕಲು ಮತ್ತು ಲೋಕದ ವ್ಯವಸ್ಥೆಯನ್ನು ರೂಪಿಸುವುದರಲ್ಲಿ ಭಾಗವಹಿಸುವುದು ಕಷ್ಟಕರವಾಯಿತು.

ಆದರೆ ನಿಮ್ಮ ದೇಶ ಈಗ ಜಾಗತಿಕ ವ್ಯವಹಾರದಲ್ಲಿ ಮುಖ್ಯಪಾತ್ರ ವಹಿಸುತ್ತಿದೆ. ನೀವು ನಿಮ್ಮ ಪ್ರಭಾವವನ್ನು ಅತ್ಯುತ್ತಮವಾಗಿ ಬಳಸಿ ದೇಶಗಳ ಮತ್ತು ಜನತೆಗಳ ಮಧ್ಯೆ ಶಾಂತಿ ಸೌಹಾರ್ದಗಳು ಮೂಡಿಬರಲು ಚೆನ್ನಾಗಿ ಪ್ರಯತ್ನಿಸಬೇಕು.

ಹಿರೋಶಿಮ ಮತ್ತು ನಾಗಸಾಕಿ ಮೇಲೆ ಅಣುಬಾಂಬು ದಾಳಿ ನಡೆಸಿ ಅತ್ಯಧಿಕ ವಿನಾಶವನ್ನೂ ಕಷ್ಟವನ್ನೂ ನೋವನ್ನೂ ಉಂಟುಮಾಡಿದ ಘಟನೆ ಸಂಭವಿಸಿದ ನಂತರದ ಎಪ್ಪತ್ತನೆಯ ವಾರ್ಷಿಕ ಈ ವರ್ಷವಾಗಿದೆ.

ಅಣುಬಾಂಬು ದಾಳಿಯನ್ನು ವಾಸ್ತವಿಕವಾಗಿ ಚಿತ್ರಿಸುವ

ಮ್ಯೂಸಿಯಮ್ ನೀವು ನಿರ್ಮಿಸಿರುವಿರಿ. ಅದರಲ್ಲಿ ವಿನಾಶ ಮತ್ತು ಮಾನವರ ಹತ್ಯೆ ಬಗ್ಗೆ ಮತ್ತು ಅಣುಬಾಂಬ್ ದಾಳಿಯ ದೂರಗಾಮಿ ಪರಿಣಾಮಗಳ ಬಗ್ಗೆ ನೈಜ ಚಿತ್ರ ನೀಡಿರುವಿರಿ. ಯುದ್ಧ ಮತ್ತು ಸಂಘರ್ಷದ ಪರಿಣಾಮ ಏನಾಗುತ್ತದೆ ಎಂದು ಜಪಾನಿ ಜನತೆ ಚೆನ್ನಾಗಿ ಮನವರಿಕೆ ಮಾಡಿಕೊಂಡಿದೆ.

ನಾನು ಹಿಂದೆ ಹೇಳಿದ ಹಾಗೆ, ಯುದ್ಧ ಕೊನೆಗೊಂಡ ನಂತರ ಕ್ರೂರ ಮತ್ತು ಅನಾವಶ್ಯಕ ನಿರ್ಬಂಧಗಳನ್ನು ಜಪಾನಿನ ಮೇಲೆ ಹೇರಲಾಯಿತು ಮತ್ತು ನೀವು ಅನುಭವಿಸಿದ ಘೋರ ದುರಂತದ ನಂತರ ಅದು ಹೆಚ್ಚುವರಿಯಾಗಿ ಮುಂದುವರಿಯಿತು. ದಶಕಗಳ ಕಾಲ ಅವು ಯುದ್ಧಗಳ ವಿನಾಶದ ಪರಿಣಾಮಗಳನ್ನು ನಿಮಗೆ ನೆನಪಿಸಿಕೊಟ್ಟವು.

ಜಪಾನಿನ ಮೇಲೆ ಅಣುಬಾಂಬು ದಾಳಿ ನಡೆದಾಗ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಅಂದಿನ ಜಾಗತಿಕ ಸರ್ವೋಚ್ಚ ನಾಯಕರಾಗಿದ್ದ ದ್ವಿತೀಯ ಖಲೀಫರು ಬಾಂಬ್ ದಾಳಿಯನ್ನು ತೀವ್ರವಾಗಿ ಖಂಡಿಸಿ ಹೀಗೆ ಹೇಳಿಕೆ ನೀಡಿದರು: *"ನಮ್ಮ ಧಾರ್ಮಿಕ ಮತ್ತು ನೈತಿಕ ತತ್ವಗಳು ನಾವು ಜಗತ್ತಿನೆದುರಿಗೆ ಹೀಗೆ ಘೋಷಿಸಲು ನಮ್ಮೊಂದಿಗೆ ಆವಶ್ಯಪಡುತ್ತವೆ. ಈ ಭಯಾನಕ ಕೃತ್ಯ ಮತ್ತು ರಕ್ತಪಾತವನ್ನು ಯಾವ ರೀತಿಯಲ್ಲಿಯೂ ಸಮರ್ಥಿಸಲು ಸಾಧ್ಯವಾಗದು. ಯಾವುದಾದರೂ ಸರಕಾರಗಳು ನಾನು ಹೇಳಿದುದನ್ನು ಇಷ್ಟಪಡುವುದಿಲ್ಲವಾದರೆ ನನಗೆ ಅದರ ಬಗ್ಗೆ ಯಾವ ಕಾಳಜಿಯೂ ಇಲ್ಲ."*

ದ್ವಿತೀಯ ಖಲೀಫರು ಹೀಗೆ ಸಹ ಹೇಳಿದರು: ಯುದ್ಧಗಳು ಕೊನೆಗೊಳ್ಳುವುವು ಎಂದು ನನಗೆ ತೋರುವುದಿಲ್ಲ. ಸಂಘರ್ಷಗಳು ಮತ್ತು ಹಿಂಸಾಚಾರಗಳು ಬೆದರಿಕೆ ಒಡ್ಡುತ್ತಿವೆ.

ಇಂದು ಅವರ ಮುನ್ನೆಚ್ಚರಿಕೆಗಳು ಸಂಪೂರ್ಣ ಸತ್ಯವಾಗಿ ಸಾಬೀತಾಗಿವೆ. ತೃತೀಯ ಜಾಗತಿಕ ಯುದ್ಧವನ್ನು ಅಧಿಕೃತವಾಗಿ ಘೋಷಿಸಿಲ್ಲವಾದರೂ ಜಾಗತಿಕ ಯುದ್ಧ ನಡೆಯುತ್ತಿದೆ. ಲೋಕದಾದ್ಯಂತ ಪುರುಷರು, ಮಹಿಳೆಯರು ಮತ್ತು ಮಕ್ಕಳು ಕೊಲ್ಲಲ್ಪಡುತ್ತಿದ್ದಾರೆ, ಹಿಂಸಾಚಾರಗಳಿಗೆ ಗುರಿಪಡಿಸಲ್ಪಡುತ್ತಿದ್ದಾರೆ ಮತ್ತು ಅತ್ಯಂತ ಹೃದ್ರಾವಕ ಕ್ರೌರ್ಯಗಳಿಗೆ ಗುರಿಯಾಗುತ್ತಿದ್ದಾರೆ.

ಅಹ್ಮದಿಯಾ ಮುಸ್ಲಿಮ್ ಸಂಘಟನೆಗೆ ಸೇರಿದ ನಮ್ಮ ಬಗ್ಗೆ ಹೇಳುವುದಾದರೆ, ನಾವು ಎಲ್ಲ ರೀತಿಯ ಕ್ರೌರ್ಯಕೃತ್ಯಗಳನ್ನು ಯಾವಾಗಲೂ ಖಂಡಿಸುತ್ತಾ ಬಂದಿದ್ದೇವೆ. ಅವು ಎಲ್ಲಿ ನಡೆಯುವುದಾದರೂ ನಾವು ಖಂಡಿಸುತ್ತಿರುವುದು ಏಕೆಂದರೆ ಇಸ್ಲಾಮ್ ಧರ್ಮ ತತ್ವಗಳು ಅನ್ಯಾಯ ವರ್ತನೆಯನ್ನು ಖಂಡಿಸಲು ಮತ್ತು ಆವಶ್ಯವಿರುವವರಿಗೆ ಸಹಾಯ ಮಾಡಲು ಹಾಗೂ ಪೀಡಿತರಿಗೆ ನೆರವು ನೀಡಲು ಉಪದೇಶಿಸುತ್ತವೆ. ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಜಪಾನಿನ ಮೇಲೆ ಅಣುಬಾಂಬ್ ದಾಳಿ ನಡೆದಾಗ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸರ್ವೋಚ್ಚ ನಾಯಕರು ಅದನ್ನು ಖಂಡಿಸಿದ ಬಗ್ಗೆ ಇದರ ಮೊದಲು ಪ್ರಸ್ತಾಪಿಸಿದ್ದೇನೆ.

ಒಬ್ಬ ಪ್ರಮುಖ ಮತ್ತು ಪ್ರಸಿದ್ಧ ಅಹ್ಮದಿ, ಮುಸ್ಲಿಮ್ ಲೋಕದ ದೇಶಗಳ ಮೇಲೆ ಬಹಳ ಪ್ರಭಾವ ಬೀರಿದವರಾಗಿದ್ದರು. ಅವರು ಜಪಾನ್ ಮತ್ತು ಅದರ ಜನತೆಯನ್ನು ಬೆಂಬಲಿಸಿ ಮಾತನಾಡಿದ್ದರು. ನಾನು ಸರ್ ಚೌಧರಿ ಮುಹಮ್ಮದ್ ಝಫರುಲ್ಲಾ ಖಾನ್ ಬಗ್ಗೆ ಪ್ರಸ್ತಾಪಿಸುತ್ತಿದ್ದೇನೆ. ಅವರು ಅನೇಕ ಅಂತರ್ರಾಷ್ಟ್ರೀಯ ಹುದ್ದೆಗಳನ್ನು ಗಳಿಸಿದ್ದರು. ಅವರು ಪಾಕಿಸ್ಥಾನದ ವಿದೇಶಕಾರ್ಯ ಸಚಿವರಾಗಿದ್ದರು ಮತ್ತು ಯುನೈಟೆಡ್ ನೇಶನ್ಸ್ ಆರ್ಗನೈಝೇಶನಿನ ಜನರಲ್ ಎಸೆಂಬ್ಲಿಯ ಅಧ್ಯಕ್ಷರೂ ಆಗಿದ್ದರು. ದ್ವಿತೀಯ ಮಹಾಯುದ್ಧ ಕೊನೆಗೊಂಡ ನಂತರ ಕೆಲವು ಶಕ್ತಿಶಾಲಿ ದೇಶಗಳು ಜಪಾನಿನ ಮೇಲೆ ನಿರ್ಬಂಧಗಳನ್ನು ಹೇರಲು ಪ್ರಯತ್ನಿಸುವುದನ್ನು ಖಂಡಿಸಿ ಅವರು ಭಾಷಣ ಮಾಡಿದ್ದರು.

1951ರಲ್ಲಿ ಸಾನ್‌ಫ್ರಾನ್ಸಿಸ್ಕೋ ಪೀಸ್ ಸಮ್ಮಿಟ್ ಸಭೆಯಲ್ಲಿ ಪಾಕಿಸ್ಥಾನದ ಪ್ರತಿನಿಧಿ ಸಂಘದ ಮುಖ್ಯಸ್ಥನಾಗಿ ಚೌಧರಿ ಝಫರುಲ್ಲಾ ಖಾನ್ ಹೇಳಿದರು: *"ಜಪಾನಿನೊಂದಿಗೆ ಶಾಂತಿಯು ನ್ಯಾಯಪಾಲನೆ ಮತ್ತು ಪುನಃ ಸ್ನೇಹ ಸಂಬಂಧ ಸ್ಥಾಪನೆಯ ಅಸ್ತಿಭಾರದ ಮೇಲೆ ಆಗಬೇಕೇ ಹೊರತು ಪ್ರತೀಕಾರ ಮತ್ತು ದಬ್ಬಾಳಿಕೆಯ ಮೂಲಕವಲ್ಲ. ಭವಿಷ್ಯತ್‌ಕಾಲದಲ್ಲಿ ಜಪಾನ್ ಬಹಳ ಮುಖ್ಯವಾದ ಪಾತ್ರವಹಿಸುವುದು. ಜಪಾನಿನಲ್ಲಿ ಪ್ರಾರಂಭಿಸಲಾದ ರಾಜಕೀಯ ಮತ್ತು ಸಾಮಾಜಿಕ ಸುಧಾರಣೆಯ ಪರಿಣಾಮವಾಗಿ ಹಾಗೆ ಸಂಭವಿಸುವುದು. ಅದು ಅಭಿವೃದ್ಧಿಯ ಪ್ರಕಾಶಮಾನವಾದ ವಾಗ್ದಾನವನ್ನು ನೀಡುತ್ತಿದೆ ಮತ್ತು ಶಾಂತಿಪ್ರಿಯ ದೇಶಗಳೊಂದಿಗೆ ಸಮಾನ ಸದಸ್ಯತ್ವ ಪಡೆಯುವುದಕ್ಕೆ ಅರ್ಹತೆಗಳಿಸುವುದು."*

ಅವರ ಭಾಷಣ ಪವಿತ್ರ ಖುರ್‌ಆನಿನ ಉಪದೇಶಗಳನ್ನು ಮತ್ತು ಇಸ್ಲಾಮಿನ ಮಹಾನ್ ಪೈಗಂಬರರ(ಸ) ಜೀವಿತವನ್ನು ಆಧಾರವಾಗಿರಿಸಿ ಕೊಂಡದ್ದಾಗಿತ್ತು. ಇಸ್ಲಾಮ್ ಧರ್ಮದ ನೈಜ ತತ್ವಗಳ ಪ್ರಕಾರ ಯುದ್ಧದಲ್ಲಿ ಜಯಗಳಿಸಿದವನು ಸೋತವನೊಂದಿಗೆ ಅನ್ಯಾಯದಿಂದ ವರ್ತಿಸಬಾರದು ಮತ್ತು ಸೋತವರ ಅಭಿವೃದ್ಧಿಯನ್ನು ತಡೆಗಟ್ಟುವ ಯಾವುದೇ ನಿರ್ಬಂಧವನ್ನು ಹೇರಬಾರದು ಎಂದು ಅವರು ಹೇಳಿದರು.

ಚೌಧರಿ ಝಫರುಲ್ಲಾ ಖಾನರು ಜಪಾನನ್ನು ಬೆಂಬಲಿಸಿ ಹೀಗೆ ಚಾರಿತ್ರಿಕ ಭಾಷಣ ನೀಡಲು ಕಾರಣವೇನೆಂದರೆ, ಅವರು ಅಹ್ಮದಿ ಮುಸ್ಲಿಮರಾಗಿದ್ದರು. ಅವರು ಕೇವಲ ಪಾಕಿಸ್ಥಾನವನ್ನು ಪ್ರತಿನಿಧೀಕರಿಸುತ್ತಿರಲಿಲ್ಲ; ಎಲ್ಲದಕ್ಕಿಂತಲೂ ಮಿಗಿಲಾಗಿ ಇಸ್ಲಾಮಿನ ಶ್ರೇಷ್ಠ ತತ್ವಗಳನ್ನು ಪ್ರತಿನಿಧೀಕರಿಸುತ್ತಿದ್ದರು.

ನಾನು ಹಿಂದೆ ಹೇಳಿದ ಹಾಗೆ ಯುದ್ಧ ಮತ್ತು ಕ್ರೌರ್ಯಗಳ ಪರಿಣಾಮಗಳನ್ನು ಇತರರಿಗಿಂತ ಹೆಚ್ಚಿನ ಮಟ್ಟದಲ್ಲಿ ಮನವರಿಕೆ ಮಾಡಿಕೊಂಡವರು ನೀವಾಗಿರುವಿರಿ. ಆದುದರಿಂದ ಪ್ರತಿಯೊಂದು ಹಂತದಲ್ಲೂ ಪ್ರತಿಯೊಂದು ರೀತಿಯಲ್ಲೂ ಜಪಾನಿನ ಸರಕಾರ ಎಲ್ಲ ವಿಧಗಳ ಅಮಾನವೀಯ ಕೃತ್ಯಗಳನ್ನು, ಹಿಂಸಾಚಾರವನ್ನು ಮತ್ತು ಅನ್ಯಾಯವನ್ನು ಎದುರಿಸಲು ಮತ್ತು ತಡೆಗಟ್ಟಲು

ಪ್ರಯತ್ನಿಸಬೇಕು. ಅವರು ಎದುರಿಸಿದ ಹೇಯ ಆಕ್ರಮಣ ಲೋಕದಲ್ಲಿ ಎಲ್ಲಿಯೂ ಮುಂದೆ ಪುನರಾವರ್ತಿಸಲ್ಪಡದಂತೆ ನಿಗಾವಹಿಸಬೇಕು.

ಎಲ್ಲೆಲ್ಲ ಯುದ್ಧದ ಬೆಂಕಿಯನ್ನು ಹೊತ್ತಿಸಲಾಗುತ್ತಿದೆಯೋ, ಅಲ್ಲಿ ಸಂಘರ್ಷ ನಿವಾರಿಸಲು ಮತ್ತು ಶಾಂತಿ ಸ್ಥಾಪಿಸಲು ಜಪಾನಿನ ನಾಯಕರು ಮತ್ತು ಜನರು ತಮ್ಮ ಪಾತ್ರ ವಹಿಸಬೇಕು. ಇಸ್ಲಾಮಿನ ಬಗ್ಗೆ ಕೆಲವರು ಅದೊಂದು ಬರ್ಬರತೆಯ ಮತ್ತು ಹಿಂಸಕ ಧರ್ಮವೆಂದು ಗಣಿಸುತ್ತಾರೆ. ಮುಸ್ಲಿಮ್ ಲೋಕದಲ್ಲಿ ಜಾರಿಯಲ್ಲಿರುವ ಭಯೋತ್ಪಾದಕ ಕೃತ್ಯಗಳನ್ನು ಮತ್ತು ಯುದ್ಧಗಳನ್ನು ಅವರ ವಾದಕ್ಕೆ ಸಮರ್ಥನೆಯಾಗಿ ಪ್ರಸ್ತಾಪಿಸುತ್ತಾರೆ.

ಆದರೆ ಅವರ ಅಭಿಪ್ರಾಯ ಸಂಪೂರ್ಣ ತಪ್ಪಾಗಿದೆ. ವಾಸ್ತವಿಕವಾಗಿ ಶಾಂತಿಯ ಬಗ್ಗೆ ಇಸ್ಲಾಮಿನ ಉಪದೇಶಗಳು ಅದ್ವಿತೀಯವಾಗಿವೆ. ನಮ್ಮ ದ್ವಿತೀಯ ಖಲೀಫರು ಮತ್ತು ಚೌಧರಿ ಝಫರುಲ್ಲಾ ಖಾನರು ನಿಮ್ಮ ದೇಶದ ವಿರುದ್ಧ ಪಾಶವಿಕ ಕೃತ್ಯಗಳನ್ನು ತೀವ್ರವಾಗಿ ಖಂಡಿಸಿದುದು ಇದೇ ಕಾರಣದಿಂದಾಗಿದೆ. ಇಸ್ಲಾಮ್‌ಧರ್ಮ ತತ್ವಗಳೇನೆಂದು ನಾನು ಸಂಕ್ಷಿಪ್ತವಾಗಿ ವಿವರಿಸುವೆನು.

ಇಸ್ಲಾಮ್ ಮೂಲತತ್ವವಾಗಿ ಹೇಳುವುದೇನೆಂದರೆ, ಭೂಮಿ ವಶಪಡಿಸಿಕೊಳ್ಳಲು ಅಥವಾ ಆರ್ಥಿಕ ಲಾಭಗಳಿಸಲು ಮತ್ತು ಅನ್ಯದೇಶಗಳ ನೈಸರ್ಗಿಕ ಸಂಪತ್ತನ್ನು ವಶಕ್ಕೆ ತೆಗೆದುಕೊಳ್ಳಲು ಯುದ್ಧ ಮಾಡುವುದು ಸಮರ್ಥನೀಯವಲ್ಲ. ಪವಿತ್ರ ಖುರ್‌ಆನ್ ಅಧ್ಯಾಯ 16 ವಚನ 127ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳಿದ್ದಾನೆ: ನೀವು ಪ್ರತೀಕಾರ ಮಾಡುವಿರಾದರೆ ನಿಮ್ಮ ಮೇಲೆ ಉಂಟಾದ ಅಕ್ರಮಕ್ಕೆ ಸಮಾನವಾದಷ್ಟು ಮಾತ್ರ ಪ್ರತೀಕಾರ ಮಾಡಿರಿ. ನೀವು ಮಿತಿಮೀರಬಾರದು. ಯುದ್ಧ ಮುಗಿದ ನಂತರ ಕ್ಷಮಿಸುವುದು ಮತ್ತು ಸಹನೆದೋರುವುದು ಉತ್ತಮವಾಗಿದೆ.

ಇದೇ ರೀತಿ ಅಧ್ಯಾಯ 8 ವಚನ 62ರಲ್ಲಿ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: ಎರಡು ಪಕ್ಷಗಳ ಮಧ್ಯೆ ಸಂಬಂಧ ಮುರಿದು ಹೋದರೆ ಮತ್ತು ಯುದ್ಧ ಮಾಡಲು ಸಿದ್ಧತೆ ನಡೆಸಿದರೆ ವಿರೋಧ ಪಕ್ಷದವರು ಶಾಂತಿಯೆಡೆಗೆ ವಾಲಿದರೆ ಅದಕ್ಕೆ ಒಪ್ಪಿಗೆ ನೀಡಬೇಕು ಮತ್ತು ಅಲ್ಲಾಹನ ಮೇಲೆ ಭರವಸೆ ಇಡಬೇಕು. ಪವಿತ್ರ ಖುರ್‌ಆನ್ ಹೇಳುವುದೇನೆಂದರೆ, ವಿರೋಧಿ ಪಕ್ಷದವರ ಉದ್ದೇಶ ಮತ್ತು ಪ್ರಾಮಾಣಿಕತೆ ಬಗ್ಗೆ ಸಂಶಯಪಡಬಾರದು. ಯಾವಾಗಲೂ ಶಾಂತಿಗೋಸ್ಕರ ಪ್ರಯತ್ನಿಸಬೇಕು. ಈ ತತ್ವ ಜಾಗತಿಕ ಶಾಂತಿ ಮತ್ತು ಭದ್ರತೆ ಸ್ಥಾಪಿಸಲು ಕೀಲಿಗೈ ಆಗಿದೆ.

ಪವಿತ್ರ ಖುರ್‌ಆನ್ ಅಧ್ಯಾಯ 5 ವಚನ 9ರಲ್ಲಿ ಸರ್ವಶಕ್ತನಾದ ಅಲ್ಲಾಹನು ಘೋಷಿಸುತ್ತಾನೆ: "ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. ನೀವು ನ್ಯಾಯಯುತವಾಗಿ ವರ್ತಿಸಿರಿ."

ಇಸ್ಲಾಮ್ ಉಪದೇಶಿಸುವುದೇನೆಂದರೆ, ಎಲ್ಲ ಸಂದರ್ಭಗಳಲ್ಲಿಯೂ ಅವು ಎಷ್ಟು ಪಂಥಾಹ್ವಾನ ನೀಡುವವುಗಳಾಗಿದ್ದರೂ ನೀವು ನ್ಯಾಯ ತತ್ವಗಳಿಗೆ ಬದ್ಧರಾಗಿರಬೇಕು. ಸಂಬಂಧ ಸುಧಾರಣೆ ಮಾಡಲು, ನಿರಾಶೆಗಳನ್ನು ಕೊನೆಗೊಳಿಸಲು, ಯುದ್ಧ ಕಾರಣಗಳನ್ನು ನಿವಾರಿಸಲು ನಿಶ್ಚಯವಾಗಿಯೂ ನ್ಯಾಯಪಾಲನೆ ಮಾಡುವುದೇ ಮಾರ್ಗವಾಗಿದೆ.

ಪವಿತ್ರ ಖುರ್‌ಆನ್ ಅಧ್ಯಾಯ 24 ವಚನ 34ರಲ್ಲಿ ಹೀಗೆ ಹೇಳಲಾಗಿದೆ: ಯುದ್ಧದ ನಂತರ ಸೆರೆ ಹಿಡಿಯಲ್ಪಟ್ಟವರ ಬಿಡುಗಡೆಗೆ ನೀವು ಆರ್ಥಿಕ ಸಂಬಂಧವಾದ ಶರತ್ತುಗಳನ್ನು ವಿಧಿಸುವಿರಾದರೆ ನೀವು ವಿಧಿಸುವ ಶರತ್ತುಗಳು ನ್ಯಾಯೋಚಿತವಾಗಿರಬೇಕು. ಅವರಿಗೆ ಅದನ್ನು ಪಾವತಿ ಮಾಡಲು ಸಾಧ್ಯವಾಗುವಂತಿರಬೇಕು. ಅವರು ಕಂತಿನಲ್ಲಿ ನೀಡಲು ಅನುಮತಿಸುವುದು ಉತ್ತಮವಾಗಿದೆ.

ಶಾಂತಿ ಸ್ಥಾಪಿಸಲು ಒಂದು ಸುವರ್ಣ ತತ್ವವನ್ನು ಪವಿತ್ರ ಖುರ್‌ಆನ್ ಅಧ್ಯಾಯ 49 ವಚನ 10ರಲ್ಲಿ ಪ್ರಸ್ತಾಪಿಸಲಾಗಿದೆ. ಅಂದರೆ, ಎರಡು ದೇಶಗಳ ಅಥವಾ ಗುಂಪುಗಳ ಮಧ್ಯೆ ಜಗಳವುಂಟಾದರೆ ಮೂರನೆಯ ಪಕ್ಷದವರು ರಾಜಿ ಸಂಧಾನ ನಡೆಸಬೇಕು ಮತ್ತು ಶಾಂತಿಯುತವಾಗಿ ಜಗಳವನ್ನು ನಿವಾರಿಸಬೇಕು.

ಒಪ್ಪಂದವಾದ ನಂತರ ಯಾವುದಾದರೊಂದು ಪಕ್ಷದವರು ಒಪ್ಪಂದದ ಶರತ್ತುಗಳಿಗೆ ಭಂಗ ಉಂಟುಮಾಡುವರಾದರೆ ಒಪ್ಪಂದ ಮಾಡಿಸಿದ ದೇಶಗಳು ಒಟ್ಟಿಗೆ ಸೇರಿ ಬಲಪ್ರಯೋಗಿಸಿ ಅತಿಕ್ರಮಣಕಾರರನ್ನು ತಡೆಯಬೇಕು. ಆದರೆ ಅತಿಕ್ರಮಣಕಾರರು ಹಿಂದೆ ಸರಿದರೆ, ಅವರ ಮೇಲೆ ಅನಾವಶ್ಯಕ ನಿರ್ಬಂಧಗಳನ್ನು ಹೇರಬಾರದು. ಅವರು ಸ್ವತಂತ್ರರಾಗಿ ಮುಂದುವರಿಯಲು ಅನುಮತಿಸಬೇಕು.

ಈ ತತ್ವ ಅತ್ಯಂತ ಮಹತ್ವದ್ದಾಗಿದ್ದು ಶಕ್ತಿಶಾಲಿ ರಾಷ್ಟ್ರಗಳು ಮತ್ತು ಸಂಯುಕ್ತ ರಾಷ್ಟ್ರ ಸಂಘ ಇದರ ಪ್ರಕಾರ ವರ್ತಿಸಬೇಕು. ಈ ಮಾರ್ಗದರ್ಶನ ಪ್ರಕಾರ ನಡೆಯುವುದಾದರೆ ಲೋಕದಲ್ಲಿ ಸತ್ಯವಾದ ಶಾಂತಿ ಮತ್ತು ನ್ಯಾಯ ಸ್ಥಾಪಿತವಾಗುವುದು ಮತ್ತು ಅನಾವಶ್ಯಕ ಆತಂಕಗಳು ಕೊನೆಗೊಳ್ಳುವುವು.

ಇದೇ ರೀತಿ ಲೋಕದಲ್ಲಿ ಶಾಂತಿ ಸ್ಥಾಪನೆ ಬಗ್ಗೆ ಮತ್ತು ಯುದ್ಧಗಳನ್ನು ಕೊನೆಗೊಳಿಸುವ ಬಗ್ಗೆ ಅನೇಕ ಇತರ ಆಜ್ಞೆಗಳು ಪವಿತ್ರ ಖುರ್‌ಆನ್‌ನಲ್ಲಿ ಇವೆ. ಪರಮದಯಾವಂತನೂ ಕಾರುಣ್ಯ ನಿಧಿಯೂ ಆಗಿರುವ ಸರ್ವಶಕ್ತನಾದ ಅಲ್ಲಾಹನು ಶಾಂತಿ ಸ್ಥಾಪನೆಗಿರುವ ಕೀಲಿಗೈಗಳನ್ನು ನಮಗೆ ನೀಡಿರುವನು. ಏಕೆಂದರೆ ಅವನು ಬಯಸುವುದೇನೆಂದರೆ, ತನ್ನ ಸೃಷ್ಟಿಗಳು ಒಟ್ಟಿಗೆ ಸೌಹಾರ್ದದಿಂದ ಮತ್ತು ದ್ವೇಷಾಸೂಯೆ ಭಿನ್ನಾಭಿಪ್ರಾಯ ರಹಿತರಾಗಿ ಬಾಳಬೇಕು.

ಇಷ್ಟು ಹೇಳಿದ ನಂತರ ನಾನು ನಿಮ್ಮೊಂದಿಗೆ ಅಪೇಕ್ಷಿಸುವುದೇನೆಂದರೆ, ಲೋಕದಲ್ಲಿ ಶಾಂತಿಯನ್ನೂ ಸೌಹಾರ್ದವನ್ನೂ ಹರಡಲು ನೀವು ನಿಮ್ಮ ಪ್ರಭಾವವನ್ನು ಬಳಸಬೇಕು. ಲೋಕದಲ್ಲಿ

ಎಲ್ಲಿಯಾದರೂ ಸಂಘರ್ಷ ಮತ್ತು ಅಸ್ತವ್ಯಸ್ತತೆ ತಲೆದೋರಿದರೆ ನಮ್ಮ ಸಾಮೂಹಿಕ ಹೊಣೆಗಾರಿಕೆ ಏನೆಂದರೆ ನಾವು ನ್ಯಾಯಕ್ಕೋಸ್ಕರ ಎದ್ದು ನಿಂತು ಶಾಂತಿ ಸ್ಥಾಪನೆಗೆ ಪ್ರಯತ್ನಿಸಬೇಕು. ಹೀಗೆ ಮಾಡುವುದಾದರೆ, ಎಪ್ಪತ್ತು ವರ್ಷಗಳ ಹಿಂದೆ ಸಂಭವಿಸಿದ ಭಯಾನಕ ಯುದ್ಧವು ಪುನರಾವರ್ತಿಸುವುದರಿಂದ ನಾವು ರಕ್ಷಿಸಲ್ಪಡುವೆವು. ಆ ಯುದ್ಧದ ವಿನಾಶಕಾರಿ ಪರಿಣಾಮಗಳು ದಶಕಗಳ ಕಾಲ ಮುಂದುವರಿದುವು ಮತ್ತು ಪ್ರಾಯಶಃ ಈಗ ಸಹ ಮುಂದುವರಿಯುತ್ತಿವೆ.

ಚಿಕ್ಕ ಪ್ರಮಾಣದಲ್ಲಿ ಇನ್ನೊಂದು ಜಾಗತಿಕ ಯುದ್ಧ ಇಷ್ಟರಲ್ಲಿಯೇ ಆರಂಭವಾಗಿದೆ. ನಾವು ನಮ್ಮ ಹೊಣೆಗಾರಿಕೆಗಳನ್ನು ಈಡೇರಿಸಬೇಕು ಮತ್ತು ಪರಿಸ್ಥಿತಿ ಬಿಗಡಾಯಿಸಿ ಲೋಕವನ್ನು ಆವರಿಸುವ ಮೊದಲು ಶಾಂತಿ ಸ್ಥಾಪನೆಗೋಸ್ಕರ ಪ್ರಯತ್ನಿಸಬೇಕು. ನಮ್ಮ ಮುಂದಿನ ಪೀಳಿಗೆಗಳನ್ನು ನಾಶಮಾಡುವಂತಹ ಘೋರ ಆಯುಧಗಳು ಪ್ರಯೋಗಿಸಲ್ಪಡುವ ಮೊದಲೇ ನಾವು ಕಾರ್ಯನಿರತರಾಗಬೇಕು.

ನಾವು ನಮ್ಮ ಕರ್ತವ್ಯಗಳನ್ನು ಈಡೇರಿಸಲು ಒಟ್ಟಿಗೆ ಸೇರಿ ಕಾರ್ಯನಿರತರಾಗೋಣ. ಪರಸ್ಪರ ವಿರೋಧಿಸುವ ಎರಡು ಬಣಗಳೊಂದಿಗೆ ಸೇರಿಕೊಳ್ಳದೆ ನಾವು ಎಲ್ಲರೂ ಐಕ್ಯತೆಯಿಂದ ವರ್ತಿಸಿ ಪರಸ್ಪರ ಸಹಕಾರ ನೀಡಬೇಕು. ನಮಗೆ ಬೇರೆ ಯಾವುದೇ ಉತ್ತಮ ಆಯ್ಕೆ ಮಾಡಲಿಕ್ಕಿಲ್ಲ. ಏಕೆಂದರೆ ಪೂರ್ಣ ರೂಪದ ತೃತೀಯ ಜಾಗತಿಕ ಯುದ್ಧ ಸಂಭವಿಸಿದರೆ ಅದರಿಂದ ಉಂಟಾಗುವ ವಿನಾಶವು ಊಹಾತೀತವಾಗುವುದು. ಅಂತಹ ಸಂದರ್ಭದಲ್ಲಿ, ಹಿಂದೆ ನಡೆದ ಯುದ್ಧಗಳು ಅದಕ್ಕೆ ಹೋಲಿಸಿ ನೋಡುವುದಾದರೆ ಬಹಳ ಚಿಕ್ಕ ಮಟ್ಟದ್ದು ಎಂದು ಗಣಿಸುವೆವು.

ನಾನು ಪ್ರಾರ್ಥಿಸುತ್ತೇನೆ– ಲೋಕವು ಈ ಗಂಭೀರ ಪರಿಸ್ಥಿತಿಯ ಬಗ್ಗೆ ಬೇಗನೆ ಅರಿತುಕೊಳ್ಳಲಿ; ಮಾನವರು ಸರ್ವಶಕ್ತನಾದ ದೇವನ ಮುಂದೆ ಬಾಗಿಕೊಂಡು ಅವನಿಗೆ ಸಲ್ಲಬೇಕಾದ ಹಕ್ಕುಗಳನ್ನು ಸಲ್ಲಿಸಲಿ ಮತ್ತು ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸಿ ಕೊಡಲಿ.

ಧರ್ಮದ ಹೆಸರಲ್ಲಿ ಸಂಘರ್ಷವನ್ನು ಸೃಷ್ಟಿಸುತ್ತಿರುವವರಿಗೆ ಮತ್ತು ಭೂಮಿ ಹಾಗೂ ಆರ್ಥಿಕ ಲಾಭ ಗಳಿಸಲು ಯುದ್ಧ ಮಾಡುವವರಿಗೆ ಅಲ್ಲಾಹನು ಬುದ್ಧಿಯನ್ನು ನೀಡಲಿ. ಅವರ ಕೃತ್ಯಗಳು ಎಷ್ಟು ವಿನಾಶಕರವಾಗಿವೆ ಎಂದು ಅವರು ಮನಗಾಣುವಂತಾಗಲಿ.

ನಿಜವಾದ ಮತ್ತು ದೀರ್ಘಕಾಲೀನ ಶಾಂತಿ ಲೋಕದ ಎಲ್ಲ ಭಾಗಗಳಲ್ಲೂ ಸ್ಥಾಪಿತವಾಗುವಂತೆ ಅಲ್ಲಾಹನು ಮಾಡಲಿ – ಆಮೀನ್.

ಈ ಮಾತುಗಳೊಂದಿಗೆ ನಾನು ನನ್ನ ಭಾಷಣ ಮುಕ್ತಾಯಗೊಳಿಸುತ್ತಿದ್ದೇನೆ. ನೀವು ಈ ಸಮಾರಂಭದಲ್ಲಿ ಭಾಗವಹಿಸಿದುದಕ್ಕೆ ಇನ್ನೊಮ್ಮೆ ಕೃತಜ್ಞತೆ ಸಲ್ಲಿಸುತ್ತೇನೆ.

ನಿಮಗೆ ತುಂಬಾ ಧನ್ಯವಾದಗಳು.

(The Review of Religions–January 2016 ಸಂಚಿಕೆಯಿಂದ
ಅನುವಾದಕ: ಯಮ್. ಉಬೈದುಲ್ಲಾ)

**LOVE FOR HONESTY AND HATRED FOR DISHONESTY**

**ಪ್ರಾಮಾಣಿಕತೆಯೊಂದಿಗೆ ಪ್ರೀತಿ ಮತ್ತು ಅಪ್ರಾಮಾಣಿಕತೆಯೊಂದಿಗೆ ದ್ವೇಷ**

# ಭೂಮಿಯಲ್ಲಿ ವಾಸ್ತವಿಕ ಶಾಂತಿ

**ಮುಸ್ತನ್‌ಸಿರ್ ಖಮರ್, ನ್ಯೂಝಿಲೇಂಡ್**



ನಮ್ಮ ಈ ಕಾಲದಲ್ಲಿ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಕ್ಷೋಭೆಯು ನಿಶ್ಚಯವಾಗಿ ಅತ್ಯಂತ ಅಪಾಯಕರ ವಿಷಯವಾಗಿದೆ. ಮಧ್ಯಪೂರ್ವ ದೇಶಗಳ ಗಲಭೆ ಗೊಂದಲಗಳು, ಉತ್ತರ ಮತ್ತು ದಕ್ಷಿಣ ಕೊರಿಯದ ಮಧ್ಯೆ ಇರುವ ಬಿಗುವಿನ ಪರಿಸ್ಥಿತಿ, ತಥಾಕಥಿತ ಇಸ್ಲಾಮೀ ಭಯೋತ್ಪಾದನೆ ಜಾಗತಿಕ ಮಟ್ಟದಲ್ಲಿ, ಪಂಗಡಗಳ ಮಧ್ಯೆ ಸಂಘರ್ಷ, ಉಕ್ರೈನ್ ಬಿಕ್ಕಟ್ಟು, ಭಾರತ ಪಾಕಿಸ್ಥಾನದ ಮಧ್ಯೆ ವಿವಾದ, ಯುನೈಟೆಡ್ ಸ್ಟೇಟ್ಸ್‌ನಲ್ಲಿ ನಡೆಯುತ್ತಿರುವ ಗನ್ ಬಳಸಿದ ಅಪರಾಧಗಳು, ಆಫ್ರಿಕನ್ ದೇಶಗಳಲ್ಲಿ ನಡೆಯುತ್ತಿರುವ ಹಿಂಸಾಚಾರಗಳು, ಮಹಾಶಕ್ತಿ ರಾಷ್ಟ್ರಗಳ ಮಧ್ಯೆ ಬಿಗುವಿನ ಸ್ಥಿತಿ – ಇವು ಜಾಗತಿಕ ಕ್ಷೋಭೆಯ ಅನೇಕ ಕಾರಣಗಳಲ್ಲಿ ಕೆಲವು ಆಗಿವೆ. ಜಗತ್ತು ಜಾಗತಿಕ ಗ್ರಾಮವಾಗಿ ಪರಿಣಮಿಸಿದ ನಂತರ ಲೋಕದ ಒಂದು ಭಾಗದಲ್ಲಿ ತಲೆದೋರಿದ ಕ್ಷೋಭೆ ಇತರ ದೇಶಗಳಿಗೆ ಸೋರಿ ಹೋಗುತ್ತದೆ ಮತ್ತು ಲೋಕದಾದ್ಯಂತ ಆತಂಕ ಸೃಷ್ಟಿಸುತ್ತದೆ. ಇವೆಲ್ಲ ಕೂಡಲೆ ಗಮನಿಸಬೇಕಾದ ವಿಷಯಗಳಾಗಿವೆ. ಅವುಗಳನ್ನು ನಿರ್ಲಕ್ಷಿಸಲಾಗದು. ಲೋಕದಲ್ಲಿ ವಾಸ್ತವಿಕ ಶಾಂತಿಯನ್ನು ಸ್ಥಾಪಿಸುವುದು ಹಿಂದೆಂದಿಗಿಂತಲೂ ಈಗ ಹೆಚ್ಚು ಮುಖ್ಯವಾದ ವಿಷಯವಾಗಿದೆ.

ಸಂಯುಕ್ತ ರಾಷ್ಟ್ರ ಸಂಘ ಮತ್ತು ಮಹಾಶಕ್ತಿಶಾಲಿ ದೇಶಗಳು ಸಂಘರ್ಷಗಳನ್ನು ನಿವಾರಿಸಲು ಅನೇಕ ವರ್ಷಗಳಿಂದ ಪ್ರಯತ್ನ ಮಾಡುತ್ತಿವೆ. ಆದರೆ ಅವರ ಪ್ರಯತ್ನಗಳು ನಿಷ್ಫಲವಾಗಿವೆ. ಅವರ ಪ್ರಯತ್ನಗಳು ಶಾಂತಿ ಸ್ಥಾಪಿಸುವುದಕ್ಕೆ ಬದಲಾಗಿ ಹೆಚ್ಚು ವಿಸ್ತಾರಗೊಂಡ ಅಸ್ತವ್ಯಸ್ತತೆಯನ್ನೂ ವಿನಾಶವನ್ನೂ ಉಂಟು ಮಾಡುತ್ತಿವೆ. ಲೋಕ ಹಿಂಸಾಚಾರದ ಮತ್ತು ಯುದ್ಧದ ಪ್ರಪಾತಕ್ಕೆ ಜಾರಿ ಹೋಗುತ್ತಿದೆ. ನಾವು ಇನ್ನೊಂದು ಮಹಾ ವಿನಾಶಕರ ಜಾಗತಿಕ ಮಹಾಯುದ್ಧದ ಅಂಚಿನಲ್ಲಿರುವಂತೆ ಭಾಸವಾಗುತ್ತಿದೆ.

ಸಾಮೂಹಿಕ ನಾಶಕಾರಿ ಆಯುಧಗಳ ನಿರ್ಮಾಣದ ಕಾರಣ ಲೋಕದಲ್ಲಿ ವಾಸ್ತವಿಕ ಶಾಂತಿ ಸ್ಥಾಪನೆಯ ಆವಶ್ಯಕತೆ ಹೆಚ್ಚು ಪ್ರಮುಖವಾಗಿದ್ದು ಇದು ಎಲ್ಲರಿಗೂ ಸಂಬಂಧಿಸಿದ ವಿಷಯವಾಗಿದೆ. ನಾವು ನಮ್ಮನ್ನು ಸನ್ನಿಹಿತವಾದ ವಿಪತ್ತಿನ ಮುನ್ಸೂಚನೆಯಿಂದ ರಕ್ಷಿಸಿಕೊಳ್ಳಬಲ್ಲೆವೇ? ಸಂಪೂರ್ಣ ವಿನಾಶದ ಆವಶ್ಯಕತೆ ಇಲ್ಲದೆ ಭೂಮಿಯಲ್ಲಿ ವಾಸ್ತವಿಕ ಶಾಂತಿ ಸ್ಥಾಪಿಸಲು ಸಾಧ್ಯವೇ?

ಆಶ್ಚರ್ಯಕರವಾದ ವಿಷಯವೇನೆಂದರೆ, ನೈಜ ಮುಸ್ಲಿಮರು ಇಂದಿನ ಲೋಕದ ಸ್ಥಿತಿಯನ್ನು ನೋಡುವಾಗ ಅದು ವಾಸ್ತವಿಕವಾಗಿ ಅವರ ವಿಶ್ವಾಸವನ್ನು ವರ್ಧಿಸುತ್ತದೆ. ಇದಕ್ಕೆ ಕಾರಣವೇನೆಂದರೆ ಈ ಕಾಲಘಟ್ಟದ ಕುರಿತು ಅಸಂಖ್ಯಾತ ಭವಿಷ್ಯವಾಣಿಗಳಿವೆ. ಅವುಗಳೆಲ್ಲ ಅಕ್ಷರಶಃ ಈಡೇರಿವೆ. ಇಂತಹ ಕಾಲಘಟ್ಟ ಬರುವುದೆಂದು ಭವಿಷವಾಣಿಗಳಲ್ಲಿ ಹೇಳಲಾಗಿದೆ. ಕೆಲವು ಪಕ್ಷಗಳಿಗೆ ಸೇರಿದವರ ಸ್ವಾರ್ಥಸಾಧಕ ಉದ್ದೇಶಲಕ್ಷ್ಯಗಳ ಕಾರಣದಿಂದ ಲೋಕದಲ್ಲಿ ಅಶಾಂತಿ

ಹಬ್ಬುವುದೆಂದು ಭವಿಷ್ಯ ನುಡಿಯಲಾಗಿತ್ತು. ಅನೇಕ ಪ್ರವಾದಿಗಳು ಈ ಕಾಲಘಟ್ಟದ ಬಗ್ಗೆ ಮುನ್ನೆಚ್ಚರಿಕೆ ನೀಡಿದ್ದಾರೆ. ಆ ಕಾಲದಲ್ಲಿ ಆಧ್ಯಾತ್ಮಿಕತೆ ನಾಶವಾಗುವುದೆಂದೂ ಮನುಷ್ಯರು ತಮ್ಮ ಸ್ವಂತ ನಾಶದ ಕಡೆಗೆ ಸಾಗುವರೆಂದೂ ಮುನ್ನೆಚ್ಚರಿಕೆ ನೀಡಲಾಗಿತ್ತು. ಆದರೆ ಎಲ್ಲ ಪ್ರತೀಕ್ಷೆಗಳು ಕೊನೆಗೊಂಡಿಲ್ಲ. ಮುನ್ನೆಚ್ಚರಿಕೆಗಳೊಂದಿಗೆ ಸರ್ವಶಕ್ತನಾದ ಅಲ್ಲಾಹನು ಶುಭಪ್ರತೀಕ್ಷೆಯ ಮಿಣುಕು ಬೆಳಕನ್ನು ಯಾವಾಗಲೂ ನೀಡುತ್ತಾನೆ. ಸರ್ವಶಕ್ತನಾದ ಅಲ್ಲಾಹನು ಈ ಕಾಲಘಟ್ಟದ ಬಗ್ಗೆ ಮುಂಚಿತವಾಗಿ ತಿಳಿಸಿರುವನಲ್ಲದೆ ಆ ಕಾಲಘಟ್ಟದಲ್ಲಿ ಅವನು ಪುನಃ ತನ್ನ ಆಧ್ಯಾತ್ಮಿಕ ಮಳೆಯನ್ನು ಸುರಿಸಿ ಮೃತಭೂಮಿಯನ್ನು ಪುನಶ್ಚೇತನಗೊಳಿಸುವನೆಂದೂ ಹೇಳಿದ್ದಾನೆ. ಅವನು ಒಬ್ಬ ವಿಮೋಚಕನಾದ ಮಹ್‌ದೀ ಮಸೀಹರನ್ನು ಒಬ್ಬ ವ್ಯಕ್ತಿಯ ರೂಪದಲ್ಲಿ ಕಳುಹಿಸಿ ಜನರನ್ನು ಪುನಃ ಒಗ್ಗೂಡಿಸುವನೆಂದೂ ಲೋಕದಲ್ಲಿ ಶಾಂತಿ ಸ್ಥಾಪಿಸುವನೆಂದೂ ಹೇಳಿರುವನು. ಆ ಮಹಾನುಭಾವರು ಅಲ್ಲಾಹನ ಕಡೆಗೆ ಬರಲು ಜನರಿಗೆ ಕರೆ ನೀಡುವರು ಮತ್ತು ಲೋಕದಲ್ಲಿ ದೇವರಾಜ್ಯವನ್ನು ಸ್ಥಾಪಿಸುವರು ಎಂದು ಭವಿಷ್ಯ ನುಡಿಯಲಾಗಿದೆ.

ಈ ಭವಿಷ್ಯವಾಣಿಗಳ ಪ್ರಕಾರ, ಆ ಮಹಾನುಭಾವರು 126 ವರ್ಷಗಳಿಗಿಂತ ಹಿಂದೆ ಶಾಂತಿ, ಪ್ರೀತಿ ಮತ್ತು ಸೌಹಾರ್ದದ ದೀವಟಿಗೆ ಹಿಡಿದುಕೊಂಡು ಆಗಮಿಸಿದರು. ಅವರು ಮಾನವರನ್ನೆಲ್ಲ ಒಂದು ಪತಾಕೆಯ ಕೆಳಗೆ ಜಮಾಯಿಸಲು ಆಗಮಿಸಿದರು. ಅವರು ನೈತಿಕ ಮೌಲ್ಯಗಳನ್ನು ಉಪದೇಶಿಸಲು ಮತ್ತು ಸಂಘರ್ಷವನ್ನೂ ಯುದ್ಧವನ್ನೂ ಕೊನೆಗೊಳಿಸಲು ಆಗಮಿಸಿದರು. ದೇವನಿಂದ ಆಗಮಿಸಿದ ಈ ಮಹಾನುಭಾವರು ಲೋಕದಲ್ಲಿ ವಾಸ್ತವಿಕ ಶಾಂತಿ ಸ್ಥಾಪನೆಯ ಅಸ್ತಿಭಾರವನ್ನು ಹಾಕಿದರು. ಅದೇ ರೀತಿ ಭವಿಷ್ಯವಾಣಿಗಳ ಪ್ರಕಾರ ಈ ಮಹಾನುಭಾವರ ನಂತರ ಆಧ್ಯಾತ್ಮಿಕ ನಾಯಕತ್ವದ ವ್ಯವಸ್ಥೆ ಜಾರಿಗೊಂಡಿತು. ಈ ವ್ಯವಸ್ಥೆ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸುವುದರಲ್ಲಿ ಮುಂಚೂಣಿಯಲ್ಲಿದೆ. ಈ ವ್ಯವಸ್ಥೆಯೇ ಅಹ್ಮದಿಯಾ *ಖಿಲಾಫತ್* ಆಗಿದೆ.

ಈ ಕಾಲದ *ಖಲೀಫತುಲ್* ಮಸೀಹ್ (ವಾಗ್ದತ್ತ ಮಸೀಹರ *ಖಲೀಫ*) ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಲೋಕದಲ್ಲಿ ಶಾಂತಿ ಸ್ಥಾಪಿಸುವುದಕ್ಕೆ ಪ್ರಯತ್ನ ಮಾಡುವುದರಲ್ಲಿ ಅಗ್ರಗಣ್ಯರಾಗಿದ್ದಾರೆ. ಅವರು ಸ್ವತಃ ಶಾಂತಿ ಸಂದೇಶವನ್ನು ವಾಶಿಂಗ್‌ಟನ್‌ನಲ್ಲಿರುವ ಕೆಪಿಟೋಲ್ ಹಿಲ್‌ಗೆ, ಬ್ರುಸ್ಸೆಲ್ಸ್‌ನಲ್ಲಿರುವ ಯುರೋಪಿಯನ್ ಪಾರ್ಲಿಮೆಂಟಿಗೆ, ಲಂಡನಿನಲ್ಲಿರುವ ಪಾರ್ಲಿಮೆಂಟ್ ಹೌಸಿಗೆ ತಲಪಿಸಿದರು. ಅವರು ಜಾಗತಿಕ ನಾಯಕರಿಗೆ ಪತ್ರಗಳನ್ನು ಬರೆದಿರುವರು. ಪುಟಿನ್, ಒಬಾಮ, ಪೋಪ್ ಬೆನಡಿಕ್ಟ್, ಆಯತುಲ್ಲಾ ಖಾಮೆನೈ, ನೆತನ್‌ಯಾಹೂ, ಅಹ್ಮದ್ ನೆಜಾದ್, ಡೇವಿಡ್ ಕೆಮರೂನ್ ಮತ್ತು ಏಂಜೆಲಾ ಮೆರ್‌ಕೆಲ್ ಅವರು ಪತ್ರ ಬರೆದವರಲ್ಲಿ ಕೆಲವರಾಗಿದ್ದಾರೆ. ಅವರು ತನ್ನ ಪತ್ರಗಳಲ್ಲಿ ಮೇಲೆ ಉಲ್ಲೇಖಿಸಿದ ಜನರು ಜಾಗತಿಕ ಶಾಂತಿಯನ್ನು ಸ್ಥಾಪಿಸಲು ಅವರಿಗಿರುವ ಹೊಣೆಗಾರಿಕೆಗಳನ್ನು ಮತ್ತು ಶಾಂತಿ ಸ್ಥಾಪಿಸಲು ಆವಶ್ಯಕವಾಗಿ ಅವರು ಮಾಡಬೇಕಾದುದನ್ನು ವಿವರಿಸಿದ್ದರು.

ವಾಗ್ದತ್ತ ಮಸೀಹರ ಖಲೀಫ ಲೋಕದಲ್ಲಿ ಪೂರ್ಣವಾಗಿ ಸಂಘಟಿತವಾಗಿರುವ ಅತ್ಯಂತ ದೊಡ್ಡ ಮುಸ್ಲಿಮ್ ಗುಂಪಿನ ನಾಯಕರಾಗಿದ್ದಾರೆ. ಇಸ್ಲಾಮಿನ ಹೆಸರಿನಲ್ಲಿ ಮತ್ತು ಇತರ ಧರ್ಮದ ಹೆಸರಿನಲ್ಲಿ ನಡೆಸಲಾಗುವ ಉಗ್ರಗಾಮಿ ಕೃತ್ಯಗಳನ್ನೂ ಹಿಂಸಾಚಾರಗಳನ್ನೂ ಅವರು ಧೈರ್ಯದಿಂದ ಖಂಡಿಸಿರುವರು.

ಇಂದಿನ ಕಾಲದಲ್ಲಿ ಲೋಕದಲ್ಲಿ ಶಾಂತಿ ರಾಹಿತ್ಯಕ್ಕೆ ಕಾರಣ ಇಸ್ಲಾಮ್ ಧರ್ಮ ಎಂದು ಆಪಾದಿಸಲಾಗುತ್ತಿದೆ. ಆದರೆ ಇಸ್ಲಾಮಿನ ನೈಜ ಉಪದೇಶಗಳ ಪ್ರಕಾರ ಹಝ್ರತ್ ಖಲೀಫತುಲ್ ಮಸೀಹರು **"ಎಲ್ಲರೊಂದಿಗೆ ಪ್ರೀತಿ ಯಾರೊಂದಿಗೂ ದ್ವೇಷವಿಲ್ಲ"** ಎಂಬ ಸಂದೇಶವನ್ನು ನೀಡಿರುವರು. ಮುಸ್ಲಿಮ್ ನಾಮಧಾರಿಗಳ ದುಷ್ಕರ್ಮಗಳ ಬಗ್ಗೆ ಅವರು ಹೀಗೆ ಹೇಳಿರುವರು:

*"ಲೋಕದಲ್ಲಿ ವಾಸ್ತವಿಕ ಶಾಂತಿ ಸ್ಥಾಪಿಸಲ್ಪಡಬೇಕಾದರೆ ಮಾನವರು ತಮ್ಮ ಸೃಷ್ಟಿಕರ್ತನನ್ನು ಗುರುತಿಸಬೇಕು ಮತ್ತು ಅವನ ಮುಂದೆ ಬಾಗಬೇಕು. ಇಸ್ಲಾಮಿನ ಪವಿತ್ರ ಪೈಗಂಬರರು(ಸ) ಹೀಗೆ ಮುನ್ನೆಚ್ಚರಿಕೆ ನೀಡಿದ್ದಾರೆ: ಒಂದು ಕಾಲ ಬರಲಿದೆ, ಆಗ ಮುಸ್ಲಿಮರು ಇಸ್ಲಾಮಿನ ನೈಜ ತತ್ವಗಳನ್ನು ಮರೆತು ಬಿಡುವರು ಮತ್ತು ದೇವನ ಕಡೆಗೆ ಅರ್ಹವಾದ ರೀತಿಯಲ್ಲಿ ನಿಷ್ಠೆ ಹೊಂದದೆ ಕೇವಲ ಬಾಯಿ ಮಾತಿನಲ್ಲಿ ತಮ್ಮ ವಿಶ್ವಾಸವನ್ನು ಪ್ರಕಟಿಸುವರು. ಇದೇ ರೀತಿ ಇತರ ಧರ್ಮದವರು ಸಹ ತಮ್ಮ ಸೃಷ್ಟಿಕರ್ತನನ್ನು ಗುರುತಿಸಲಾರರು. ಧರ್ಮದಲ್ಲಿ ನಂಬಿಕೆಯಿಲ್ಲದವರು ಸೃಷ್ಟಿಕರ್ತನ ಅಸ್ತಿತ್ವವನ್ನೇ ನಿರಾಕರಿಸುವರು. ಪವಿತ್ರ ಪೈಗಂಬರರು ಪ್ರಸ್ತಾಪಿಸಿದ ದೇವನು ಜಗತ್ತಿನ ಸೃಷ್ಟಿಕರ್ತನಾಗಿದ್ದಾನೆ. ಅವನ ಅನೇಕ ಗುಣವಿಶೇಷಗಳಲ್ಲಿ ಒಂದು 'ಸಲಾಮ್' ಎಂದಾಗಿದೆ. ಅಂದರೆ, ಶಾಂತಿಯ ಉದ್ಭವಸ್ಥಾನ ಅವನಾಗಿದ್ದಾನೆ...... ಸಲಾಮ್ ಎಂಬ ಪದದ ಅರ್ಥ ಲೋಕದಲ್ಲಿ ಶಾಂತಿ ಸ್ಥಾಪಿಸುವವನು ಮತ್ತು ಎಲ್ಲ ಶಾಂತಿಯನ್ನು ಹೊರ ಹೊಮ್ಮಿಸುವ ಪ್ರಕಾಶ ಎಂದಾಗಿದೆ. ಎಲ್ಲ ಶಾಂತಿಯು ಉದ್ಭವಸ್ಥಾನವಾಗಿರುವ ದೇವನು ಎಲ್ಲ ಮಾನವರಿಗೆ ಶಾಂತಿ ಮತ್ತು ಸೌಹಾರ್ದವನ್ನು ಆಶಿಸುತ್ತಾನೆ. ಮಕ್ಕಳು ಜಗಳಮಾಡಿ ಮನೆಯ ಶಾಂತಿಯನ್ನು ಕೆಡಿಸುವುದನ್ನು ತಂದೆತಾಯಂದಿರು ಇಷ್ಟಪಡದ ಹಾಗೆಯೇ ಸರ್ವಶಕ್ತನಾದ ಅಲ್ಲಾಹನು ತನ್ನ ಸೃಷ್ಟಿಗಳಲ್ಲಿ ಅವ್ಯವಸ್ಥೆಯನ್ನೂ ಸಂಘರ್ಷವನ್ನೂ ಇಷ್ಟಪಡುವುದಿಲ್ಲ."*

(ರಿವ್ಯೂ ಆಫ್ ರಿಲೀಜನ್ಸ್ ಮಾಸಿಕ– ಜುಲೈ 2015)

ಅವರು ಹೀಗೆ ಸಹ ಹೇಳಿದರು:

*"ದೇವನಿಗೆ ತನ್ನ ಸೃಷ್ಟಿಗಳ ಬಗ್ಗೆ ಇರುವ ಪ್ರೀತಿ ಮತ್ತು ವಾತ್ಸಲ್ಯ ಅನುಪಮೇಯವೂ ಅದ್ವಿತೀಯವೂ ಆಗಿದೆ. ಅವನು ದಯಾವಂತನೂ ಕಾರುಣ್ಯನಿಧಿಯೂ ಆಗಿದ್ದಾನೆ. ಅವನು ಶಾಂತಿಯ ಉಗಮಸ್ಥಾನವಾಗಿದ್ದಾನೆ. ಆದುದರಿಂದ ಇಸ್ಲಾಮ್ ಧರ್ಮ ಮುಸ್ಲಿಮರೊಂದಿಗೆ ಸರ್ವಶಕ್ತನಾದ ದೇವನ ಗುಣಗಳನ್ನು ಹೊಂದಬೇಕೆಂದು ಆದೇಶಿಸುವಾಗ ಒಬ್ಬ ನೈಜ ಮುಸ್ಲಿಮನಿಗೆ, ಅನ್ಯರಿಗೆ ಹಾನಿಯನ್ನುಂಟುಮಾಡುವುದು ಅಸಾಧ್ಯವಾಗುತ್ತದೆ. ನೈಜ ಮುಸ್ಲಿಮನ ಧಾರ್ಮಿಕ ವಿಶ್ವಾಸ, ಅವನನ್ನು ಎಲ್ಲ ಮನುಷ್ಯರನ್ನು ಪ್ರೀತಿಸಲು ಮತ್ತು ಪ್ರತಿಯೊಬ್ಬನೊಂದಿಗೆ ಗೌರವ, ಕರುಣೆ ಮತ್ತು ಸಹಾನುಭೂತಿಯಿಂದ ವರ್ತಿಸಲು ನಿರ್ಬಂಧಿಸುತ್ತದೆ."* (ರಿವ್ಯೂ ಆಫ್ ರಿಲೀಜನ್ಸ್ – ನವೆಂಬರ್ 2015).

ಪ್ರತಿ ಶುಕ್ರವಾರ ಹಝ್ರತ್ ಖಲೀಫರು 208 ದೇಶಗಳಲ್ಲಿರುವ ತನ್ನ ಮಿಲಿಯಗಟ್ಟಲೆ ಅನುಯಾಯಿಗಳ ಹೃದಯಗಳನ್ನು ಶಾಂತಿ, ಸಹನೆ, ನ್ಯಾಯ, ಸಮಾನತೆ, ಪರಸ್ಪರ ಗೌರವ, ಸಹಬಾಳ್ವೆ, ಸೌಹಾರ್ದ ಮತ್ತು ದೇಶ ಸೇವೆಗೆ ಸಂಬಂಧಿಸಿದ ಉಪದೇಶಗಳಿಂದ ತುಂಬಿಸಿ ದೇವನಿಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸಲು ಹೇಳುತ್ತಾರೆ.

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋಚ್ಚ ನಾಯಕರಾದ ಖಲೀಫತುಲ್ ಮಸೀಹರು ಹೀಗೆ ಸಹ ಹೇಳಿದ್ದಾರೆ: **"ನಾವು ಲೋಕಕ್ಕೆ ರೋಗೋಪಶಮನವನ್ನು ಬಯಸುವವರಾಗಿದ್ದೇವೆ. ನಾವು ಲೋಕದ ಜನರನ್ನು ಒಗ್ಗೂಡಿಸಲು ಬಯಸುವವರಾಗಿದ್ದೇವೆ. ಎಲ್ಲ ವಿಧ ದ್ವೇಷ ಮತ್ತು ಹಗೆತನವನ್ನು ಪ್ರೀತಿ ಮತ್ತು ವಾತ್ಸಲ್ಯಕ್ಕೆ ಬದಲಾಯಿಸುವುದನ್ನು ಬಯಸುವವರು ನಾವಾಗಿದ್ದೇವೆ. ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ನಮಗೆ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡುವವರು ನಿಶ್ಚಯವಾಗಿಯೂ ನಾವಾಗಿದ್ದೇವೆ. ಒಬ್ಬ ಧಾರ್ಮಿಕ ನಾಯಕನೆಂಬ ನೆಲೆಯಲ್ಲಿ ನಾನು ಹೇಳಲು ಬಯಸುವುದೇನೆಂದರೆ, ಒಬ್ಬರಿನ್ನೊಬ್ಬರನ್ನು ದೂಷಿಸುವುದಕ್ಕೆ ಮತ್ತು ಉದ್ರೇಕಿಸುವುದಕ್ಕೆ ಬದಲಾಗಿ ನಾವು ಸ್ಥಿರವಾಗಿ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸುವ ಬಗ್ಗೆ ನಮ್ಮ ಪ್ರಯತ್ನಗಳನ್ನು ಕೇಂದ್ರೀಕರಿಸಬೇಕಾಗಿದೆ."** (ರಿವ್ಯೂ ಆಫ್ ರಿಲೀಜನ್ಸ್ – ನವೆಂಬರ್ 2015).

ಅವರ ಪ್ರಯತ್ನಗಳು ಕೇವಲ ಮಾತುಗಳಿಗೆ ಸೀಮಿತವಾಗಿಲ್ಲ. ಅವರು ನೈಜ ಶಾಂತಿಯ ಸಾರರೂಪವಾಗಿದ್ದಾರೆ. ಲೋಕದಾದ್ಯಂತ ಶಾಂತಿಯನ್ನು ಹರಡಲು ಅವರು ಅನೇಕ ಯೋಜನೆಗಳನ್ನು ರೂಪಿಸಿದ್ದಾರೆ. ನೈಜ ಇಸ್ಲಾಮೀ ತತ್ವಗಳ ಪ್ರಕಾರ ದೇವಾರಾಧನೆಯ ಹಾಗೆಯೇ ಮಾನವರ ಸೇವೆಯು ಇಸ್ಲಾಮ್ ಧರ್ಮದ ಪ್ರಮುಖ ತತ್ವವಾಗಿದೆ. ಇವೆರಡು ಬೇರ್ಪಡಿಸಲಾಗದವುಗಳಾಗಿವೆ. ನೀವು ಒಬ್ಬ ಕಲಾವಿದನನ್ನು ಪ್ರೀತಿಸುವಿರಾದರೆ ಅವನ ಕೃತಿಯನ್ನೂ ಪ್ರೀತಿಸಬೇಕು. ಖಿಲಾಫತ್ ವ್ಯವಸ್ಥೆಯ ಅಧೀನದಲ್ಲಿದ್ದುಕೊಂಡು ಅಹ್ಮದೀ ಮುಸ್ಲಿಮರು ಇಸ್ಲಾಮಿನ ಮೂಲತತ್ವಗಳನ್ನು ಅನುಸರಿಸಿ ತಮ್ಮ ದೇಶಗಳ ಸೇವೆಯಲ್ಲಿ ನಿರತರಾಗಿದ್ದಾರೆ. ರಕ್ತದಾನ, ದಾನಧರ್ಮ, ಬಡವರಿಗೆ ಅನ್ನೋಪಚಾರ, ವಿದ್ಯಾಭ್ಯಾಸ, ವಿಪತ್ತುಗಳ ಕಾಲದಲ್ಲಿ ಪರಿಹಾರ ಕ್ರಮಗಳು, ಅಭಿವೃದ್ಧಿಶೀಲ ದೇಶಗಳ ಜನರ ಜೀವಿತ ಮಟ್ಟದ ಸುಧಾರಣೆ ಮೊದಲಾದ ಕೆಲಸಗಳು ಜಾಗತಿಕ ಶಾಂತಿ ಸ್ಥಾಪನೆಗೆ ಕೈಗೊಳ್ಳಲಾಗುವ ಅದ್ವಿತೀಯ ಕ್ರಮಗಳಾಗಿವೆ. ಸಂಘಟನೆಯ ವತಿಯಿಂದ ವಾರ್ಷಿಕ ಪೀಸ್ ಸಿಂಪೋಸಿಯಮ್ (ಶಾಂತಿ ಸಮ್ಮೇಳನ) ಲಂಡನ್‌ನಲ್ಲಿ ಜರಗಿಸಲ್ಪಡುತ್ತಿದೆ. ಅದರಲ್ಲಿ ರಾಜಕಾರಣಿಗಳು ಮತ್ತು ಧಾರ್ಮಿಕ ನಾಯಕರು ಅತಿಥಿಗಳಾಗಿ ಆಗಮಿಸುತ್ತಾರೆ ಮತ್ತು ಬಹಿರಂಗ ಚರ್ಚೆಗಳಲ್ಲಿ ಭಾಗವಹಿಸುತ್ತಾರೆ.

ಎಚ್ಚರಿಕೆ ನೀಡುವಂತಹ ಸಂಖ್ಯೆಯಲ್ಲಿ ಯುವ ಜನರು ಉಗ್ರಗಾಮಿಗಳಾಗುವುದು ಆತಂಕದಾಯಕವಾಗಿದೆ. ಆದರೆ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಯುವ ಜನರ ಬಗ್ಗೆ ಹೇಳುವುದಾದರೆ, ಯುವಜನರ ಸಂಘಟನೆಯ ಸಮಾರಂಭಗಳಲ್ಲಿ ಅವರು ತಮ್ಮ ದೇಶಕ್ಕೋಸ್ಕರ ಅತ್ಯಂತ ಹೆಚ್ಚು ಸೇವೆ ಮಾಡುವುದಾಗಿ ಪ್ರತಿಜ್ಞೆ ಪ್ರತಿಧ್ವನಿಸುತ್ತಿರುತ್ತದೆ. ನಾವು ಜೀವಿಸುವ ದೇಶದ ಬಗ್ಗೆ ನಿಷ್ಠೆ ನಮ್ಮ ಧರ್ಮದ ಭಾಗವಾಗಿದೆ. ಕಾನೂನು ಕಾಯಿದೆಗಳನ್ನು ಪಾಲಿಸುವುದು ನಮ್ಮ ಮೂಲಭೂತ ಕರ್ತವ್ಯವಾಗಿದೆ.

ಶಾಂತಿ, ಸಹನೆ, ನ್ಯಾಯಪಾಲನೆ, ಸಮಾನತೆ, ಪರಸ್ಪರ ಗೌರವ, ಸಹಬಾಳ್ವೆ, ಸೌಹಾರ್ದ ಮತ್ತು ದೇಶಸೇವೆ, ದೇವಾರಾಧನೆ ಜೊತೆಗಿರುವ ನೈಜ ಇಸ್ಲಾಮ್ ಧರ್ಮ ತತ್ವಗಳಾಗಿವೆ. ಶಾಂತಿಭರಿತ, ಸೌಹಾರ್ದಮಯ ಲೋಕದ ಸ್ಥಾಪನೆಗೆ ಇವು ಮೂಲಭೂತ ತತ್ವಗಳಾಗಿವೆ. ನಮ್ಮ ಖಿಲಾಫತ್ ಮತ್ತು ನಮ್ಮ ಜಮಾಅತಿನ ಪ್ರತಿಯೊಬ್ಬ ಸದಸ್ಯ ಪ್ರತಿಪಾದಿಸುವ ತತ್ವ ಇದೇ ಆಗಿದೆ.

ವಾಗ್ದತ್ತ ಮಸೀಹರ ಖಲೀಫರು ಮತ ಪ್ರಚಾರಕರಿಗೆ ತರಬೇತಿ ಕೊಡುವ ಕಾಲೇಜುಗಳನ್ನು ಹಲವು ದೇಶಗಳಲ್ಲಿ ಸ್ಥಾಪಿಸಿದ್ದಾರೆ. ನಮಾಝ್‌ಗೆ ನೇತೃತ್ವ ಕೊಡುವ ಇಮಾಮರನ್ನೂ ಮತಪ್ರಚಾರಕರನ್ನೂ ಅಲ್ಲಿ ತರಬೇತಿಗೊಳಪಡಿಸಿ ಅವರು ನೈಜ ಇಸ್ಲಾಮೀ ತತ್ವಗಳನ್ನು ಕಲಿತು ಸಂಘಟನೆಯ ಎಲ್ಲರಿಗೂ ಕಲಿಸಲು ಮತ್ತು ತಥಾಕಥಿತ **"ಮುಸ್ಲಿಮ್ ಉಗ್ರವಾದಿಗಳು"** ಇಸ್ಲಾಮಿನ ಬಗ್ಗೆ ತಪ್ಪಾಗಿ ಚಿತ್ರಿಸಿದುದಕ್ಕೆ ವಿರುದ್ಧವಾಗಿ ನೈಜ ಇಸ್ಲಾಮೀ ತತ್ವಗಳನ್ನು ಪ್ರಚಾರ ಮಾಡಲು ವ್ಯವಸ್ಥೆ ಮಾಡಲಾಗಿದೆ. ನಾವು ಆಸ್ಪತ್ರೆಗಳನ್ನೂ ಶಾಲೆಗಳನ್ನೂ ಸ್ಥಾಪಿಸಿ ಎಲ್ಲ ಧರ್ಮಗಳ ಜನರಿಗೆ ವಿವಿಧ ದೇಶಗಳಲ್ಲಿ ಸೇವೆ ಸಲ್ಲಿಸುತ್ತಿದ್ದೇವೆ.

ಇನ್ನೊಂದು ಆತಂಕಗೊಳಿಸುವ ವಿಷಯ ಕೆರಳಿಸುವುದಕ್ಕೆ ನೀಡುವ ಉತ್ತರವಾಗಿದೆ. ಅದರ ಮೂಲಕ ಸಮಾಜದಲ್ಲಿ ಶಾಂತಿಭಂಗವಾಗುತ್ತದೆ. ಆದರೆ ಪಾಕಿಸ್ಥಾನದಲ್ಲಿ ಸರಕಾರಿ ಬೆಂಬಲಿತವಾದ ಹಿಂಸಾಚಾರ ಜಾರಿಯಲ್ಲಿದ್ದರೂ ಅಹ್ಮದೀ ಮುಸ್ಲಿಮರಿಗೆ ಬಹಿಷ್ಕಾರವಿದ್ದರೂ ಅವರನ್ನು ಹುತಾತ್ಮರನ್ನಾಗಿ ಮಾಡಿದ್ದರೂ (ಲಾಹೋರಿನಲ್ಲಿ ಎರಡು ಮಸ್‌ಜಿದ್‌ಗಳಲ್ಲಿ ನಮಾಝ್ ಮಾಡಲು ಜಮಾಯಿಸಿದ್ದ 80 ಅಹ್ಮದಿಯರನ್ನು ಹತ್ಯೆ ಮಾಡಲಾಗಿತ್ತು) ಅಹ್ಮದಿಯರು ಎಂದೂ ಪ್ರತಿಕಾರ ಮಾಡುವುದಿಲ್ಲ. ಅವರು ವಾಗ್ದತ್ತ ಮಸೀಹರ ಖಲೀಫರ ಮಾರ್ಗದರ್ಶನ ಪ್ರಕಾರ ಅಲ್ಲಾಹನ ಕಡೆಗೆ ಬಾಗಿಕೊಂಡು ಅವನಲ್ಲಿ ಭರವಸೆ ಇರಿಸುತ್ತಾರೆ.

ಇತ್ತೀಚೆಗೆ ಪಶ್ಚಿಮದ ಸಂಪರ್ಕ ಮಾಧ್ಯಮಗಳಲ್ಲಿ ಮುಸ್ಲಿಮ್ ವಿರುದ್ಧ ಭಾವನೆಗಳು ವರ್ಧಿಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ನಮಗೆ ಅತ್ಯಂತ ಪ್ರಿಯರಾದ ಪೈಗಂಬರರನ್ನು[ಸ] ಅತ್ಯಂತ ಅಪಮಾನಕರವಾಗಿ ವ್ಯಂಗ್ಯ ಚಿತ್ರಗಳಲ್ಲಿ ಚಿತ್ರಿಸಲಾಗಿದೆ. ಮುಸ್ಲಿಮ್ ನಾಮಧಾರಿಗಳಲ್ಲಿ ಕೆಲವರು ಇದರ ವಿರುದ್ಧ ಹಿಂಸಾತ್ಮಕವಾಗಿ ಪ್ರತಿಭಟಿಸಿದ್ದಾರೆ ಮತ್ತು ದೇಶಗಳ ಮತ್ತು ಸಂಸ್ಥೆಗಳ ಪತಾಕೆಗಳಿಗೂ ಲಾಂಛನಗಳಿಗೂ ಗೌರವಹಾನಿ ಮಾಡಿದ್ದಾರೆ. ಆದರೆ ವಾಗ್ದತ್ತ ಮಸೀಹರ ಖಲೀಫರು ಶಕ್ತಿಶಾಲಿ ಪ್ರವಚನಗಳ ಮೂಲಕ ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಮಾದರಿ ಜೀವನವನ್ನು ಚಿತ್ರಿಸಿದ್ದಾರೆ ಮತ್ತು ಮುಸ್ಲಿಮರು ಲೇಖನಿಯ ಜಿಹಾದ್ ಮೂಲಕ ಪ್ರತಿಭಟಿಸಬೇಕೆಂದೂ ಮಾಧ್ಯಮಗಳಲ್ಲಿ ಲೇಖನಗಳನ್ನು ಪ್ರಕಟಿಸಿ ಹಝ್ರತ್ ಪೈಗಂಬರರ[ಸ] ಪರಿಶುದ್ಧ ಜೀವಿತವನ್ನು ವಿವರಿಸಬೇಕೆಂದೂ ಹೇಳಿದ್ದಾರೆ.

ವಾಗ್ದತ್ತ ಮಸೀಹರ ಖಲೀಫರ ಆದೇಶ ಪ್ರಕಾರ ಶಾಂತಿಯನ್ನು ಪ್ರತಿಪಾದಿಸುವ ಮಿಲಿಯಗಟ್ಟಲೆ ಕರಪತ್ರಗಳನ್ನೂ ಸಂದೇಶಗಳನ್ನೂ ಲೋಕದಾದ್ಯಂತ ವಿತರಿಸಲಾಗಿದೆ. ಹಝ್ರತ್ ಖಲೀಫರು ಜನರ ಅಭಿಪ್ರಾಯಗಳನ್ನು ಬದಲಾಯಿಸುವಂತೆ ಮಾಡುತ್ತಿದ್ದಾರೆ ಮತ್ತು ಸ್ನೇಹ ಗಳಿಸುತ್ತಿದ್ದಾರೆ. ಅವರ ಉದ್ದೇಶಲಕ್ಷ್ಯಗಳು ಲೌಕಿಕ ಉದ್ದೇಶಲಕ್ಷ್ಯಗಳಿಗಿಂತ ಉನ್ನತವಾಗಿದ್ದು ಅವರು ಸೃಷ್ಟಿಕರ್ತನಾದ ಅಲ್ಲಾಹನ ಸಂಪ್ರೀತಿಗಳಿಸುವ ಏಕಮಾತ್ರ ಅಭಿಲಾಷೆಯಿಂದ ಪ್ರೇರಿತರಾಗಿರುತ್ತಾರೆ. ಭೂಮಿಯಲ್ಲಿ ಶಾಂತಿ ಸ್ಥಾಪಿಸುವ ಅಸ್ತಿಭಾರ ಇದಾಗಿದೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಮಿಲಿಯಗಟ್ಟಲೆ ಮುಸ್ಲಿಮರು ಖಲೀಫರ ಅಧೀನದಲ್ಲಿ ಒಗ್ಗೂಡಿದ್ದಾರೆ. ಅವರೆಲ್ಲರೂ ಖಲೀಫರನ್ನು ಶಾಂತಿಗೆ ತಮ್ಮ ಮಾರ್ಗದರ್ಶನದ ಜ್ಯೋತಿಯಾಗಿ ಕಾಣುತ್ತಾರೆ. ಖಲೀಫರ ಪ್ರಾರ್ಥನೆಗಳು ಮತ್ತು ಜಮಾಅತಿನ ಸದಸ್ಯರೊಂದಿಗೆ ನೇರ ಸಂಪರ್ಕ ಆಂತರಿಕ ಶಾಂತಿ ಮತ್ತು ಸಮಾಧಾನವನ್ನು ನೀಡುತ್ತಿದೆ.

ಹಝ್ರತ್ ಖಲೀಫರ ನೇತೃತ್ವದಲ್ಲಿ ಇಸ್ಲಾಮಿನ ಶಾಂತಿ ಸಂದೇಶವನ್ನು ಲೋಕದ ಮೂಲೆ ಮೂಲೆಗಳಿಗೆ ಹರಡಲಾಗುತ್ತಿದೆ. ಮಿಲಿಯಗಟ್ಟಲೆ ಜನರು ಖಲೀಫರೊಂದಿಗೆ ಪ್ರತಿವರ್ಷ ಶಾಂತಿ ಪ್ರಚಾರಕ್ಕೆ ಸೇರುತ್ತಿದ್ದಾರೆ. ಲೋಕವು ದಾಟಿ ಹೋಗುತ್ತಿರುವ ಪ್ರಕ್ಷುಬ್ಧ ಪರಿಸ್ಥಿತಿಗೆ ಪರಿಹಾರ ಮಾರ್ಗವನ್ನು ಅವರಿಗೆ ತೋರಿಸಿಕೊಡಲಾಗಿದೆ. ಸಾಮರಸ್ಯ, ನ್ಯಾಯಪಾಲನೆ, ಸಮಾನತೆ, ನೈಜ ಶಾಂತಿ ಸ್ಥಾಪಿಸುವ ಕೀಲಿಗೈ ಅವರಿಗೆ ನೀಡಲಾಗಿದೆ. ಅವು ಇಸ್ಲಾಮಿನ ನೈಜ ತತ್ವಗಳಾಗಿವೆ. ಶಾಂತಿ, ಐಕ್ಯ ಮತ್ತು "ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ" ಎಂಬುದು ಆ ತತ್ವವಾಗಿದೆ. ಪ್ರೀತಿಯು ದ್ವೇಷವನ್ನು ಜಯಿಸುವುದು; ಪ್ರಕಾಶವು ಅಂಧಕಾರವನ್ನು ಜಯಿಸುವುದು– ಅನೇಕ ವರ್ಷಗಳ ಹಿಂದೆ ಭವಿಷ್ಯ ನುಡಿಯಲ್ಪಟ್ಟ ಹಾಗೆ.

---

**ಕವನ**

## ಝುಂ ಝುಂ

**ಕೆ.ಎಂ ಉಮರ್. ಮಡಿಕೇರಿ**

ನಿರ್ಜನ ಮರಳು ಕಾಡಿನ ನಡುವೆ ಕುಡಿಯಲು ನೀರಿನ ಹನಿಯಿಲ್ಲ
ಸೂರ್ಯನ ತಾಪಕ್ಕೆ ಹತ್ತಿ ಉರಿಯುವ ಬಿಸಿಲಲ್ಲದೆ ನೆರಳಿಲ್ಲ

ಪುಟ್ಟ ಕೂಸು ಇಸ್ಮಾಈಲರ ಜೊತೆ ಪತ್ನಿ ಹಾಜರರನು ನಿಲ್ಲಿಸುತ
ಮರಳುವ ವೇಳೆ ಕೇಳಿದರಾ ಸತಿ ಮಾನ್ಯ ಇಬ್‌ರಾಹೀಂ ಪ್ರವಾದಿಯಲಿ

ದೇವನ ಆಜ್ಞೆಯೊ, ತಮ್ಮ ನಿರ್ಧಾರವೊ ತಿಳಿಸಲೆಬೇಕು ನೀವೀಗ
ಉತ್ತರ ಹೇಳಲು ಸಾಧ್ಯವಾಗದೆ ಕಂಪನಗೊಂಡಿತು ಕೈಕಾಲು

ಉದುರುವ ಕಣ್ಣೀರೊರೆಸುತ ಕರಗಳ ಚಾಚಿದರಾ ನಬಿ ಗಗನಕ್ಕೆ
ಉತ್ತರ ಲಭಿಸಿದ ಹಾಜರ ಬೀಬಿಯು ನುಡಿದರು ಧೈರ್ಯದಿ ಸುತನಲ್ಲಿ

ಸರ್ವಾಧಿನಾಥನ ಆಜ್ಞೆಯು ಆದರೆ ಹೆದರಿಕೆ ತೆಗೆಯಿರಿ ಮನದಿಂದ
ಪರ್ವತ ಶಿಖರವು ಜೊತೆಗಿದೆ ನಮಗೆ ಸರ್ವಾಧಿನಾಥನ ದಯೆಯಿಂದ

ಅಲ್ಪ ಸ್ವಲ್ಪ ಆಹಾರ ಪಾನೀಯಗಳ ಪತ್ನಿಗೂ ಶಿಶುವಿಗೂ ಅರ್ಪಿಸುತ
ಅಲ್ಲಾಹನಲ್ಲಿ ಭಾರವ ಹೇರಿ ಮರಳಿದರಾ ನಬಿ ಕಂಪಿಸುತ

ಕೈಯಲ್ಲಿದ್ದ ಆಹಾರ ಪಾನೀಯ ಮುಗಿದೇ ಹೋದ ದಿನದಲ್ಲಿ
ಕೂಸಿನ ಗೋಳನು ಕಾಣಲು ಆಗದೆ ಕಂಗಾಲಾದರು ಹಾಜರಬಿ

ಮರಳಾರಣ್ಯದಿ ಓಡುತ ಬೆಟ್ಟದ ತುದಿಯನು ಹತ್ತಿ ನೋಡಿದರು
ಮರಳು ಕಾಡಿನ ಇನ್ನೊಂದು ಬೆಟ್ಟವ ಹತ್ತಲು ಅಲ್ಲಿಂದೋಡಿದರು

ಸಫಾ ಮರ್ವಾ ಬೆಟ್ಟಗಳೆಡೆಯಲಿ ಅತ್ತಿದಿಂತ್ತಾ ಓಡಾಡಿ
ಸಿಗದೆ ನೀರಿನ ಹನಿಯೂ ಕೂಡ ಮರಳಿದರು ಸ್ವ ಕೂಸಿನೆಡೆ

ಅದ್ಭುತ ದೃಶ್ಯವ ನೋಡಿದ ನಾರಿಯು ಕರೆದರು ಹರುಷದಿ ಯಾ ಅಲ್ಲಾಹ್
ಅಲ್ಲಾಹು ಹರಿಸಿದ ಕೂಸಿನ ಪಕ್ಕದಿ ಅದುವೇ ಝುಂ, ಝುಂ ಶುದ್ಧ ಜಲ.

# ಹಝ್ರತ್ ಮುಹಮ್ಮದ್ ಪೈಗಂಬರರು[ಸ] ಭಯೋತ್ಪಾದನೆಯನ್ನು ಎಂದೂ ಸಮರ್ಥಿಸಿರಲಿಲ್ಲ




**ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನಾಯಕ, ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಲಂಡನಿನ ಬೈತುಲ್ ಫುತೂಹ್ ಮಸ್‌ಜಿದ್‌ನಲ್ಲಿ 2016ರಲ್ಲಿ ಜರಗಿದ ಹದಿಮೂರನೆಯ ಶಾಂತಿ ಸಮ್ಮೇಳನದಲ್ಲಿ ಮಾಡಿದ ಭಾಷಣ.**

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್– ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ (ಪ್ರಾರಂಭಿಸುತ್ತೇನೆ).

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವಬರಕಾತುಹು– ಅಲ್ಲಾಹನ ಶಾಂತಿ ಮತ್ತು ಅನುಗ್ರಹ ನಿಮ್ಮೆಲ್ಲರ ಮೇಲೆ ಇರಲಿ.

ನಮ್ಮ ಆಮಂತ್ರಣವನ್ನು ಸ್ವೀಕರಿಸಿ ನಮ್ಮೊಂದಿಗೆ ಈ ದಿನ ಸಂಜೆ ಸೇರಿದ ಎಲ್ಲ ಗಣ್ಯ ಅತಿಥಿಗಳಿಗೆ ನಾನು ಮೊತ್ತ ಮೊದಲು ಕೃತಜ್ಞತೆ ಸಲ್ಲಿಸುತ್ತಿದ್ದೇನೆ. ನೀವು ಈ ಸಭೆಯಲ್ಲಿ ಹಾಜರಾಗಿರುವುದು ವಿಶಿಷ್ಟವಾಗಿ ಗಮನಾರ್ಹವಾಗಿದೆ. ಏಕೆಂದರೆ ಭಯೋತ್ಪಾದಕ ಗುಂಪುಗಳ ಹೇಯ ಮತ್ತು ಅಪಮಾನಕರ ಕುಕೃತ್ಯಗಳ ಕಾರಣದಿಂದ ಇಸ್ಲಾಮಿನ ಬಗ್ಗೆ ಭಯವು ವ್ಯಾಪಕವಾಗಿ ಹರಡಿದೆ.

ಉದಾಹರಣೆಗೆ, ಕಳೆದ ವರ್ಷ ನವೆಂಬರಿನಲ್ಲಿ ಪ್ಯಾರಿಸ್‌ನಲ್ಲಿ ಭಯೋತ್ಪಾದಕರು ನಡೆಸಿದ ಆಕ್ರಮಣವನ್ನು ಲೋಕವು ಭಯವಿಹ್ವಲತೆಯಿಂದ ವೀಕ್ಷಿಸಿತು. ಇದಲ್ಲದೆ ಲೋಕದ ವಿವಿಧ ದೇಶಗಳಲ್ಲಿ ಅತ್ಮಹತ್ಯಾ ಬಾಂಬ್ ದಾಳಿಗಳೂ ಆಕ್ರಮಣಗಳೂ ವಿವಿಧ ಸಂದರ್ಭಗಳಲ್ಲಿ ನಡೆದುವು. ಯುನೈಟೆಡ್ ಕಿಂಗ್‌ಡಮ್ (ಯು.ಕೆ.) ಬಗ್ಗೆ ಹೇಳುವುದಾದರೆ, ಇತ್ತೀಚೆಗೆ ಅಸಿಸ್ಟೆಂಟ್ ಕಮಿಶನರ್ ಆಫ್ ಪೊಲೀಸ್, ದಾಯೆಶ್ (IS) ಬಗ್ಗೆ ಹೀಗೆ ಮುನ್ನೆಚ್ಚರಿಕೆ ನೀಡಿದ್ದಾರೆ: ಅದು ಬೃಹತ್ ಪ್ರಮಾಣದ ಮತ್ತು ವಿಸ್ಮಯಕರ ಭಯೋತ್ಪಾದಕ ಆಕ್ರಮಣಗಳನ್ನು ಉನ್ನತ ಶ್ರೇಣಿಯ ಸಾರ್ವಜನಿಕ ಪ್ರದೇಶಗಳಲ್ಲಿ ನಡೆಸಬಹುದು.

ಕಳೆದ ವರ್ಷ ಯುರೋಪಿಗೆ ತೀವ್ರಗತಿಯಲ್ಲಿ ನಿರಾಶ್ರಿತರ ಒಳನುಗ್ಗುವಿಕೆ ಪ್ರಾರಂಭವಾಗಿದ್ದು ಇದರಿಂದ ಅನೇಕ ಜನರಲ್ಲಿ ಭಯ, ಅನಿಶ್ಚಿತತೆ, ಆತಂಕ ತಲೆದೋರಿದೆ. ಇಂತಹ ಪರಿಸ್ಥಿತಿಯಲ್ಲಿ ಒಂದು ಮುಸ್ಲಿಮ್ ಸಮುದಾಯ ಏರ್ಪಡಿಸಿದ ಸಭೆಯಲ್ಲಿ ಮುಸ್ಲಿಮೇತರರಾದ ನೀವು ಸಂತೋಷದಿಂದ ಭಾಗವಹಿಸಿದುದು ನೀವು ಧೈರ್ಯಶಾಲಿಗಳೂ ಸಹನೆಯುಳ್ಳವರೂ ವಿಶಾಲ ಹೃದಯಿಗಳೂ ಎಂದು ಸಾಬೀತುಗೊಳಿಸುತ್ತದೆ.

ಆದರೆ ವಾಸ್ತವಿಕವಾದುದೇನೆಂದರೆ, ನೈಜ ಇಸ್ಲಾಮ್ ಧರ್ಮದ ಬಗ್ಗೆ ಯಾರೂ ಹೆದರಬೇಕಾಗಿಲ್ಲ. ಕೆಲವು ಜನರು ಇಸ್ಲಾಮ್ ಬಗ್ಗೆ, ಅದು ಉಗ್ರಗಾಮಿಗಳ ಧರ್ಮವೆಂದೂ ಅದು ಆತ್ಮಹತ್ಯಾ ಬಾಂಬ್

ದಾಳಿಯನ್ನು ಮತ್ತು ವಿವಿಧ ರೀತಿಯ ಭಯೋತ್ಪಾದಕ ಕೃತ್ಯಗಳನ್ನು ಪ್ರೋತ್ಸಾಹಿಸುತ್ತದೆ ಎಂದೂ ವಾದಿಸುತ್ತಾರಾದರೂ ಈ ವಾದವು ಸಂಪೂರ್ಣವಾಗಿಯೂ ಸುಳ್ಳಾಗಿದೆ. ಇತ್ತೀಚೆಗೆ ಒಬ್ಬ ಪ್ರಸಿದ್ಧ ಇಂಗ್ಲಿಷ್ ಅಂಕಣಗಾರ "ಇಸ್ಲಾಮೋಫೋಬಿಯ" (ಇಸ್ಲಾಮ್ ಬಗ್ಗೆ ಭಯ) ಎಂಬ ವಿಷಯದ ಬಗ್ಗೆ ಒಂದು ರಾಷ್ಟ್ರೀಯ ಪತ್ರಿಕೆಯಲ್ಲಿ ಲೇಖನ ಬರೆದಿದ್ದರು. ಆ ಲೇಖಕ ಹೀಗೆ ಬರೆದಿದ್ದಾರೆ: ಆತ್ಮಹತ್ಯಾ ದಾಳಿಗಳ ಬಗ್ಗೆ ಬಹಳ ಸಂಶೋಧನೆ ನಡೆಸಿದ ನಂತರ ತಿಳಿದು ಬಂದುದೇನೆಂದರೆ, ಪ್ರಥಮ ಆತ್ಮಹತ್ಯಾ ದಾಳಿ ನಡೆದುದು 1980ರ ದಶಕದಲ್ಲಾಗಿದೆ. ಆದರೆ ಇಸ್ಲಾಮ್ ಕಳೆದ ಹದಿನಾಲ್ಕು ನೂರು ವರ್ಷಗಳಿಂದ ಅಸ್ತಿತ್ವದಲ್ಲಿದೆ.

ಆ ಲೇಖಕ ಹೀಗೆ ನಿಷ್ಕರ್ಷಿಸಿದರು: ಇಸ್ಲಾಮ್ ಧರ್ಮ ಆತ್ಮಹತ್ಯಾ ದಾಳಿಗಳನ್ನು ಪ್ರೋತ್ಸಾಹಿಸುವಂತಹ ಧರ್ಮವಾಗಿದ್ದರೆ ಅಂತಹ ಆಕ್ರಮಣಗಳು ಇಸ್ಲಾಮ್ ಧರ್ಮದ ಆರಂಭ ಕಾಲದಿಂದಲೇ ಪ್ರಾರಂಭವಾಗಿ ಮುಂದೆ ಅದು ತನ್ನ ಚರಿತ್ರೆಯಲ್ಲಿ ಮುಂದುವರಿಸುತ್ತಿತ್ತು.

ಈ ಲೇಖಕರ ಅಭಿಪ್ರಾಯ ಸಪ್ರಮಾಣ ಭರಿತವಾಗಿದೆ. ಈ ಆಕ್ರಮಣಗಳು ಆಧುನಿಕ ಕಾಲದ ದುಷ್ಕೃತ್ಯಗಳೆಂದೂ ಇಸ್ಲಾಮಿನ ಸತ್ಯವಾದ ಶಾಂತಿಯುತ ತತ್ವಗಳಿಂದ ದೂರಸರಿದವೆಂದೂ ಅವರು ಸಾಬೀತುಗೊಳಿಸಿದ್ದಾರೆ.

ಇಸ್ಲಾಮ್ ಧರ್ಮ ನಿಶ್ಚಯವಾಗಿಯೂ ಎಲ್ಲ ರೀತಿಗಳ ಆತ್ಮಹತ್ಯೆಗಳನ್ನು ನಿಷಿದ್ಧಗೊಳಿಸಿದೆ. ಆದುದರಿಂದ ಆತ್ಮಹತ್ಯಾ ದಾಳಿ ಮತ್ತು ಬೇರೆ ಯಾವುದೇ ರೀತಿಯ ಭೀಕರ ಕೃತ್ಯವನ್ನು ಅದು ಸಮರ್ಥಿಸುವುದಿಲ್ಲ. ಅಂತಹ ಹೇಯಕೃತ್ಯಗಳು ನಿಷ್ಕಳಂಕ ಮಹಿಳೆಯರ, ಮಕ್ಕಳ ಮತ್ತು ಇತರ ಜನರ ಕೊಲೆ ಮತ್ತು ಬರ್ಬರ ಸಾಮೂಹಿಕ ಹತ್ಯೆಯನ್ನುಂಟು ಮಾಡುತ್ತವೆ. ಅಮೇರಿಕದ ಟೆಕ್ಸಾಸ್‌ನ ಹೌಸ್ಟನ್‌ನಲ್ಲಿರುವ ರೈಸ್ ಯುನಿವರ್ಸಿಟಿಯ ಪ್ರೊಫೆಸರ್ ಡಾಕ್ಟರ್ ಕೊನ್‌ಸಿಡೈನ್ (Considine) ಹೀಗೆ ಬರೆದಿದ್ದಾರೆ: ತಥಾಕಥಿತ ಇಸ್ಲಾಮಿಕ್ ಸ್ಟೇಟ್ (IS)ನಲ್ಲಿ ಕ್ರೈಸ್ತರ ವಿರುದ್ಧ ನಡೆಸಲಾಗುವ ಹಿಂಸಾಚಾರವನ್ನು ಮುಹಮ್ಮದ್ ಪೈಗಂಬರರ(ಸ) ಉಪದೇಶಗಳ ಮೂಲಕ ಸಮರ್ಥಿಸಲು ಸಾಧ್ಯವಿಲ್ಲ. ಪೈಗಂಬರರು(ಸ) ದೂರದರ್ಶಿತ್ವದಿಂದ ನೋಡಿದ ಮುಸ್ಲಿಮ್ ರಾಷ್ಟ್ರ ಬಹುಧರ್ಮಾವಲಂಬಿಗಳಿಂದ ಕೂಡಿದುದೂ ನಾಗರಿಕ ಹಕ್ಕುಗಳನ್ನು ನೀಡುವುದೂ ಆಗಿತ್ತು.

ನಾವು ಸ್ಪಷ್ಟಪಡಿಸಲು ಬಯಸುವುದೇನೆಂದರೆ ಭೀಕರ ಕೃತ್ಯಗಳು ಇಸ್ಲಾಮ್ ಧರ್ಮ ತತ್ವಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿವೆ. ಇಸ್ಲಾಮ್ ಯುದ್ಧ ಮಾಡಲು ಎಂದಾದರೂ ಅನುಮತಿ ನೀಡಿದ್ದರೆ ಅದು ಪ್ರತಿರೋಧಕ್ಕೆ ಮಾತ್ರವಾಗಿತ್ತು. ಯುದ್ಧವನ್ನು ಮುಸ್ಲಿಮರ ಮೇಲೆ ಹೇರಲ್ಪಟ್ಟಾಗ ಮಾತ್ರ ಈ ಅನುಮತಿ ನೀಡಲಾಗಿತ್ತು. ಪವಿತ್ರ ಖುರ್‌ಆನ್ ಅಧ್ಯಾಯ 22 ವಚನ 40ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳುತ್ತಾನೆ: ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ ಪ್ರತಿ ಯುದ್ಧ ಮಾಡುವ ಅನುಮತಿ ಇದೆ. ಏಕೆಂದರೆ ಅವರು ಆಕ್ರಮಣಕ್ಕೊಳಗಾಗಿದ್ದಾರೆ. ಇದೇ ವಚನದಲ್ಲಿ ಸರ್ವಶಕ್ತನಾದ ಅಲ್ಲಾಹನು ಧಾರ್ಮಿಕ ಯುದ್ಧಗಳ ಬಗ್ಗೆ ಹೀಗೆ ಸಹ ಹೇಳುತ್ತಾನೆ: ನಿಶ್ಚಯವಾಗಿಯೂ ಅವರಿಗೆ ಸಹಾಯ ನೀಡಲು ಅಲ್ಲಾಹನಿಗೆ ಸಾಮರ್ಥ್ಯವಿದೆ.

ಇಸ್ಲಾಮಿನ ಆರಂಭದ ಕಾಲದಲ್ಲಿ ನಡೆದ ಯುದ್ಧಗಳು ವಾಸ್ತವಿಕ ಧಾರ್ಮಿಕ ಯುದ್ಧಗಳಾಗಿದ್ದುವು. ಸಾರ್ವತ್ರಿಕ ಧಾರ್ಮಿಕ ಸ್ವಾತಂತ್ರ್ಯವೆಂಬ ಮೂಲಭೂತ ತತ್ವವನ್ನು ಎತ್ತಿಹಿಡಿಯಲು ಆ ಯುದ್ಧಗಳನ್ನು ಮಾಡಲಾಗಿತ್ತು. ಚರಿತ್ರೆಯು ಸಾಬೀತುಗೊಳಿಸುವುದೇನೆಂದರೆ, ಸುಸಜ್ಜಿತ ಶತ್ರು ಸೈನ್ಯಗಳ ವಿರುದ್ಧ ಅಲ್ಪಸಂಖ್ಯೆಯಲ್ಲಿದ್ದ, ಸಾಕಷ್ಟು ಶಸ್ತ್ರಾಸ್ತ್ರಗಳಿಲ್ಲದ ಮುಸ್ಲಿಮರು ಹೋರಾಡಿದರೂ ಅವರು ವಿಜಯಶಾಲಿಗಳಾದರು.

ಆದರೆ ಇಂದಿನ ಕಾಲದಲ್ಲಿ ಮುಸ್ಲಿಮರು ತೊಡಗಿಕೊಂಡಿರುವ ಯುದ್ಧಗಳ ಬಗ್ಗೆ ಒಬ್ಬ ಮುಸ್ಲಿಮನೆಂಬ ನೆಲೆಯಲ್ಲಿ ನಾನು ವಿಶ್ಲೇಷಿಸುವಾಗ ನಾನು ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ– ಅವುಗಳನ್ನು ಧಾರ್ಮಿಕ ಯುದ್ಧಗಳೆಂದು ಹೇಳಲು ಸಾಧ್ಯವಿಲ್ಲ. ಯಾಕೆಂದರೆ ಮುಸ್ಲಿಮ್ ಲೋಕದಲ್ಲಿ ಈಗ ನಡೆಯುತ್ತಿರುವ ಯುದ್ಧಗಳಲ್ಲಿ ಬಹುಭಾಗ ಆಂತರಿಕ ಕ್ಷೋಭೆಗಳಾಗಿವೆ ಅಥವಾ ನೆರೆಹೊರೆಯ ಮುಸ್ಲಿಮ್ ದೇಶಗಳ ವಿರುದ್ಧವಾಗಿವೆ. ಯಾವುದಾದರೂ ಮುಸ್ಲಿಮೇತರ ದೇಶ ಈ ಯುದ್ಧಗಳಲ್ಲಿ ತೊಡಗಿಕೊಂಡಿದ್ದರೆ ಅದು ಆ ಯುದ್ಧಗಳನ್ನು ಧಾರ್ಮಿಕ ಯುದ್ಧವೆಂದು ಎಂದೂ ಘೋಷಿಸಿಲ್ಲ. ಅದು ಪರಸ್ಪರ ಹೋರಾಡುವ ಮುಸ್ಲಿಮ್‌ಗಳಿಗೆ ನೆರವು ನೀಡುತ್ತದಷ್ಟೆ. ಆದುದರಿಂದ ಇಂದಿನ ಕಾಲದಲ್ಲಿ ನಡೆಯುತ್ತಿರುವ ಯುದ್ಧಗಳು ಇಸ್ಲಾಮ್‌ಗೋಸ್ಕರವಾಗಲಿ, ಧರ್ಮ ರಕ್ಷಣೆಗೋಸ್ಕರವಾಗಲಿ ನಡೆಯುತ್ತಿರುವ ಯುದ್ಧಗಳಲ್ಲ. ಅವು ಆರ್ಥಿಕ ಅಥವಾ ಭೌಗೋಳಿಕ ಲಾಭಕ್ಕೋಸ್ಕರ ಯುದ್ಧಗಳಾಗಿದ್ದು ಇಸ್ಲಾಮ್ ಧರ್ಮಕ್ಕೆ ಅಪಕೀರ್ತಿಯನ್ನುಂಟು ಮಾಡುವವುಗಳಾಗಿವೆ.

ನಾನು ನಿಮ್ಮೊಂದಿಗೆ ಹೇಳಿದ ಪ್ರಕಾರ ಇಸ್ಲಾಮಿನ ಬಗ್ಗೆ ಭಯಪಡುವ ಆವಶ್ಯಕತೆಯಿಲ್ಲ ಎನ್ನುವುದು ನಿಮಗೆ ಸ್ಪಷ್ಟವಾಗಿರಬಹುದೆಂದು ನಾನು ಪ್ರತೀಕ್ಷಿಸುತ್ತೇನೆ. ಇಸ್ಲಾಮ್ ಉಗ್ರಗಾಮಿ ಧರ್ಮವಲ್ಲ ಅಥವಾ ಅದು ಆತ್ಮಹತ್ಯೆ ದಾಳಿಯನ್ನು ಅಥವಾ ಅಕ್ರಮ ಹಿಂಸಾಚಾರವನ್ನೂ ಅನುಮತಿಸುವುದಿಲ್ಲ. "ಇಸ್ಲಾಮೋಫೋಬಿಯ" (ಇಸ್ಲಾಮ್ ಬಗ್ಗೆ ಭಯ)ದ ಆವಶ್ಯಕತೆ ಇಲ್ಲ. ಯಾಕೆಂದರೆ ಇಸ್ಲಾಮ್ ಧರ್ಮದ ನೈಜ ತತ್ವಗಳು ಶಾಂತಿ, ಸಹನೆ ಮತ್ತು ಪರಸ್ಪರ ಗೌರವ ನೀಡುವಿಕೆಯನ್ನು ಪ್ರತಿಪಾದಿಸುತ್ತವೆ. ಇಸ್ಲಾಮೀ ತತ್ವಗಳು ಮಾನವೀಯ ಮೌಲ್ಯಗಳ ಬಗ್ಗೆ, ಗೌರವ ರಕ್ಷಣೆ ಬಗ್ಗೆ, ಘನತೆ ಮತ್ತು ಸ್ವಾತಂತ್ರ್ಯ ಎಲ್ಲ ಜನರಿಗೂ ಎನ್ನುವುದನ್ನು ಪ್ರತಿಪಾದಿಸುತ್ತವೆ.

ಆದರೆ ನಮಗೆ ತಿಳಿದಿರುವ ಹಾಗೆ, ಕೆಲವು ಉಗ್ರಗಾಮಿ

ತಥಾಕಥಿತ ಇಸ್ಲಾಮೀ ಗುಂಪುಗಳಿವೆ. ಅವುಗಳು ಇಸ್ಲಾಮಿನ ಹೆಸರಲ್ಲಿ ಅತ್ಯಂತ ದುಷ್ಪಕೃತ್ಯಗಳನ್ನು ನಡೆಸುತ್ತಿವೆ. ಆದರೆ ನಾನು ಇದರ ಮೊದಲು ಉಲ್ಲೇಖಿಸಿದ ಪವಿತ್ರ ಖುರ್‌ಆನಿನ ವಚನ ಸ್ಪಷ್ಟಪಡಿಸುವುದೇನೆಂದರೆ, ಈ ಜನರ ಭಯೋತ್ಪಾದಕ ಕೃತ್ಯಗಳನ್ನು ಯಾವುದೇ ರೀತಿಯಲ್ಲಿಯೂ ಇಸ್ಲಾಮ್ ಸಮರ್ಥಿಸುವುದಿಲ್ಲ. ಇನ್ನೊಂದು ಮುಖ್ಯ ವಿಷಯ, ಮುಸ್ಲಿಮನಾದ ನನ್ನನ್ನು ಯುದ್ಧ ಮತ್ತು ಹಿಂಸಾಚಾರಕ್ಕೆ ಒಯ್ಯುವುದಕ್ಕೆ ಬದಲಾಗಿ ಮಾನವರೆಲ್ಲರಿಗೂ ಪ್ರೀತಿಯನ್ನು ಪ್ರದರ್ಶಿಸಲು ಅದು ಆದೇಶಿಸುತ್ತದೆ. ಆ ವಿಷಯವೇನೆಂದರೆ, ಪವಿತ್ರ ಖುರ್‌ಆನಿನ ಪ್ರಥಮ ಅಧ್ಯಾಯದ ಎರಡನೆಯ ವಚನದಲ್ಲಿ ಸರ್ವಶಕ್ತನಾದ ಅಲ್ಲಾಹನನ್ನು "ಸಕಲ ಲೋಕಗಳ ಪಾಲಕ ಪೋಷಕ" ಎಂದು ಹೆಸರಿಸಲಾಗಿದೆ. ಪವಿತ್ರ ಖುರ್‌ಆನಿನ ಇದೇ ಅಧ್ಯಾಯದ ಮೂರನೆಯ ವಚನ ಸರ್ವಶಕ್ತನಾದ ಅಲ್ಲಾಹನು "ಪರಮ ದಯಾವಂತನೂ ಕಾರುಣ್ಯನಿಧಿಯೂ ಆಗಿರುವನು" ಎಂದು ಹೇಳುತ್ತದೆ.

ಆದುದರಿಂದ ಸರ್ವಶಕ್ತನಾದ ಅಲ್ಲಾಹನು ಸರ್ವ ಜನರ ಪಾಲಕ ಪೋಷಕನೂ ಪರಮ ದಯಾವಂತನೂ ಕಾರುಣ್ಯನಿಧಿಯೂ ಆಗಿರುವಾಗ ತನ್ನನ್ನು ನಂಬುವವರು ತನ್ನ ಸೃಷ್ಟಿಗಳನ್ನು ನಿರ್ದಯತೆಯಿಂದ ಹತ್ಯೆ ಮಾಡಲು, ಅವರನ್ನು ತೀವ್ರವಾಗಿ ಆಕ್ರಮಣ ಮಾಡಲು ಮತ್ತು ಅವರಿಗೆ ಹಾನಿಯನ್ನುಂಟು ಮಾಡಲು ಹೇಗೆ ತಾನೆ ಇಚ್ಛಿಸಬಲ್ಲನು? ಇದಕ್ಕೆ ಉತ್ತರ ಅವನು ಇಚ್ಛಿಸಲಾರನೆಂದೇ ಆಗಿದೆ. ಆದರೆ ಅಲ್ಲಾಹನು ಕ್ರೂರತೆಯನ್ನು ತಡೆಯಲು, ಅಮಾನವೀಯ ಕೃತ್ಯಗಳನ್ನು ಮತ್ತು ಅನ್ಯಾಯವನ್ನು ತಡೆಯಲು ಅನುಮತಿ ನೀಡಿರುತ್ತಾನೆ.

ಇಸ್ಲಾಮ್ ಉಪದೇಶಿಸುವುದೇನೆಂದರೆ, ಮುಸ್ಲಿಮನು ದೌರ್ಜನ್ಯಗಾರನನ್ನು ತಡೆಯಬೇಕು ಮತ್ತು ಎಲ್ಲ ರೀತಿಯ ಅನ್ಯಾಯ ಕೃತ್ಯಗಳನ್ನೂ ಅತಿರೇಕ ವರ್ತನೆಗಳನ್ನೂ ತಡೆಯಬೇಕು. ಇಸ್ಲಾಮ್ ಪ್ರಕಾರ ಎರಡು ವಿಧಾನಗಳಲ್ಲಿ ಇದನ್ನು ಸಾಧಿಸಬಹುದು. ಮೊದಲನೆಯದಾಗಿ ಚರ್ಚೆ, ಸಂಧಾನ ಮತ್ತು ಮುತ್ಸದ್ದಿತನದ ಮೂಲಕ ಶಾಂತಿ ಸ್ಥಾಪಿತವಾಗುವುದಾದರೆ ಅದು ಉತ್ತಮವೇ ಆಗಿದೆ. ಆದರೆ ಹೀಗೆ ಮಾಡಲು ಸಾಧ್ಯವಾಗದಿದ್ದರೆ ಎರಡನೆಯ ಕ್ರಮವಾಗಿ ಸ್ಥಿರ ಶಾಂತಿ ಸ್ಥಾಪಿಸಲು ಬಲಪ್ರಯೋಗದ ಮಾರ್ಗವನ್ನು ಅವಲಂಬಿಸಬಹುದು.

ಧಾರ್ಮಿಕ ವಲಯದಿಂದ ಹೊರಗೆ ಪ್ರತಿಯೊಂದು ದೇಶ ಮತ್ತು ಸಮಾಜದಲ್ಲಿ ಕಾನೂನು ಕಾಯಿದೆಗಳು ಜಾರಿಯಲ್ಲಿರುತ್ತವೆ. ಅವುಗಳನ್ನು ಉಲ್ಲಂಘಿಸಿದರೆ ಸಾಮಾನ್ಯವಾಗಿ ಶಿಕ್ಷೆಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಕಠಿಣ ಶಿಕ್ಷೆ ನೀಡದೆ ಮೃದುವಾಗಿ ದಂಡಿಸುವ ಮೂಲಕ ಅಥವಾ ಪ್ರತಿಷೇಧ ಸೂಚಿಸುವ ಮೂಲಕ ಸುಧಾರಣೆ ಸಾಧ್ಯವಾಗುವುದಾದರೆ ಅದು ಉತ್ತಮವೇ ಆಗಿದೆ. ಆದರೆ ಅದು ಸಾಧ್ಯವಾಗುವುದಿಲ್ಲವಾದರೆ ಸಮಾಜದ ಹಿತಕ್ಕೋಸ್ಕರ ಮತ್ತು ಅನ್ಯರಿಂದ ನ್ಯಾಯೋಲ್ಲಂಘನೆಯನ್ನು ತಡೆಯಲಿಕ್ಕೋಸ್ಕರ ಕಠಿಣ ಶಿಕ್ಷೆ ನೀಡಬೇಕಾಗುತ್ತದೆ.

ಧರ್ಮದ ವಲಯಕ್ಕೆ ಮರಳಿ ಇಸ್ಲಾಮ್ ಧರ್ಮ ತತ್ವಗಳನ್ನು ಪರಿಶೀಲಿಸುವುದಾದರೆ, ಇಸ್ಲಾಮ್ ಶಿಕ್ಷೆಯ ಬಗ್ಗೆ ಹೇಳುವುದೇನೆಂದರೆ ಅದು ಪ್ರತೀಕಾರ ರೂಪದಲ್ಲಿರಬಾರದು. ಅದರ ಉದ್ದೇಶ ದೌರ್ಜನ್ಯ ನಿವಾರಣೆ ಮತ್ತು ಸುಧಾರಣೆಯನ್ನುಂಟುಮಾಡುವುದಾಗಿರಬೇಕು. ಪವಿತ್ರ ಖುರ್‌ಆನ್ ಉಪದೇಶಿಸುವುದೇನೆಂದರೆ ಒಬ್ಬ ವ್ಯಕ್ತಿಯನ್ನು ಅಥವಾ ಗುಂಪನ್ನು ಕ್ಷಮಿಸುವ ಮೂಲಕ ಮತ್ತು ದಯೆದೋರುವ ಮೂಲಕ ಸುಧಾರಣೆ ಮಾಡಬಹುದಾಗಿದ್ದರೆ ಈ ವಿಧಾನವನ್ನು ಅವಲಂಬಿಸಬೇಕು.

ಆದರೆ ಕ್ಷಮೆ ಮತ್ತು ಸಹನೆದೋರುವಿಕೆ ಪ್ರಯೋಜನಕರ ವಾಗುವುದಿಲ್ಲವಾದರೆ ಸುಧಾರಣೆಯ ಮಾರ್ಗವಾಗಿ ಶಿಕ್ಷೆಯನ್ನು ನೀಡಬೇಕು. ಆದುದರಿಂದ ಶಿಕ್ಷೆಯ ಬಗ್ಗೆ ಇಸ್ಲಾಮೀ ಸಿದ್ಧಾಂತ ದೂರದರ್ಶಿತ್ವ ಉಳ್ಳದ್ದೂ ಅಪ್ರತಿಮೇಯವೂ ಆಗಿದೆ. ಮನುಷ್ಯರಲ್ಲಿ ಅತ್ಯುತ್ತಮ ನೈತಿಕ ಮಟ್ಟವನ್ನು ಸ್ಥಾಪಿಸಲು ಅದು ಉದ್ದೇಶಿಸುತ್ತದೆ. ಮನುಷ್ಯರೆಲ್ಲರೂ ದೇವನ ಗುಣಗಳನ್ನು ಹೊಂದಿ ಪರಸ್ಪರ ಗೌರವ ಮತ್ತು ಕಾಳಜಿ ಹೊಂದಬೇಕೆಂದು ಇಸ್ಲಾಮ್ ಉದ್ದೇಶಿಸುತ್ತದೆ.

ಆದುದರಿಂದ ಒಬ್ಬ ವ್ಯಕ್ತಿಯ ಅಥವಾ ಒಂದು ಗುಂಪಿನ ಹಕ್ಕುಗಳನ್ನು ಅನ್ಯಾಯವಾಗಿ ಕಿತ್ತುಕೊಂಡರೆ ಇಸ್ಲಾಮ್ ಧರ್ಮ, ಮಾಡಿದ ಅಪರಾಧಕ್ಕೆ ಅನುಯೋಜ್ಯನಾದ ಶಿಕ್ಷೆಯನ್ನು ಅನುಮತಿಸುತ್ತದೆ. ಆದರೆ ಶಿಕ್ಷಿಸದೆ ಸುಧಾರಣೆ ಮಾಡುವುದು ಸಾಧ್ಯವಿದ್ದರೆ ಅದಕ್ಕೆ ಆದ್ಯತೆ ನೀಡಬೇಕಾಗಿದೆ. ಇದೇ ಕಾರಣದಿಂದ ಪವಿತ್ರ ಖುರ್‌ಆನ್ ಅಧ್ಯಾಯ 24, ವಚನ 23ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೇಳಿದ್ದಾನೆ– ಅವರು ಕ್ಷಮಿಸಲಿ ಮತ್ತು ಸೈರಿಸಿಕೊಳ್ಳಲಿ ಎಂದು.

ಇದೇ ರೀತಿ ಪವಿತ್ರ ಖುರ್‌ಆನ್ ಅಧ್ಯಾಯ 3 ವಚನ 135ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳಿದ್ದಾನೆ: ಕೋಪವನ್ನು ನಿಯಂತ್ರಿಸುವವರೂ ಜನರಿಗೆ ಕ್ಷಮೆ ನೀಡುವವರೂ ಆಗಿರುವ ಸಜ್ಜನರನ್ನು ಅಲ್ಲಾಹನು ಪ್ರೀತಿಸುತ್ತಾನೆ.

ಪವಿತ್ರ ಖುರ್‌ಆನ್‌ನಲ್ಲಿ ಬೇರೆ ಅನೇಕ ಕಡೆಗಳಲ್ಲಿ ಮನುಷ್ಯನು ತನಗೆ ಸಾಧ್ಯವಿರುವಲ್ಲೆಲ್ಲ ಕ್ಷಮಿಸಬೇಕೆಂದು ಉಪದೇಶಿಸಲಾಗಿದೆ. ಯಾಕೆಂದರೆ ಅಂತಿಮ ಗುರಿ ನೈತಿಕ ಸುಧಾರಣೆಯೇ ಹೊರತು ಪ್ರತೀಕಾರವಲ್ಲ. ದೇಶಗಳ ಮತ್ತು ಗುಂಪುಗಳ ಮಧ್ಯೆ ಸಂಘರ್ಷದ ಸಂದರ್ಭದಲ್ಲಿ ಸ್ಥಿರವಾದ ಶಾಂತಿ ಸ್ಥಾಪಿಸಲು ಸರ್ವಶಕ್ತನಾದ ಅಲ್ಲಾಹನು ಸುವರ್ಣ ತತ್ವವನ್ನು ಪವಿತ್ರ ಖುರ್‌ಆನ್ ಅಧ್ಯಾಯ 49 ವಚನ 10ರಲ್ಲಿ ವಿವರಿಸಿರುವನು.

ಪವಿತ್ರ ಖುರ್‌ಆನಿನ ಈ ವಚನದಲ್ಲಿ ಹೀಗೆ ಹೇಳಲಾಗಿದೆ: ಎರಡು ಗುಂಪುಗಳು ಪರಸ್ಪರ ಹೋರಾಟಕ್ಕಿಳಿದರೆ ಮೂರನೆಯ ಒಂದು ಗುಂಪು ಅವರ ಮಧ್ಯೆ ಸಂಧಾನ ನಡೆಸಬೇಕು ಮತ್ತು ಶಾಂತಿಯುತವಾಗಿ ಸಂಘರ್ಷ ಕೊನೆಗೊಳ್ಳಲು ಪ್ರಯತ್ನಿಸಬೇಕು. ಒಪ್ಪಂದ ಮಾಡಿಕೊಂಡು ಎಲ್ಲ ಪಕ್ಷಗಳು ನ್ಯಾಯ ಪಾಲಿಸಬೇಕು. ಆದರೆ ಆ ಬಳಿಕ ಅವರಲ್ಲಿ ಒಂದು ಗುಂಪು ಇನ್ನೊಂದು ಗುಂಪಿನ

ಮೇಲೆ ಆಕ್ರಮಣ ಮಾಡಿ ಒಪ್ಪಂದವನ್ನು ಮುರಿದರೆ ಇತರ ದೇಶಗಳು ಅಥವಾ ಗುಂಪುಗಳು ಒಗ್ಗೂಡಿ ಆವಶ್ಯವಾದರೆ ಬಲಪ್ರಯೋಗ ನಡೆಸಬೇಕು. ಆದರೆ ಆಕ್ರಮಣಕಾರರ ಗುಂಪು ಹಿಂದೆ ಸರಿದರೆ ಮತ್ತು ಶಾಂತಿಯನ್ನು ಬಯಸಿದರೆ ಅವರೊಂದಿಗೆ ನ್ಯಾಯೋಚಿತವಾಗಿ ವರ್ತಿಸಬೇಕು. ಅವರ ಮೇಲೆ ಅನ್ಯಾಯದಿಂದ ನಿರ್ಬಂಧ ಹೇರಬಾರದು. ಅವರು ಸ್ವತಂತ್ರ ದೇಶವಾಗಿ ಮುಂದುವರಿಯಲು ಬಿಡಬೇಕು.

ಆದುದರಿಂದ ಸರ್ವಲೋಕಗಳ ಪರಿಪಾಲಕನಾದ ಸರ್ವಶಕ್ತನಾದ ಅಲ್ಲಾಹನು ಇಚ್ಛಿಸುವುದೇನೆಂದರೆ, ಲೋಕದಲ್ಲಿ ಎಲ್ಲ ಜನರು ಶಾಂತಿಯಿಂದ ಮತ್ತು ಎಲ್ಲ ವಿಧಗಳ ದೌರ್ಜನ್ಯ ಮತ್ತು ಅನ್ಯಾಯದಿಂದ ಮುಕ್ತರಾಗಿ ಜೀವಿಸಬೇಕು.

ಇಸ್ಲಾಂ ಧರ್ಮ ಸಾರ್ವತ್ರಿಕ ಧಾರ್ಮಿಕ ಸ್ವಾತಂತ್ರ್ಯವನ್ನು ಮತ್ತು ಮನಸ್ಸಾಕ್ಷಿಯ ಸ್ವಾತಂತ್ರವನ್ನು ಪ್ರತಿಪಾದಿಸುತ್ತದೆ. ಇಸ್ಲಾಮ್ ಧರ್ಮದ ಪ್ರಕಾರ, ತನಗಿಷ್ಟವಿರುವ ಧಾರ್ಮಿಕ ನಂಬಿಕೆ ಹೊಂದಲು ಮತ್ತು ಆ ನಂಬಿಕೆಗಳನ್ನು ಪ್ರಚಾರ ಮಾಡಲು ಪ್ರತಿಯೊಬ್ಬ ಮನುಷ್ಯನಿಗೆ ಹಕ್ಕಿದೆ.

ನಂಬಿಕೆ ಎನ್ನುವುದು ಹೃದಯಕ್ಕೆ ಸಂಬಂಧಿಸಿದುದಾಗಿದೆ ಮತ್ತು ಅದು ಹಾಗೆಯೇ ಮುಂದುವರಿಯುವುದು. ಯಾವುದೇ ಬಲಾತ್ಕಾರ ಧರ್ಮದಲ್ಲಿಲ್ಲ. ಸರ್ವಶಕ್ತನಾದ ಅಲ್ಲಾಹನು ಇಸ್ಲಾಮ್ ಧರ್ಮ ಪರಿಪೂರ್ಣ ತತ್ವಗಳನ್ನೊಳಗೊಂಡಿದೆ ಎಂದು ಹೇಳಿರುವನಾದರೂ ಅದಕ್ಕೆ ಪರಿವರ್ತನೆ ಮಾಡಲು ಬಲಪ್ರಯೋಗಿಸಲು ಯಾರಿಗೂ ಅಧಿಕಾರವಿಲ್ಲ ಎಂದು ಸಹ ಹೇಳಿದ್ದಾನೆ. ಪ್ರತಿಯೊಬ್ಬನು ಯಾವುದೇ ಧರ್ಮದ ಅನುಯಾಯಿಯಾಗಿದ್ದರೂ ಆಗಿಲ್ಲವಾದರೂ ಇಸ್ಲಾಮ್ ಧರ್ಮವನ್ನು ಸೇರಲು ಸ್ವತಂತ್ರನಾಗಿದ್ದಾನೆ. ಆದರೆ ಮುಖ್ಯ ಅಂಶವೇನೆಂದರೆ ಧರ್ಮ ಸ್ವೀಕಾರ ಸ್ವತಂತ್ರವಾಗಿ ತನ್ನ ಸ್ವಂತ ಇಷ್ಟದ ಪ್ರಕಾರವಾಗಿರಬೇಕು. ಇದೇ ರೀತಿ ಒಬ್ಬ ಮುಸ್ಲಿಮ್ ಇಸ್ಲಾಮ್ ಧರ್ಮ ತ್ಯಜಿಸಲು ಬಯಸಿದರೆ, ಪವಿತ್ರ ಖುರ್‌ಆನಿನ ಉಪದೇಶಗಳ ಪ್ರಕಾರ ಅವನಿಗೆ ಅಥವಾ ಅವಳಿಗೆ ಹಾಗೆ ಮಾಡುವ ಅಧಿಕಾರವಿದೆ.

ಇಸ್ಲಾಮ್ ಧರ್ಮ ವಿಶ್ವ ಧರ್ಮವೆಂದೂ ಅದು ಕಾಲಾತೀತ ತತ್ವಗಳನ್ನು ಒಳಗೊಂಡಿದೆ ಎಂದೂ ನಾವು ನಂಬುತ್ತಿರುವೆವು. ಆದರೆ ಒಬ್ಬನು ಅದನ್ನು ಬಿಟ್ಟು ಹೋಗಲು ಇಚ್ಛಿಸುವನಾದರೆ ಅದು ಅವನ ಆಯ್ಕೆ ಮತ್ತು ಅಧಿಕಾರಕ್ಕೆ ಸೇರಿದುದಾಗಿದೆ. ಪವಿತ್ರ ಖುರ್‌ಆನ್ ಅಧ್ಯಾಯ 5 ವಚನ 55ರಲ್ಲಿ ಅಲ್ಲಾಹನು, ಯಾರಾದರೂ ಧರ್ಮವನ್ನು ತೊರೆದು ಹೋಗಲು ಬಯಸುವನಾದರೆ ಹೋಗಲಿ ಎಂದೂ ಅಂತಹ ಜನರಿಗೆ ಪ್ರತಿಯಾಗಿ ಅಲ್ಲಾಹನು ನಿಷ್ಠಾವಂತರಾದ ಜನರನ್ನು ತರುವನು ಎಂದೂ ಹೇಳಿದ್ದಾನೆ. ಯಾವುದೇ ಸರಕಾರ, ಗುಂಪು ಅಥವಾ ವ್ಯಕ್ತಿಗೆ ಧರ್ಮ ತ್ಯಜಿಸಿದವರನ್ನು ಶಿಕ್ಷಿಸಲು ಅಥವಾ ದಂಡಿಸಲು ಅಧಿಕಾರವಿರುವುದಿಲ್ಲ.

ಆದುದರಿಂದ ಇಸ್ಲಾಮ್ ಧರ್ಮವು, ಧರ್ಮವನ್ನು ತ್ಯಜಿಸುವವರಿಗೆ ಶಿಕ್ಷೆಯನ್ನು ವಿಧಿಸುತ್ತದೆ ಎಂದು ಆಪಾದಿಸುವುದು ಸಂಪೂರ್ಣವಾಗಿ ಅನ್ಯಾಯಕರವೂ ಆಧಾರ ರಹಿತವೂ ಆಗಿದೆ. ಇಸ್ಲಾಮ್ ಧರ್ಮ ತತ್ವಗಳು ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನೆಂಬ ತತ್ವದ ಸುತ್ತಲೂ ತಿರುಗುತ್ತಿದೆ. ಇದರ ಫಲಸ್ವರೂಪವಾಗಿ, ಒಬ್ಬ ಮುಸ್ಲಿಮನು ನಿರ್ದಯತೆಯಿಂದ ತುಂಬಿದ ದೌರ್ಜನ್ಯ ಮಾಡಲು ಬಯಸುವಾಗ ಅಥವಾ ಯಾವುದೇ ರೀತಿಯ ಉಗ್ರಗಾಮಿ ಕೃತ್ಯ ನಡೆಸುವಾಗ ಅಂತಹ ವ್ಯಕ್ತಿ ಅಲ್ಲಾಹನ ಸರ್ವಲೋಕ ಪರಿಪಾಲಕನೆಂಬ ಗುಣವನ್ನು ನಿರಾಕರಿಸುತ್ತಾನೆ.

ಹಲವು ಮುಸ್ಲಿಮರು ಅಲ್ಲಾಹನನ್ನು ವಿಶ್ವದ ಒಡೆಯನೆಂದೂ ಸರ್ವಲೋಕಗಳ ಪಾರಿಪಾಲಕನೆಂದೂ ನಂಬುತ್ತಾರಾದರೂ ಅವರು ಅದರ ಅರ್ಥವನ್ನು ಮನವರಿಕೆ ಮಾಡಿಕೊಳ್ಳದೆ ಇಸ್ಲಾಮಿನ ಮೂಲ ತತ್ವಗಳಿಂದ ದೂರ ಸರಿದು ಹೋಗಿದ್ದಾರೆ. ಆದುದರಿಂದ ಮಾನವರೆಲ್ಲರಿಗೆ ಇಸ್ಲಾಮಿನ ನೈಜ ತತ್ವಗಳನ್ನು ವಿವರಿಸಿಕೊಡಲು ಸರ್ವಶಕ್ತನಾದ ಅಲ್ಲಾಹನು ಅಹ್ಮದಿಯಾ ಜಮಾಅತಿನ ಸ್ಥಾಪಕರನ್ನು ವಾಗ್ದತ್ತ ಮಸೀಹರನ್ನಾಗಿಯೂ ಈ ಕಾಲಘಟ್ಟದ ಸುಧಾರಕರನ್ನಾಗಿಯೂ ನಿಯೋಜಿಸಿ ಕಳುಹಿಸಿದನೆಂದು ಅಹ್ಮದೀ ಮುಸ್ಲಿಮರಾದ ನಾವು ನಂಬುತ್ತೇವೆ.

ಹಝ್ರತ್ ವಾಗ್ದತ್ತ ಮಸೀಹ್[ಅ] ಹೀಗೆ ಹೇಳಿದರು: ಧಾರ್ಮಿಕ ಯುದ್ಧಗಳ ಕಾಲಘಟ್ಟ ದಾಟಿಹೋಗಿದೆ. ಮಾನವರು ಶಾಂತಿಯುತವಾಗಿ ಜೀವಿಸಿ ತಮ್ಮ ಸೃಷ್ಟಿಕರ್ತನ ಹಕ್ಕುಗಳನ್ನೂ ಒಬ್ಬರಿನ್ನೊಬ್ಬರ ಹಕ್ಕುಗಳನ್ನೂ ಈಡೇರಿಸಿ ಕೊಡಬೇಕೆಂದು ಸರ್ವಶಕ್ತನಾದ ಅಲ್ಲಾಹನು ಇಚ್ಛಿಸುತ್ತಾನೆ. ತನ್ನ ಅನುಯಾಯಿಗಳನ್ನು ಸಂಬೋಧಿಸಿ ವಾಗ್ದತ್ತ ಮಸೀಹರಾದ ಖಾದಿಯಾನಿನ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಹೀಗೆ ಹೇಳಿದರು:

*"ಇಸ್ಲಾಮ್ ಧರ್ಮದ ನೈಜ ತತ್ವಗಳ ಪ್ರಕಾರ ಧರ್ಮ ಎರಡು ಭಾಗಗಳನ್ನು ಹೊಂದಿದೆ ಅಥವಾ ಧರ್ಮ ಎರಡು ಮುಖ್ಯ ಉದ್ದೇಶಲಕ್ಷ್ಯಗಳ ಅಸ್ತಿಭಾರದ ಮೇಲಿದೆ ಎಂದು ಹೇಳಬಹುದು. ಮೊದಲನೆಯ ಭಾಗ, ಏಕದೇವನ ಅಸ್ತಿತ್ವದ ಬಗ್ಗೆ ಪರಿಪೂರ್ಣ ವಿಶ್ವಾಸವನ್ನು ಹೊಂದಿ, ಅವನನ್ನು ಪ್ರಾಮಾಣಿಕವಾಗಿ ಪ್ರೀತಿಸಿ ಅವನನ್ನು ಅನುಸರಿಸುವುದರಲ್ಲಿ ತನ್ನನ್ನು ಪ್ರೀತಿ ಮತ್ತು ಅನುಸರಣೆಗೆ ಅನುಯೋಜ್ಯವಾಗಿ ತಲ್ಲೀನನನ್ನಾಗಿ ಮಾಡುವುದು. ಧರ್ಮದ ಎರಡನೆಯ ಭಾಗ, ದೇವನ ಸೃಷ್ಟಿಗಳ ಸೇವೆ ಮಾಡುವುದು, ತಮ್ಮ ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ಪ್ರೀತಿಯಿಂದ ಸಮಾಜಸೇವೆ ಮಾಡಲು ಬಳಸುವುದು, ನಿಮ್ಮ ಮೇಲೆ ದಯೆದೋರಿದವರಿಗೆ ಕೃತಜ್ಞತೆ ಸಲ್ಲಿಸುವುದು ಮತ್ತು ಅವರ ಮೇಲೆ ಮರಳಿ ದಯೆದೋರುವುದು. ಹಾಗೆ ನಿಮಗೆ ಉಪಕಾರ ಮಾಡಿದವರು ದೊರೆಗಳಾಗಲಿ, ಅಥವಾ ಸಾಮಾನ್ಯ ವ್ಯಕ್ತಿಗಳಾದರೂ ನೀವು ಹಾಗೆ ಮಾಡಬೇಕು. ನೀವು ಯಾವಾಗಲೂ ಅವರೊಂದಿಗೆ ಪ್ರೀತಿಯ ಸಂಬಂಧ ಇಟ್ಟುಕೊಳ್ಳಬೇಕು."*

ಅಹ್ಮದಿಯಾ ಸಂಘಟನೆಯ ಸ್ಥಾಪಕರು ಪವಿತ್ರ ಖುರ್‌ಆನಿನ ಅಧ್ಯಾಯ 16 ವಚನ 91ನ್ನು ಉಲ್ಲೇಖಿಸಿ ಅದರ ಯಥಾರ್ಥ




ವ್ಯಾಖ್ಯಾನ ನೀಡಿದರು. ಆ ವಚನ ಹೀಗಿದೆ: "ನ್ಯಾಯ ನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ನಿಕಟ ಬಂಧುಗಳಿಗೆ ಎಂಬಂತೆ (ಇತರರಿಗೂ) ಸಹಾಯಮಾಡಲಿಕ್ಕೂ ಅಲ್ಲಾಹನು ಆಜ್ಞಾಪಿಸುತ್ತಾನೆ."

ಅವರು ಪವಿತ್ರ ಖುರ್‌ಆನಿನ ಈ ವಚನವನ್ನು ವ್ಯಾಖ್ಯಾನಿಸುತ್ತಾ ಹೀಗೆ ಹೇಳಿದರು: ಮುಸ್ಲಿಮರು ಇತರ ಎಲ್ಲ ಜನರೊಂದಿಗೆ ನ್ಯಾಯನಿಷ್ಠರಾಗಿ ಮತ್ತು ಉತ್ತಮವಾಗಿ ವರ್ತಿಸಬೇಕೆಂದು ಅಲ್ಲಾಹನು ಈ ವಚನದಲ್ಲಿ ಆಜ್ಞಾಪಿಸಿದ್ದಾನೆ. ಸಹಾನುಭೂತಿಯಿಂದ ವರ್ತಿಸಿದವರೊಂದಿಗೂ ಯಾವುದೇ ರೀತಿ ಉಪಕಾರ ಮಾಡದವರೊಂದಿಗೂ ಹೀಗೆಯೇ ವರ್ತಿಸಬೇಕು. ವಾಗ್ದತ್ತ ಮಸೀಹರು ಹೀಗೆ ಸಹ ಉಪದೇಶಿಸಿದರು: ಮುಸ್ಲಿಮನು ಅಲ್ಲಾಹನ ಸೃಷ್ಟಿಗಳನ್ನು ಹೇಗೆ ಪ್ರೀತಿಸಬೇಕೆಂದರೆ ಲೋಕದಲ್ಲಿರುವ ಪ್ರತಿಯೊಬ್ಬ ಮನುಷ್ಯನು ತನ್ನ ಕುಟುಂಬದ ನಿಕಟ ಸಂಬಂಧಿಯೋ ಎಂಬಂತೆ.

ಅವರು ಹೀಗೆ ಸಹ ಹೇಳಿದರು: ನೈಜ ಮುಸ್ಲಿಮನು, ಒಬ್ಬ ತಾಯಿ ತನ್ನ ಮಗುವನ್ನು ಪ್ರೀತಿಸುವಂತೆ ಇತರರನ್ನು ಅವರ ಧಾರ್ಮಿಕ ಹಿನ್ನೆಲೆಯನ್ನು ಪರಿಗಣಿಸದೆ ಪ್ರೀತಿಸಬೇಕು. ತಾಯಿ ತನ್ನ ಮಗುವಿನೊಂದಿಗೆ ಹೊಂದುವ ಪ್ರೀತಿ ಉನ್ನತವೂ ಶ್ರೇಷ್ಠವೂ ಆಗಿರುವ ಪ್ರೀತಿಯಾಗಿದೆ. ಆದರೆ ಒಬ್ಬನು ದಯೆಯನ್ನೂ ಸಹಾನುಭೂತಿಯನ್ನೂ ಪ್ರದರ್ಶಿಸುವಾಗ ಅವನಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಆತ್ಮ ಪ್ರಶಂಸೆಯ ಅಂಶವಿರಬಹುದು ಮತ್ತು ಕೆಲವೊಮ್ಮೆ ತಾನು ಮಾಡಿದ ಉಪಕಾರದ ಬಗ್ಗೆ ನೆನಪಿಸಿಕೊಟ್ಟು ಪ್ರಯೋಜನ ಪಡೆಯಲು ಪ್ರಯತ್ನ ಮಾಡುವುದು ಸಹ ಸಾಧ್ಯವಿದೆ. ಆದರೆ ತಾಯಿಯ ಪ್ರೀತಿ ಸ್ವಾರ್ಥ ರಹಿತವಾಗಿದ್ದು ಪರಹಿತ ಚಿಂತನೆಯಿಂದ ಭರಿತವಾಗಿರುತ್ತದೆ. ತಾಯಿ ತನ್ನ ಮಗುವಿನ ಹಿತಕ್ಕೋಸ್ಕರ ಎಲ್ಲವನ್ನೂ ಬಲಿಗೊಡಲು ಸಿದ್ಧಳಾಗುತ್ತಾಳೆ. ಆಕೆ ತನ್ನ ಸೇವೆಗೆ ಪ್ರತಿಯಾಗಿ ಏನನ್ನೂ ಬಯಸುವುದಿಲ್ಲ. ಆಕೆ ತನ್ನ ಕೆಲಸದ ಬಗ್ಗೆ ಪ್ರಶಂಸೆಯನ್ನೂ ಇಚ್ಛಿಸುವುದಿಲ್ಲ. ತಾಯಿ ಮಗುವನ್ನು ಪ್ರೀತಿಸುವಂತೆ ಮುಸ್ಲಿಮರು ಮಾನವರನ್ನು ಪ್ರೀತಿಸಬೇಕೆಂದು ಇಸ್ಲಾಮ್ ಕಲಿಸುತ್ತದೆ. ಇವು ಇಸ್ಲಾಮಿನ ನೈಜ ತತ್ವಗಳಾಗಿವೆ.

ಸರ್ವಶಕ್ತನಾದ ಅಲ್ಲಾಹನು, ತನ್ನನ್ನು ನಂಬುವವರು ತನ್ನ ಗುಣಗಳನ್ನು ತಮ್ಮಲ್ಲಿ ಅಳವಡಿಸಿಕೊಳ್ಳಬೇಕೆಂದು ಹೇಳಿದ್ದಾನೆ. ಆದುದರಿಂದ ಒಬ್ಬ ನೈಜ ಮುಸ್ಲಿಮನಿಗೆ ಕ್ರೂರಿಯಾಗಲು ಅಸಾಧ್ಯವಾಗಿದೆ. ಅದೇ ರೀತಿ ಯಾವುದೇ ರೀತಿಯ ಅನ್ಯಾಯ, ಹಿಂಸಾಚಾರ ಮತ್ತು ಉಗ್ರಗಾಮಿ ಚಟುವಟಿಕೆಗಳನ್ನು ಅನುಮತಿಸುವುದು ಇಸ್ಲಾಮಿಗೆ ಸಾಧ್ಯವಿಲ್ಲ. ನಾನು ಹಿಂದಿನ ಅನೇಕ ವರ್ಷಗಳಲ್ಲಿ ಈ ವಿಷಯಗಳನ್ನು ಎಂದರೆ ಇಸ್ಲಾಮಿನ ಈ ಮೂಲ ತತ್ವಗಳನ್ನು ಪದೇ ಪದೇ ಜನರ ಮುಂದೆ ಪ್ರಕಟಿಸಿದ್ದೇನೆ. ನಾನು ಪದೇ ಪದೇ ಪವಿತ್ರ ಖುರ್‌ಆನಿನ ವಚನಗಳನ್ನು ಉಲ್ಲೇಖಿಸಿ ಪ್ರತಿಪಾದಿಸುವುದು ಇಸ್ಲಾಮ್ ಧರ್ಮದ ನೈಜ ತತ್ವಗಳನ್ನೆಂದು ಸ್ಪಷ್ಟಪಡಿಸಿದ್ದೇನೆ. ಆದರೆ ನಮ್ಮ ಶಾಂತಿ ಸಂದೇಶಗಳನ್ನು ಸಂಪರ್ಕ ಮಾಧ್ಯಮಗಳು ಸವಿಸ್ತಾರವಾಗಿ ಪ್ರಕಟಿಸುವುದಿಲ್ಲ. ಆದರೆ ಅಲ್ಪ ಸಂಖ್ಯೆಯ ಕೆಲವು ಜನರ ಬರ್ಬರ ಕೃತ್ಯಗಳು ಮತ್ತು ನರಸಂಹಾರದ ಬಗ್ಗೆ ನಿರಂತರವಾಗಿ ಗಮನ ಹರಿಸಿ ಪ್ರಕಟಿಸಲಾಗುತ್ತಿದೆ.

ಇಂದಿನ ಕಾಲದಲ್ಲಿ ಸಂಪರ್ಕ ಮಾಧ್ಯಮಗಳು ಜನರ ಅಭಿಪ್ರಾಯಗಳನ್ನು ರೂಪಿಸುವುದರಲ್ಲಿ ಬಹಳ ದೊಡ್ಡ ಪಾತ್ರ ವಹಿಸುತ್ತವೆ ಎನ್ನುವುದು ಸಂಶಯಾತೀತವಾಗಿದೆ. ಸಂಪರ್ಕ ಮಾಧ್ಯಮಗಳು ತಮ್ಮ ಈ ಶಕ್ತಿಯನ್ನು ಉತ್ತರದಾಯಿತ್ವದೊಂದಿಗೆ ಬಳಸಬೇಕು. ಅವರು ಶಾಂತಿ ಸ್ಥಾಪನೆಗೆ ಮತ್ತು ಜನಹಿತಕ್ಕಾಗಿ ತಮ್ಮ ಶಕ್ತಿಯನ್ನು ಬಳಸಬೇಕು. ನೈಜ ಇಸ್ಲಾಮ್ ಏನನ್ನು ಪ್ರತಿನಿಧೀಕರಿಸುತ್ತದೆ ಎಂದು ಅವರು ಲೋಕಕ್ಕೆ ತಿಳಿಸಿಕೊಡಬೇಕು. ಅಲ್ಪಸಂಖ್ಯೆಯ ಕೆಲವರು ಮಾಡುವ ನಿರ್ದಯ ಕೃತ್ಯಗಳಿಗೆ ಮಾತ್ರ ಅವರು ಪ್ರಚಾರ ನೀಡುವವರಾಗಬಾರದು.

ಬಹುತೇಕ ಭಯೋತ್ಪಾದಕ ಅಥವಾ ಉಗ್ರಗಾಮಿ ಗುಂಪುಗಳನ್ನು ಜೀವಂತವಾಗಿರಿಸುವ ಆಕ್ಸಿಜನ್ (ಪ್ರಾಣವಾಯು) ಮಾಧ್ಯಮಗಳಲ್ಲಿ ಅವುಗಳಿಗೆ ದೊರಕುವ ಪ್ರಚಾರವಾಗಿದೆ. ಸಂಪರ್ಕ ಮಾಧ್ಯಮದವರು ನಾನು ಹೇಳಿದುದನ್ನು ಲಕ್ಷಿಸಿ ಕಾರ್ಯ ಪ್ರವೃತ್ತರಾಗುವರಾದರೆ

ಲೋಕವನ್ನು ಬಾಧಿಸುತ್ತಿರುವ ಭಯೋತ್ಪಾದಕ ಕೃತ್ಯಗಳು ಬೇಗನೆ ಸಾಯಲು ತೊಡಗುವುದಾಗಿ ನಾವು ಕಾಣುವೆವು. ಇಸ್ಲಾಮನ್ನು ಕೆಡಿಸಿ ಅದರ ಶ್ರೇಷ್ಠ ತತ್ವಗಳನ್ನು ಉಲ್ಲಂಘಿಸುವವರು ತಮ್ಮ ದ್ವೇಷಭರಿತ ಕೃತ್ಯಗಳನ್ನು ಹೇಗೆ ತಾನೆ ಇಸ್ಲಾಮಿನ ಹೆಸರಲ್ಲಿ ಸಮರ್ಥಿಸಲು ಸಾಧ್ಯ ಎನ್ನುವುದು ನನಗೆ ಮನವರಿಕೆ ಮಾಡಲು ಸಾಧ್ಯವಾಗುವುದಿಲ್ಲ.

ಶಾಂತಿಗೆ ಸಂಬಂಧಿಸಿದ ಇಸ್ಲಾಮಿನ ಉಪದೇಶಗಳು ಎಲ್ಲ ರೀತಿಗಳ ಉಗ್ರಗಾಮಿ ಚಟುವಟಿಕೆಗಳನ್ನು ನಿಷಿದ್ಧಗೊಳಿಸಿವೆ. ನ್ಯಾಯಬದ್ಧವಾಗಿ ಯುದ್ಧ ನಡೆಸುವ ಸಂದರ್ಭದಲ್ಲಿ ಕೂಡ ಅಪರಾಧಕ್ಕೆ ಸಮಾನವಾದ ಶಿಕ್ಷೆ ನೀಡಬೇಕೆಂದೂ ಸಹನೆ ಮತ್ತು ಕ್ಷಮೆಯಿಂದ ವರ್ತಿಸುವುದು ಉತ್ತಮವೆಂದೂ ಅಲ್ಲಾಹನು ಆಜ್ಞಾಪಿಸಿದ್ದಾನೆ. ಆದುದರಿಂದ ಹಿಂಸಾಚಾರ, ಅನ್ಯಾಯ ಮತ್ತು ಕ್ರೌರ್ಯದಿಂದ ವರ್ತಿಸುವ ಮುಸ್ಲಿಮ್ ನಾಮಧಾರಿಗಳು ಅಲ್ಲಾಹನ ಕ್ರೋಧವನ್ನು ತಮ್ಮ ಕಡೆಗೆ ಆಹ್ವಾನಿಸುವವರಾಗಿದ್ದಾರೆ.

ಇಸ್ಲಾಮ್ ಬಗ್ಗೆ ಭಯ ವರ್ಧಿಸುತ್ತಿರುವ ಈ ಕಾಲದಲ್ಲಿ ನಾನು ಒತ್ತಿ ಹೇಳಲು ಬಯಸುತ್ತೇನೆ: ಪವಿತ್ರ ಖುರ್‌ಆನ್ ಪ್ರೀತಿ, ಕಾರುಣ್ಯ ಮತ್ತು ಪರೋಪಕಾರದ ಬಗ್ಗೆ ಪದೇ ಪದೇ ಪ್ರಸ್ತಾಪಿಸುತ್ತದೆ. ಅನಿವಾರ್ಯ ಸಂದರ್ಭಗಳಲ್ಲಿ ಪವಿತ್ರ ಖುರ್‌ಆನ್ ಪ್ರತಿರೋಧಾತ್ಮಕ ಯುದ್ಧವನ್ನು ಅನುಮತಿಸಿರುವುದು ಶಾಂತಿಯನ್ನು ಸ್ಥಾಪಿಸಲಿಕ್ಕೋಸ್ಕರ ಮಾತ್ರವಾಗಿದೆ. ಇಂದಿನ ಕಾಲದಲ್ಲಿ ಸಹ ಬಹುತೇಕ ಯುದ್ಧ ಮಾಡುತ್ತಿರುವ ಸರಕಾರಗಳು ಅಥವಾ ಗುಂಪುಗಳು, ಅವರು ಮುಸ್ಲಿಮರಾದರೂ ಮುಸ್ಲಿಮೇತರರಾದರೂ ತಾವು ಹೋರಾಡುವುದು ಶಾಂತಿಯನ್ನು ಸ್ಥಾಪಿಸಲಿಕ್ಕೋಸ್ಕರ ಎಂದು ಹೇಳುತ್ತಾರೆಂದು ನಾವು ಕಾಣುತ್ತಿದ್ದೇವೆ.

ಜನರ ಗ್ರಹಿಕೆಗೆ ಸಂಬಂಧಿಸಿ ಹೇಳುವುದಾದರೆ, ಕೆಲವು ಜಾಗತಿಕ ಶಕ್ತಿ ರಾಷ್ಟ್ರಗಳು ಮಾಡುವ ಯುದ್ಧಗಳನ್ನು ನಿರ್ಲಕ್ಷಿಸಲು ಬಹುತೇಕ ಜನರು ಬಯಸುತ್ತಾರೆ ಮತ್ತು ಆ ಯುದ್ಧಗಳು ಯಾವುದೇ ಧರ್ಮದೊಂದಿಗೆ ಸಂಬಂಧಿಸಿದುದಾಗಿ ಹೇಳುವುದಿಲ್ಲ. ಆದರೆ ನಾವು ಈಗ ಎಂತಹ ಪರಿಸರದಲ್ಲಿ ವಾಸಿಸುತ್ತೇವೆಂದರೆ, ಈಗ ಇಸ್ಲಾಮಿನ ಉಪದೇಶಗಳನ್ನು ದೂಷಣೆಗೆ ಗುರಿಪಡಿಸಲಾಗುತ್ತಿದೆ ಮತ್ತು ಮುಸ್ಲಿಮರು ನಡೆಸುವ ಕ್ರೌರ್ಯಗಳನ್ನು ಮತ್ತು ಯುದ್ಧಗಳನ್ನು ಇಸ್ಲಾಮ್ ಧರ್ಮದೊಂದಿಗೆ ಸಂಬಂಧ ಕಲ್ಪಿಸಿ ಆಪಾದಿಸಲಾಗುತ್ತದೆ. ಆದರೆ ಇಸ್ಲಾಮಿನ ನೈಜ ಶಾಂತಿಪ್ರಿಯ ತತ್ವಗಳನ್ನು ಪ್ರಚಾರ ಮಾಡಲು ಪರಿಶ್ರಮಪಡುವ ಜನರ ಶಬ್ದಗಳು ಆಲಿಸಲ್ಪಡುವುದಿಲ್ಲ ಮತ್ತು ಅವರ ಬಗ್ಗೆ ವಿಸ್ತಾರವಾಗಿ ಪ್ರಚಾರ ಮಾಡುವುದೂ ಇಲ್ಲ.

ಇದು ನನ್ನ ಅಭಿಪ್ರಾಯದಲ್ಲಿ ಅನ್ಯಾಯಕರವೂ ಅತ್ಯಂತ ವಿರುದ್ಧ ಪರಿಣಾಮಕವೂ ಆಗಿದೆ. ಜಾಗತಿಕ ಸಂಘರ್ಷಗಳ ಈ ಕಾಲದಲ್ಲಿ ನಾವು ನೆನಪಿಡಬೇಕಾದ ಮೂಲಭೂತ ತತ್ವವೇನೆಂದರೆ ಎಲ್ಲ ವಿಧ ಕೆಡುಕು ಮತ್ತು ಕ್ರೌರ್ಯಗಳನ್ನು ದಮನ ಮಾಡಬೇಕು ಹಾಗೂ ಎಲ್ಲ ರೀತಿಯ ಒಳಿತುಗಳನ್ನು ಮತ್ತು ಮಾನವೀಯತೆಯನ್ನು ದೃಢಪಡಿಸಬೇಕು. ಹೀಗೆ ಮಾಡಿದರೆ ಕೆಡುಕು ವಿಸ್ತಾರವಾಗಿ ಹಬ್ಬಲಾರದು; ಸದ್ಗುಣಗಳು ಮತ್ತು ಶಾಂತಿ ವಿಸ್ತಾರಗೊಂಡು ನಮ್ಮ ಸಮಾಜವನ್ನು ಅಲಂಕರಿಸುವುದು.

ಲೋಕದಲ್ಲಿ ಸಂಭವಿಸುತ್ತಿರುವ ಒಳಿತನ್ನು ಪ್ರೋತ್ಸಾಹಿಸುವುದಾದರೆ ನಾವು ಅಭಿಮಾನದಿಂದ ಕಾಣುವ ಕರುಣೆ ಮತ್ತು ಮಾನವೀಯ ಮೌಲ್ಯಗಳನ್ನು ಧ್ವಂಸಗೊಳಿಸಲು ಯತ್ನಿಸುವವರ ಮೇಲೆ ಜಯಗಳಿಸಬಲ್ಲೆವು. ಆದರೆ ಲೋಕ ಈ ತತ್ವವನ್ನು ಮನವರಿಕೆ ಮಾಡಿಕೊಂಡಿಲ್ಲ ಮತ್ತು ಅದನ್ನು ಅಂಗೀಕರಿಸುವುದೂ ಇಲ್ಲ. ಈ ಕಾರಣದಿಂದ ಮಾಧ್ಯಮಗಳು ಲೋಕಶಾಂತಿಗೆ ಸಂಬಂಧಿಸದ ವಿಷಯಗಳಿಗೆ ಆದ್ಯತೆ ನೀಡುತ್ತವೆ ಮತ್ತು ಅವುಗಳ ಬಗ್ಗೆ ಅಂಕೆ ಅಂಶಗಳಿಗೆ ಪ್ರಚಾರ ನೀಡುತ್ತವೆ. ಅವು ಕ್ರೌರ್ಯಕೃತ್ಯ ಮಾಡುವ ಚಿಕ್ಕಪುಟ್ಟ ಗುಂಪುಗಳಿಗೆ ಮತ್ತು ದಾಯೆಶ್‌ನಂತಹ ಕೆಟ್ಟ ಗುಂಪುಗಳ ಪ್ರಚಾರ ಯಂತ್ರಗಳಿಗೆ ಇಂಧನ ನೀಡುತ್ತವೆ. ಆದರೆ ಲೋಕದಲ್ಲಿರುವ ಒಳಿತುಗಳ ಬಗ್ಗೆ ಎತ್ತಿ ತೋರಿಸಬೇಕಾದ ತಮ್ಮ ಕರ್ತವ್ಯ ನಿರ್ವಹಿಸುವುದೂ ಇಲ್ಲ.

ಇದು ಅನ್ಯಾಯದ ವರ್ತನೆಯಾಗಿದೆ. ಇದು ಇನ್ನಷ್ಟು ಒಡಕನ್ನೂ ಸಂಘರ್ಷವನ್ನೂ ವರ್ಧಿಸುವ ಬೀಜ ಬಿತ್ತುತ್ತದೆ. ಜಾಗತಿಕ ರಾಜಕಾರಣ ಮತ್ತು ಭಯೋತ್ಪಾದನೆಯನ್ನು ಸೋಲಿಸುವ ಬಗ್ಗೆ ಹೇಳುವುದಾದರೆ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸುವುದು ಪರಮೋಚ್ಚ ಉದ್ದೇಶವೆಂದು ಅಂಗೀಕರಿಸಬೇಕಾಗಿದೆ. ಆದುದರಿಂದ ಎಲ್ಲ ಭಾಗಗಳಿಂದಲೂ ಸಹಕಾರ ಆವಶ್ಯಕವಾಗಿದೆ. ನೀವು ಒಬ್ಬ ಮುಸ್ಲಿಮನ ಮಾತುಗಳನ್ನು ನಂಬುವುದಿಲ್ಲವಾದರೆ ಜಾಗತಿಕ ರಾಜಕಾರಣದ ಬಗ್ಗೆ ಪರಿಣಿತರಾದ ಮತ್ತು ಜಾಗತಿಕ ಶಾಂತಿಯನ್ನು ಆಶಿಸುವವರಾದ ಕೆಲವು ಗಣ್ಯ ಮುಸ್ಲಿಮೇತರ ಮಹಾನುಭಾವರ ಮಾತುಗಳನ್ನು ಆಲಿಸಿರಿ. ಉದಾಹರಣೆಗೆ, ಭಯೋತ್ಪಾದನೆಯನ್ನು ಮತ್ತು ವಿಶಿಷ್ಟವಾಗಿ ಭಯೋತ್ಪಾದಕ ಗುಂಪಾದ ದಾಯೆಶನ್ನು ಸೋಲಿಸುವ ಬಗ್ಗೆ ಆಸ್ಟ್ರಿಯ ದೇಶದ ವಿದೇಶಕಾರ್ಯ ಮಂತ್ರಿ ಹೀಗೆ ಹೇಳಿದರು:

*"ನಾವು ಪ್ರಾಯೋಗಿಕ ಮನೋಭಾವ ಹೊಂದಬೇಕು. ಪ್ರೆಸಿಡೆಂಟ್ ಅಲ್ ಅಸದ್‌ರನ್ನು ತೊಡಗಿಸಿಕೊಂಡು ಇಸ್ಲಾಮಿಕ್ ಸ್ಟೇಟ್ ಭಯೋತ್ಪಾದನೆಯ ವಿರುದ್ಧ ಹೋರಾಡಬೇಕು. ನನ್ನ ಅಭಿಪ್ರಾಯದಲ್ಲಿ ಭಯೋತ್ಪಾದನೆ ವಿರುದ್ಧ ಹೋರಾಟಕ್ಕೆ ಆದ್ಯತೆ ನೀಡಬೇಕು. ರಶ್ಯ ಮತ್ತು ಇರಾನ್‌ನಂತಹ ದೇಶಗಳ ಸಹಾಯ ಪಡೆಯದೆ ಇದು ಸಾಧ್ಯವಾಗದು."*

ದಿ ಲಂಡನ್ ಸ್ಕೂಲ್ ಆಫ್ ಎಕೋನೋಮಿಕ್ಸ್‌ನಲ್ಲಿ ಅನೇಕ ವರ್ಷಗಳ ಕಾಲ ಕಲಿಸುತ್ತಿದ್ದ ನಿವೃತ್ತ ಪೊಲಿಟಿಕಲ್ ಫಿಲಾಸಫರ್ ಪ್ರೊಫೆಸರ್ ಜಾನ್ ಗ್ರೇ ಇತ್ತೀಚೆಗೆ ಬರೆದ ಲೇಖನದಲ್ಲಿ ಶಾಂತಿ ಸ್ಥಾಪನೆಗೆ ಆದ್ಯತೆ ನೀಡುವ ಪ್ರಾಮುಖ್ಯತೆ ಬಗ್ಗೆ ಪ್ರತಿಪಾದಿಸಿದ್ದರು. ಅವರು ಹೀಗೆ ಬರೆದರು:

*"ಸರಕಾರದ ವಿಧಾನ– ಪ್ರಜಾಪ್ರಭುತ್ವ, ನಿರಂಕುಶ ಪ್ರಭುತ್ವ, ದೊರೆಯಾಡಳಿತೆ ಅಥವಾ ಜನರಾಡಳಿತೆ ಮೊದಲಾದುವು ಶಾಂತಿ ಸ್ಥಾಪಿಸುವುದಕ್ಕಿಂತ ಕಡಿಮೆ ಮಹತ್ವಪೂರ್ಣವಾಗಿದೆ."*

ನನ್ನ ಅಭಿಪ್ರಾಯ ಪ್ರಕಾರ ಇದು ಅತ್ಯಂತ ಸೂಕ್ಷ್ಮ ದರ್ಶಿತ್ವದಿಂದ ಕೂಡಿದ ಅಭಿಪ್ರಾಯ ಪ್ರಕಟಣೆಯಾಗಿದೆ. ಆದರೆ ಇಂದಿನ ಲೋಕದ ಪ್ರಮುಖ ಶಕ್ತಿಶಾಲಿ ದೇಶಗಳು ಸ್ಥಿರಸ್ಥಿತಿಯಲ್ಲಿದ್ದ ದೇಶಗಳಲ್ಲಿ ಕೂಡ ಆಡಳಿತೆಗಳ ಬದಲಾವಣೆಗೆ ಆದ್ಯತೆ ನೀಡುತ್ತಿವೆ.

ಉದಾಹರಣೆಗೆ, ಪಾಶ್ಚಿಮಾತ್ಯ ದೇಶಗಳು ಇರಾಕ್‌ನಿಂದ ಸದ್ದಾಮ್ ಹುಸೈನನ್ನು ಅಧಿಕಾರ ಚ್ಯುತಿಗೊಳಿಸಲು ದೃಢನಿರ್ಧಾರ ಮಾಡಿದುವು. ಹದಿಮೂರು ವರ್ಷಗಳ ಹಿಂದೆ ನಡೆದ ಆ ಯುದ್ಧದ ದಾರುಣ ಪರಿಣಾಮಗಳು ಇಂದು ಸಹ ಮುಂದುವರಿಯುತ್ತಿವೆ. ಇನ್ನೊಂದು ಉದಾಹರಣೆ, ಲಿಬಿಯಾ ದೇಶದ್ದಾಗಿದೆ. 2011ರಲ್ಲಿ ಪ್ರಸಿಡೆಂಟ್ ಗದ್ದಾಫಿಯನ್ನು ಅಧಿಕಾರದಿಂದ ಬಲಾತ್ಕಾರವಾಗಿ ಹೊರದೂಡಲಾಯಿತು. ಅಂದಿನಿಂದ ಲಿಬಿಯಾ ದೇಶ ಅರಾಜಕತೆ ಮತ್ತು ಅನಿಯಂತ್ರಿತ ವಿನಾಶದಿಂದ ಭರಿತವಾಗಿದೆ.

ಲಿಬಿಯಾದಲ್ಲಿ ಸಂಭವಿಸಿದ ರಾಜಕೀಯ ಶೂನ್ಯತೆಯ ಕಾರಣ ದಾಯೆಶ್ ಅಲ್ಲಿ ತನ್ನ ಭಯೋತ್ಪಾದಕ ಚಟುವಟಿಕೆಗಳಿಗೆ ಪ್ರಮುಖ ತಾಣವನ್ನು ಸೃಷ್ಟಿಸಿಕೊಂಡಿದೆ ಮತ್ತು ಅದು ಬಲಿಷ್ಠವಾಗುತ್ತಿದೆ. ಇದು ಈ ಪ್ರದೇಶಕ್ಕೆ ಮಾತ್ರವಲ್ಲ ಯೂರೋಪಿಗೂ ಅಪಾಯಕಾರಿಯಾಗಿದೆ. ನಾನು ಇದರ ಬಗ್ಗೆ ಹಿಂದೆಯೇ ಮುನ್ನೆಚ್ಚರಿಕೆ ನೀಡಿದ್ದೆ. ಆದುದರಿಂದ ಅಂತಹ ದೇಶಗಳಲ್ಲಿ ಆಡಳಿತಾಧಿಕಾರಿಗಳನ್ನು ಬದಲಾಯಿಸುವ ಬಗ್ಗೆ ಆದ್ಯತೆ ನೀಡಬಾರದು. ಅದಕ್ಕೆ ಬದಲಾಗಿ ಆ ದೇಶಗಳ ಜನರಿಗೆ ಅವರ ಹಕ್ಕುಗಳನ್ನು ನೀಡುವ ಬಗ್ಗೆ ಮತ್ತು ಸ್ಥಿರವಾದ ಶಾಂತಿ ಸ್ಥಾಪನೆ ಬಗ್ಗೆ ಆದ್ಯತೆ ನೀಡಬೇಕು.

ಸಿರಿಯಾದ ಬಗ್ಗೆ ಪುನಃ ನಾನು ಹೇಳಲು ಬಯಸುತ್ತೇನೆ. ನಾನು ಆಸ್ಟ್ರೀಯದ ವಿದೇಶಕಾರ್ಯ ಮಂತ್ರಿಯ ಅಭಿಪ್ರಾಯವನ್ನು ಅನುಮೋದಿಸುತ್ತೇನೆ. ಆ ದೇಶದಲ್ಲಿ ಶಾಂತಿ ಸ್ಥಾಪಿಸುವ ಬಗ್ಗೆ ಆದ್ಯತೆ ನೀಡಬೇಕು. ಆದುದರಿಂದ ಮಹಾಶಕ್ತಿ ರಾಷ್ಟ್ರಗಳು ಸಿರಿಯಾದ ಸರಕಾರದೊಂದಿಗೆ ಸಂವಾದದ ಮಾರ್ಗ ತೆರೆಯಬೇಕು ಮತ್ತು ಅಲ್ಲಿ ಪ್ರಭಾವಶಾಲಿಯಾಗಿರುವ ನೆರೆಹೊರೆಯ ದೇಶಗಳ ನೆರವು ಅಪೇಕ್ಷಿಸಬೇಕು.

ಉತ್ತಮ ಪರಿಣಾಮ ಉಂಟಾಗಲು ಸ್ವಾರ್ಥ ಹಿತಾಸಕ್ತಿಗಳನ್ನು ಬದಿಗೆ ಸರಿಸಿ ಬಹುಜನರಿಗೆ ಹಿತಕರವಾದ ರೀತಿಯಲ್ಲಿ ಮತ್ತು ಎಲ್ಲ ಸಂದರ್ಭಗಳಲ್ಲಿ ನಿಷ್ಪಕ್ಷಪಾತವಾಗಿ ವರ್ತಿಸುವುದು ಆವಶ್ಯಕವಾಗಿದೆ ಎನ್ನುವುದನ್ನು ನೆನಪಿಸಬೇಕು. ನಾನು ಹಿಂದೆ ಹೇಳಿದ ಹಾಗೆ, ನ್ಯಾಯದ ಅಸ್ತಿಭಾರದ ಮೇಲೆ ಶಾಂತಿ ನಿರ್ಮಿಸಲ್ಪಡುತ್ತದೆ ಎಂದು ಇಸ್ಲಾಂ ಪ್ರತಿಪಾದಿಸುತ್ತದೆ. ನಾವು ನಮ್ಮ ಕಾಲದ ಸಮಸ್ಯೆಗಳ ಬಗ್ಗೆ ತುರ್ತಾಗಿ ಗಮನ ಹರಿಸಬೇಕು. ಲೋಕವು ಇನ್ನೊಂದು ಮಹಾಯುದ್ಧದ ಕಡೆಗೆ ಸಾಗುತ್ತಿರುವುದಾಗಿ ನಾನು ಅನೇಕ ವರ್ಷಗಳಿಂದ ಮುನ್ನೆಚ್ಚರಿಕೆ ನೀಡುತ್ತಿದ್ದೆ. ಈಗ ಇತರರೂ ಇದೇ ನಿಷ್ಕರ್ಷಗೆ ತಲಪುತ್ತಿದ್ದಾರೆ.

ಇನ್ನೊಂದು ಜಾಗತಿಕ ಯುದ್ಧ ಪ್ರಾರಂಭವಾಗಿದೆ ಎಂದು ಕೆಲವು ಗಣ್ಯರು ಹೇಳುತ್ತಿದ್ದಾರೆ. ಆದರೆ ನಾನು ಹೇಳುವುದೇನೆಂದರೆ, ಇನ್ನೊಂದು ಜಾಗತಿಕ ಯುದ್ಧವನ್ನು ತಡೆಗಟ್ಟಲು ನಮಗೆ ಇನ್ನೂ ಸಮಯಾವಕಾಶವಿದೆ. ಆದರೆ ಇದಕ್ಕೆ ಆವಶ್ಯಕವಾದುದು ಸ್ವಾರ್ಥ ಹಿತಾಸಕ್ತಿಗಳನ್ನು ತೊರೆಯುವುದು ಮತ್ತು ನ್ಯಾಯಪಾಲನೆ ಮಾಡುವುದಾಗಿದೆ. ನಾನು ಇದರ ಮೊದಲು ಅನೇಕ ಸಂದರ್ಭಗಳಲ್ಲಿ ಭಯೋತ್ಪಾದಕ ಗುಂಪುಗಳಿಗೆ ಸಿಗುವ ಸಾಂಪತ್ತಿಕ ಸಹಾಯಗಳನ್ನು ಕಡಿದು ಹಾಕುವ ಬಗ್ಗೆ ಮತ್ತು ಅವರಿಗೆ ಸರಕುಗಳ ಪೂರೈಕೆ ತಡೆಯುವ ಬಗ್ಗೆ ತುರ್ತಾಗಿ ಗಮನ ಹರಿಸುವ ಕುರಿತು ಪ್ರಸ್ತಾಪಿಸಿದ್ದೆ. ಈ ನಿಟ್ಟಿನಲ್ಲಿ ಪರಿಪೂರ್ಣ ಪ್ರಯತ್ನಗಳನ್ನು ನಡೆಸಲಾಗಿದೆ ಎಂದು ಹೇಳಲು ಸಾಧ್ಯವಿಲ್ಲ. ಇತ್ತೀಚೆಗೆ ದಿ ವಾಲ್ ಸ್ಟ್ರೀಟ್ ಜರ್ನಲ್ (The Wall Street Journal)ನಲ್ಲಿ ಪ್ರಕಟವಾದ ಒಂದು ತಪಾಸಣೆ ವರದಿಯಲ್ಲಿ ಹೀಗೆ ಬರೆಯಲಾಗಿದೆ. ಇರಾಕಿನ ಸೆಂಟ್ರಲ್ ಬ್ಯಾಂಕ್ ನಡೆಸುವ ಏಲಂ ಮೂಲಕ ದಾಯೆಶ್ ಉಗ್ರರು ಡಾಲರ್‌ಗಳನ್ನು ಬೃಹತ್ ಪ್ರಮಾಣದಲ್ಲಿ ಸ್ವಾಧೀನ ಪಡಿಸಿಕೊಳ್ಳುತ್ತಿದ್ದಾರೆ. ಈ ಡಾಲರ್‌ಗಳನ್ನು ಯುನೈಟೆಡ್ ಸ್ಟೇಟ್ಸ್ ಸರಕಾರದ ಫೆಡರಲ್ ರಿಸರ್ವ್‌ನಿಂದ ಇರಾಖ್‌ಗೆ ನೇರವಾಗಿ ಪೂರೈಕೆ ಮಾಡಲಾಗುತ್ತಿದೆ. ಲೇಖನದಲ್ಲಿ ಹೀಗೆ ಬರೆಯಲಾಗಿದೆ: 2015 ಜೂನ್ ತಿಂಗಳಿನಿಂದಲೇ ಈ ವಿಷಯ ಯು.ಎಸ್. ಸರಕಾರಕ್ಕೆ ತಿಳಿದಿದೆ. ಆದರೆ ನಾನು ನಂಬುವುದೇನೆಂದರೆ, ಈ ವಿಷಯ ಅಮೇರಿಕದ ಸರಕಾರಕ್ಕೆ ಅದಕ್ಕಿಂತ ಎಷ್ಟೋ ಕಾಲ ಹಿಂದಿನಿಂದ ತಿಳಿದಿತ್ತು.

ತೈಲ ಮಾರಾಟದ ಬಗ್ಗೆ ಹೇಳುವುದಾದರೆ, ದಾಯೆಶ್‌ನಿಂದ ವಿವಿಧ ಗುಂಪುಗಳು ಮತ್ತು ಸರಕಾರಗಳು ತೈಲವನ್ನು ಖರೀದಿಸುತ್ತವೆ. ಈ ವ್ಯಾಪಾರವನ್ನು ಯಾಕೆ ತಡೆಗಟ್ಟಿಲ್ಲ? ಇಂತಹ ವ್ಯವಹಾರಗಳನ್ನು ತಡೆಯಲು ನಿರ್ಬಂಧಗಳನ್ನು ಯಾಕೆ ಹೇರಿಲ್ಲ? ತೈಲವನ್ನು ಗಳಿಸುವುದಕ್ಕೆ ಸಂಬಂಧಿಸಿ ನೈತಿಕತೆ ಕಿಟಿಕಿಯಿಂದ ಹೊರಹೋಗುತ್ತದೆ ಎಂದು ತೋಚುತ್ತದೆ. ಇದೇ ವಿಷಯವನ್ನು ಲಂಡನಿನ ಕಿಂಗ್ಸ್ ಕಾಲೇಜಿನ ಪ್ರೊಫೆಸರ್ ಲೈಫ್ ವೇನರ್ (Leif Wenar) ಇತ್ತೀಚೆಗೆ ಒಂದು ಲೇಖನದಲ್ಲಿ ಹೀಗೆ ಬರೆದಿದ್ದಾರೆ:

*"ತೈಲವನ್ನು ಗಳಿಸಲು ಲೋಕವು ಎಲ್ಲ ವಿಧ ಘೋರ ಅಮಾನವೀಯ ಕೃತ್ಯಗಳನ್ನು ಸಹಿಸುತ್ತದೆ. ಮಾನವ ಹಕ್ಕುಗಳನ್ನು ಧಾರಾಳವಾಗಿ ಉಲ್ಲಂಘಿಸುವ ದಾಯೆಶ್‌ನಿಂದಲೂ ಸೂಡಾನ್‌ನಿಂದಲೂ ವಿವಿಧ ದೇಶಗಳು ತೈಲವನ್ನು ಖರೀದಿಸಿವೆ. ಇದು ಮೂಲಭೂತ ಮಾರುಕಟ್ಟೆ ಆರ್ಥಿಕ ವ್ಯವಸ್ಥೆಗಳ ಉಲ್ಲಂಘನೆಯಾಗಿದೆ. ಹಾಗೆ ಹಿಂಸಾಚಾರಗಳ ಮೂಲಕ ಆಸ್ತಿ ಹಕ್ಕುಗಳನ್ನು ಪಡೆಯಬಾರದು ಎಂಬ ನಿಯಮವನ್ನು ಉಲ್ಲಂಘಿಸಲಾಗಿದೆ."*

ಇತ್ತೀಚೆಗೆ ಒಂದು ಲೇಖನದಲ್ಲಿ ಇರಾಕ್ ಎನರ್ಜಿ ಇನ್‌ಸ್ಟಿಟ್ಯೂಟಿನ ಡೈರೆಕ್ಟರ್, ದಾಯೆಶ್ ತೈಲವನ್ನು ಹೇಗೆ ಮಾರಾಟ ಮಾಡುತ್ತಿದೆ ಎನ್ನುವ ಬಗ್ಗೆ ಹೀಗೆ ಬರೆದಿದ್ದಾರೆ:

*"ಕಚ್ಚಾತೈಲವನ್ನು ಟ್ಯಾಂಕರ್‌ಗಳಲ್ಲಿ ಅಂಬರ್ ಪ್ರಾಂತ್ಯ ಮೂಲಕ ಜೋರ್ಡಾನಿಗೆ ಸಾಗಿಸಲಾಗುತ್ತಿದೆ. ಕುರ್ದಿಸ್ಥಾನ್ ಮೂಲಕ ಇರಾನಿಗೆ ಸಾಗಿಸಲಾಗುತ್ತಿದೆ. ಮೋಸುಲ್ ಮೂಲಕ ಟರ್ಕಿಗೆ ಮತ್ತು ಸಿರಿಯಾದ ಲೋಕಲ್ ಮಾರ್ಕೆಟ್‌ಗೆ, ಇರಾಕಿನ ಕುರ್ದಿಸ್ಥಾನಕ್ಕೆ ಸಾಗಿಸಲಾಗುತ್ತದೆ. ಅದರ ಬಹುತೇಕ ಭಾಗ ಸ್ಥಳೀಯವಾಗಿ ಶುದ್ಧೀಕರಿಸಲ್ಪಡುತ್ತದೆ. ಇದರಲ್ಲಿ ಸರಕಾರಿ ಅಧಿಕಾರಿಗಳು ಭಾಗವಹಿಸುವುದಿಲ್ಲ ಎಂದು ಹೇಳುವುದು ತರ್ಕಬದ್ಧವಾದ ಮಾತಲ್ಲ."*

ಆದುದರಿಂದ ಭಯೋತ್ಪಾದನೆಯನ್ನು ನಿರ್ನಾಮಗೊಳಿಸಲು ಸಾಧ್ಯವಾದ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹೇಳಲಾಗುತ್ತಿದ್ದರೂ ಸಾಕ್ಷ್ಯಗಳು ಈ ವಾದವನ್ನು ದೃಢೀಕರಿಸುವುದಿಲ್ಲ. ಹೀಗೆಲ್ಲ ನಡೆಯುವಾಗ ಲೋಕದಲ್ಲಿ ಸತ್ಯವಾದ ನ್ಯಾಯಪಾಲನೆ ನಡೆಯುತ್ತಿದೆ ಎಂದು ಹೇಳಲು ಹೇಗೆ ತಾನೆ ಸಾಧ್ಯ? ಪ್ರಾಮಾಣಿಕತೆ ಮತ್ತು ಸತ್ಯಸಂಧತೆ ಪ್ರಾಮುಖ್ಯತೆ ಪಡೆದಿವೆ ಎಂದು ಹೇಳಲು ಹೇಗೆ ತಾನೆ ಸಾಧ್ಯ? ಇತ್ತೀಚೆಗೆ ಜಾಗತಿಕ ಆಯುಧ ವ್ಯಾಪಾರದ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದೆ.

ಸರಕಾರಿ ವರದಿಗಳ ಪ್ರಕಾರ ಕಳೆದ ವರ್ಷ ಯುನೈಟೆಡ್ ಸ್ಟೇಟ್ಸ್ 46.6 ಬಿಲಿಯನ್ ಡಾಲರ್ ಬೆಲೆಬಾಳುವ ಆಯುಧಗಳನ್ನು ರಫ್ತು ಮಾಡಿತು. ಅದು ಅದರ ಹಿಂದಿನ ವರ್ಷ ರಫ್ತು ಮಾಡಿದುದಕ್ಕಿಂತ 12 ಬಿಲಿಯನ್ ಡಾಲರ್ ಹೆಚ್ಚಿಗೆ ಆಗಿದೆ. ಈ ಆಯುಧಗಳ ಬಹುತೇಕ ಭಾಗವನ್ನು ಮಧ್ಯಪೂರ್ವ ದೇಶಗಳಿಗೆ ರಫ್ತು ಮಾಡಲಾಯಿತು. ಸಿರಿಯಾ, ಇರಾಕ್, ಯೆಮನ್‌ಗಳಲ್ಲಿ ನಡೆಯುವ ಯುದ್ಧಗಳಿಗೆ ಅವುಗಳನ್ನು ಬಳಸಲಾಗಿದೆ. ಇಂತಹ ವ್ಯಾಪಾರ ನಡೆಯುತ್ತಿರುವಾಗ ಲೋಕದಲ್ಲಿ ಶಾಂತಿ ಮತ್ತು ನ್ಯಾಯ ಸ್ಥಾಪಿತವಾಗುವುದಾದರೂ ಹೇಗೆ ಎಂದು ನಾನು ಪುನರಾವರ್ತಿಸಲು ಬಯಸುತ್ತೇನೆ.

ನಾನು ಪ್ರಸ್ತಾಪಿಸಿದ ಉದಾಹರಣೆಗಳು ಬಹಿರಂಗವಾದುವವುಗಳೇ ಆಗಿವೆ. ಅಭಿಪ್ರಾಯಗಳು ಗೌರವಾನ್ವಿತ ಅನ್ವೇಷಕರದ್ದು ಮತ್ತು ವಿಮರ್ಶಕರದ್ದಾಗಿವೆ. ಸಮಾಜದ ಎಲ್ಲ ಹಂತಗಳಲ್ಲೂ ದೇಶಗಳ ಮಧ್ಯೆಯೂ ನ್ಯಾಯಪಾಲನೆಯ ತತ್ವಗಳು ಪ್ರಕಟವಾಗುವ ತನಕ ನಾವು ಲೋಕದಲ್ಲಿ ವಾಸ್ತವಿಕ ಶಾಂತಿಯನ್ನು ಕಾಣಲಾರೆವು. ನ್ಯಾಯಪಾಲನೆ ಮಾಡುವುದಿಲ್ಲವಾದರೆ ದಾಯೆಶ್ ಮತ್ತು ಅವರ ಹಾಗಿರುವ ಉಗ್ರಗಾಮಿ ಗುಂಪುಗಳನ್ನು ಸೋಲಿಸಲು ದಶಕಗಳು ಬೇಕಾಗುವುವು.

ಆದರೆ ಈ ಸಂದೇಶದ ಕಡೆಗೆ ಲೋಕವು ಲಕ್ಷ್ಯ ನೀಡುವುದಾದರೆ ಮತ್ತು ನ್ಯಾಯಪಾಲನೆ ಮಾಡುವುದಾದರೆ ಭಯೋತ್ಪಾದಕರಿಗೆ ಭಂಡವಾಳ ಒದಗಿಸುವುದನ್ನು ಮತ್ತು ಸರಕು ಸಾಗಾಣಿಕೆ ಮಾಡುವುದನ್ನು ತಡೆಯಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡುವುದಾದರೆ ಲೋಕಕ್ಕೆ ಚಿತ್ರಹಿಂಸೆ ನೀಡುತ್ತಿರುವ ಭಯೋತ್ಪಾದಕರ ಜಾಲಗಳನ್ನು ತಕ್ಷಣ ನಾಶಗೊಳಿಸಲು ಸಾಧ್ಯ. ಒಬ್ಬ ನಿವೃತ್ತ ಅಮೇರಿಕನ್ ಮಿಲಿಟರಿ ಜನರಲ್ ಇತ್ತೀಚೆಗೆ ಹೇಳಿದ ಹಾಗೆ ದಾಯೆಶ್ ವಿರುದ್ಧ ಹೋರಾಟ ಹತ್ತು ಅಥವಾ ಇಪ್ಪತ್ತು ವರ್ಷಗಳ ಕಾಲ ಮುಂದುವರಿಯುವ ಆವಶ್ಯಕತೆ ಇರಲಾರದು.

ಕೊನೆಯದಾಗಿ ನಾನು ಹೇಳಲು ಬಯಸುವುದೇನೆಂದರೆ, ನನ್ನ ನಂಬಿಕೆ ಏನೆಂದರೆ, ಲೋಕವು ತನ್ನ ಸೃಷ್ಟಿಕರ್ತನನ್ನು ಗುರುತಿಸಿ ಅವನನ್ನು ತಮ್ಮ ಪರಿಪಾಲಕನಾಗಿ ಅಂಗೀಕರಿಸುವ ತನಕ ವಾಸ್ತವಿಕ ನ್ಯಾಯಪಾಲನೆ ಜಾರಿಗೊಳ್ಳಲಾರದು. ವಾಸ್ತವಿಕ ನ್ಯಾಯಪಾಲನೆ ಜಾರಿಗೊಳ್ಳಲಾರದು ಮಾತ್ರವಲ್ಲ ನಾವು ಮಾರಕ ಅಣುಬಾಂಬ್ ಪ್ರಯೋಗಿಸಲ್ಪಡುವ ಒಂದು ಯುದ್ಧವನ್ನು ಅನುಭವಿಸಬೇಕಾಗುವುದು. ಅದರ ವಿಧ್ವಂಸಕರ ಪರಿಣಾಮಗಳನ್ನು ನಮ್ಮ ಮುಂದಿನ ಪೀಳಿಗೆಗಳು ಅನುಭವಿಸುವುವು. ಲೋಕವು ಈ ವಾಸ್ತವಿಕ ಸ್ಥಿತಿಯನ್ನು ಅರಿತುಕೊಳ್ಳುವಂತಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ. ನಾವು ಮಾನವರ ಸೇವೆಗೋಸ್ಕರ ನಮ್ಮ ಪಾತ್ರವನ್ನು ನಿರ್ವಹಿಸುವವರಾಗಲಿ ಎಂದೂ ಸಹ ನಾನು ಪ್ರಾರ್ಥಿಸುತ್ತೇನೆ. ನ್ಯಾಯಪಾಲನೆಯ ಅಸ್ತಿಭಾರದ ಮೇಲೆ ಸ್ಥಾಪಿಸಲಾದ ಶಾಂತಿಯು ಲೋಕದ ಎಲ್ಲ ಭಾಗಗಳಲ್ಲಿ ಹರಡಲಿ ಎಂದು ಸಹ ನಾನು ಪ್ರಾರ್ಥಿಸುತ್ತೇನೆ. ಇಷ್ಟು ಹೇಳಿ ನಾನು ನಿಮಗೆ ನೀವು ಈ ಸಭೆಗೆ ಈ ಸಂಜೆ ನಮ್ಮೊಂದಿಗೆ ಸೇರಿರುವುದರಿಂದ ಇನ್ನೊಮ್ಮೆ ಕೃತಜ್ಞತೆ ಸಲ್ಲಿಸುತ್ತೇನೆ.

ಅಲ್ಲಾಹನು ನಿಮಗೆಲ್ಲರಿಗೂ ಅನುಗ್ರಹ ನೀಡಲಿ.

ನಿಮಗೆ ಧನ್ಯವಾದಗಳು.

(The Review of Religions- May 2016 ಸಂಚಿಕೆಯಿಂದ.
ಅನುವಾದಕ: ಯಮ್. ಉಬೈದುಲ್ಲಾ)

**ಇನ್‌ಸಾನಿಯತ್ ಝಿಂದಾಬಾದ್**

**ಮಾನವೀಯತೆ ಚಿರಕಾಲ ಬಾಳಲಿ**

# ಅಹ್ಮದಿಯಾ ಸಂದೇಶ*



**ಸರ್ ಮುಹಮ್ಮದ್ ಝುಫರುಲ್ಲಾ ಖಾನ್**
ಅಂತರ್ರಾಷ್ಟ್ರೀಯ ನ್ಯಾಯಾಲಯದ ಮಾಜಿ ಅಧ್ಯಕ್ಷರು

ಅಹ್ಮದಿಯಾ ಜಮಾಅತಿನ ತತ್ವಗಳ ಬಗ್ಗೆ ವಿವರಿಸುವುದಕ್ಕೆ ಮೊದಲು ನಾನು ಒಂದು ವಿಷಯವನ್ನು ಚೆನ್ನಾಗಿ ಸ್ಪಷ್ಟಪಡಿಸಲು ಬಯಸುತ್ತೇನೆ. ಅಹ್ಮದಿಯ್ಯತ್ ಬಗ್ಗೆ ಬಹಳ ತಪ್ಪು ಗ್ರಹಿಕೆಗಳಿವೆ. ಒಂದು ಅಭಿಪ್ರಾಯವೇನೆಂದರೆ, ಅಹ್ಮದಿಯ್ಯತ್ ಯಾವುದೇ ಹೊಸ ಸಂದೇಶವನ್ನು ತಂದಿಲ್ಲ. ಆದುದರಿಂದ ಅದರ ಬಗ್ಗೆ ಗಮನಿಸುವ ಆವಶ್ಯಕತೆ ಇಲ್ಲ. ಇನ್ನೊಂದು ಅಭಿಪ್ರಾಯವೇನೆಂದರೆ, ಅದು ಇಸ್ಲಾಮ್ ಧರ್ಮ ತತ್ವಗಳ ಮೇಲೆ ಕ್ರಾಂತಿಕಾರಿ ಆಕ್ರಮಣ ನಡೆಸುತ್ತದೆ. ಆದುದರಿಂದ ಅದನ್ನು ಬಲಯುತವಾಗಿ ನಿಷ್ಠಾವಂತರಾದ ಮುಸ್ಲಿಮರು ಎದುರಿಸಬೇಕು. ಈ ಎರಡು ಅಭಿಪ್ರಾಯಗಳೂ ತಪ್ಪಾಗಿವೆ. ಅಹ್ಮದಿಯ್ಯತ್ ಎಂದರೆ ಒಂದು ಹೊಸ ಧರ್ಮವಲ್ಲ. ಇದು ಅತ್ಯಂತ ಪರಿಪೂರ್ಣವಾದ ಸತ್ಯವಾಗಿದೆ. ನಮ್ಮ ಅಭಿಪ್ರಾಯವೇನೆಂದರೆ, ಇಸ್ಲಾಮ್ ಧರ್ಮದ ಇನ್ನೊಂದು ಹೆಸರೇ ಅಹ್ಮದಿಯ್ಯತ್ ಆಗಿದೆ. ಇಸ್ಲಾಮನ್ನು ಅನುಷ್ಠಿಸುವುದಾಗಿ ಹೇಳಿಕೊಳ್ಳುವ ಜನರಿಂದ ನಮ್ಮನ್ನು ಬೇರೆಯಾಗಿ ತೋರಿಸಲು ನಾವು ಇಸ್ಲಾಮಿಗೆ ನೀಡುವ ವ್ಯಾಖ್ಯಾನಕ್ಕೆ ಒಂದು ಹೆಸರು ನೀಡುವುದು ಆವಶ್ಯಕವಾಗಿರುತ್ತದೆ. ನಾವು ನೀಡುವ ವ್ಯಾಖ್ಯಾನವೆಂದರೆ ನಮ್ಮ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್[ಅ] ನೀಡಿದ ವ್ಯಾಖ್ಯಾನವಾಗಿದೆ. ವಾಗ್ದತ್ತ ಮಸೀಹ್ ಎಂದು ನಾವು ಅವರನ್ನು ನಂಬುತ್ತೇವೆ. ಅವರು ಇಸ್ಲಾಮ್ ಧರ್ಮದ ನೈಜ ವ್ಯಾಖ್ಯಾನವನ್ನು ಜನರ ಮುಂದಿರಿಸಿದರು. ಇದನ್ನೇ ನಾವು ಅಹ್ಮದಿಯ್ಯತ್ ಎಂದು ಹೇಳುತ್ತೇವೆ. ಆದರೆ ಹೀಗೆ ಹೇಳುವಾಗ ನಾನು ಇಸ್ಲಾಂ ಧರ್ಮದಲ್ಲಿ ಅಹ್ಮದಿಯ್ಯತ್ ಹೊಂದಿರುವ ಮಹತ್ವಪೂರ್ಣ ಸ್ಥಾನವನ್ನು ತಗ್ಗಿಸುವುದಿಲ್ಲ ಅಥವಾ ಅದರ ಬಗ್ಗೆ ತಪ್ಪು ಮಾಹಿತಿ ನೀಡುತ್ತಲೂ ಇಲ್ಲ. ನಾನು ಹೇಳಿದುದರ ಅರ್ಥವೇನೆಂದರೆ, ಅಹ್ಮದಿಯ್ಯತ್‌ನಲ್ಲಿ ಇಸ್ಲಾಮ್ ಹೊರತು ಇನ್ನೇನೂ ಇಲ್ಲ ಎಂದು ಮಾತ್ರವಾಗಿದೆ. ಆದರೆ ಅದು ವಾಸ್ತವಿಕವಾಗಿ ಇಸ್ಲಾಮಿನ ಬಗ್ಗೆ ಸಂಪೂರ್ಣವಾಗಿ ಹೊಸದಾದೊಂದು ಕಲ್ಪನೆಯಾಗಿದೆ. ಇಪ್ಪತ್ತನೆಯ ಶತಮಾನದ ಜನರಿಗೆ ಅದು ಸಂಪೂರ್ಣವಾಗಿ ಹೊಸದಾದೊಂದು ತಾಜಾ ಕಲ್ಪನೆಯೇ ಆಗಿದೆ. ಆದರೆ ನಾವು ಪ್ರತಿಪಾದಿಸುವ ಪ್ರತಿಯೊಂದು ತತ್ವದ ಮೂಲವು ಇಸ್ಲಾಮಿನ ಮೂಲ ಉದ್ಭವ ಸ್ಥಾನವಾದ ಪವಿತ್ರ ಖುರ್‌ಆನೇ ಆಗಿದೆ. ನಾವು ಅದರೊಂದಿಗೆ ಹಝ್ರತ್ ಮುಹಮ್ಮದ್ ಪೈಗಂಬರರ[ಸ] ನುಡಿಮುತ್ತುಗಳನ್ನೂ ಚರ್ಯೆಗಳನ್ನೂ ಆಧಾರವಾಗಿಟ್ಟುಕೊಂಡಿದ್ದೇವೆ. ಆದುದರಿಂದ ನಾವು ಪ್ರತಿಪಾದಿಸುವ ಅತ್ಯಂತ ಚಿಕ್ಕ ತತ್ವದ ಬಗ್ಗೆ ನಾವು ಮೂಲಾಧಾರ ನೀಡಬಲ್ಲೆವು. ನಾವು ಪ್ರತಿಪಾದಿಸುವ ತತ್ವಗಳು ಹೊಸದಾಗಿ ಕಾಣುವುದು ಯಾಕೆಂದರೆ ಲೋಕವು ಇಸ್ಲಾಮಿನಿಂದ ಬಹಳ ದೂರ ದೂರ ಸಾಗಿದೆ. ಅಹ್ಮದಿಯ್ಯತ್ ಒಂದು ಹೊಸ ವ್ಯಾಖ್ಯಾನ ಮಾತ್ರವಲ್ಲ ಅದು ನಾನು ಮೇಲೆ ವಿವರಿಸಿದ ರೀತಿಯಲ್ಲಿ ಒಂದು ಹೊಸ ದೈವಿಕ ವಿಧಿವಿಧಾನವೇ ಆಗಿದೆ. ಆದುದರಿಂದ ಅಹ್ಮದಿಯ್ಯತ್ ಕಡೆಗಣಿಸಬಹುದಾದುದಲ್ಲ. ಧಾರ್ಮಿಕ ಸಾಗರದಲ್ಲಿ ಆಗಾಗ ಎದ್ದೇಳುತ್ತಾ ಇದ್ದು ಅನಂತರ ಆ ಸಾಗರದಲ್ಲಿ ಲೀನವಾಗಿ ಹೋಗುವ ಅಲೆಗಳ ಹಾಗೆ ಇರುವುದಲ್ಲ ಅಹ್ಮದಿಯ್ಯತ್.

## ದಾರ್ಶನಿಕ ಕಲ್ಪನೆ

ನೀವು ಒಂದು ಕ್ಷಣಕಾಲ ಧರ್ಮದಿಂದ ನಿಮ್ಮ ಯೋಚನೆಗಳನ್ನು ಲೋಕದ ಕಡೆಗೆ ತಿರುಗಿಸಿರಿ. ಇಂದು ವಿಶ್ವ ಹೇಗಿದೆ ಎಂದು ನೋಡಿರಿ. ಇಪ್ಪತ್ತು ಶತಮಾನಗಳ ಹಿಂದೆ ವಿಶ್ವ ಹೇಗಿತ್ತೋ ಹಾಗೆಯೇ ಈಗಲೂ ವಿಶ್ವ ಇದೆ. ನಾವು, ಹಿಂದೆ ವಾಸಿಸುತ್ತಿದ್ದವರು ವಾಸಿಸಿದ ಭೂಮಿಯಲ್ಲಿಯೇ ಈಗಲೂ ವಾಸಿಸುತ್ತಿದ್ದೇವೆ. ನಾವು ಅದೇ ಗ್ರಹಗಳ ಚಲನೆಯ ಪ್ರಭಾವಗಳಿಗೊಳಪಡುತ್ತಿದ್ದೇವೆ. ನಮ್ಮ ಜೀವನ ಮತ್ತು ತಾಜಾತನವನ್ನು ಅದೇ ಸೂರ್ಯ ಮತ್ತು ಅದೇ ಮಳೆ ನೀಡುತ್ತವೆ. ಇವುಗಳಲ್ಲಿ ಯಾವುದೇ ವ್ಯತ್ಯಾಸ ಉಂಟಾಗಿಲ್ಲ. ಕಳೆದ ಇಪ್ಪತ್ತು ಶತಮಾನಗಳಲ್ಲಿ ಹೊಸದಾಗಿ ಏನೂ ಸಂಭವಿಸಲಿಲ್ಲ. ಕಳೆದ ಎರಡು, ಮೂರು, ನಾಲ್ಕು ಅಥವಾ ಐದು ಶತಮಾನಗಳಲ್ಲೂ ಏನೂ ಹೊಸದಾಗಿಲ್ಲ. ಹೀಗಿದ್ದರೂ ನಾವು ಇಂದು ವಾಸಿಸುತ್ತಿರುವ ಲೋಕವು ನೂರು ವರ್ಷಗಳ ಹಿಂದೆ ಇದ್ದ ಅದೇ ಲೋಕವಾಗಿದೆ ಎಂದು ವಾದಿಸಲು ಸಾಧ್ಯವೇ? ನಾವು ಹೊಸದಾದೊಂದು ಲೋಕದಲ್ಲಿದ್ದೇವೆ ಎಂದು ಹೇಳುವುದು ಸತ್ಯವಲ್ಲವೇ?

ಆಧುನಿಕ ವೈಜ್ಞಾನಿಕ ಆವಿಷ್ಕಾರಗಳಿಂದ ಪ್ರಕೃತಿ ರಹಸ್ಯಗಳು ಬಹಿರಂಗಗೊಂಡಿವೆ. ನಾವು ಹಿಂದೆ ಎಂದೂ ಊಹಿಸಲು ಸಾಧ್ಯವಿಲ್ಲದಂತಹ ಪ್ರಕೃತಿ ರಹಸ್ಯಗಳು ನಮಗೆ ತಿಳಿದಿದ್ದು ಪ್ರಕೃತಿ ಶಕ್ತಿಗಳ ಮೇಲೆ ಹೆಚ್ಚು ನಿಯಂತ್ರಣ ಸಾಧಿಸಲು ಸಾಧ್ಯವಾಗಿದೆ. ಪ್ರಕೃತಿ ರಹಸ್ಯಗಳನ್ನೂ ವಿಶ್ವದ ನಿಗೂಢತೆಗಳನ್ನೂ ತಳಸ್ಪರ್ಶಿಯಾಗಿ ತಿಳಿಯಲು ಸಾಧ್ಯವಾಗಿದೆ. ಆದುದರಿಂದ ನಾವು ಇಂದು ವಾಸಿಸುತ್ತಿರುವ ವಿಶ್ವವು ನಮ್ಮ ತಂದೆ ತಾತಂದಿರು ಜೀವಿಸಿದ ಕಾಲದ ವಿಶ್ವಕ್ಕಿಂತ ಪೂರ್ಣವಾಗಿ ಬೇರೆಯಾಗಿದೆ.

---

*1935 ಮಾರ್ಚ್ ದಿನಾಂಕ 2ರಂದು ಲಾಹೋರ್ YMCA ಹಾಲ್‌ನಲ್ಲಿ ಮಾಡಿದ ಭಾಷಣ.

## ಧಾರ್ಮಿಕ ಸ್ಥಿತಿ

ಇದೇ ರೀತಿ ಧಾರ್ಮಿಕವಾಗಿ ಸಹ ನಾವು ಒಂದು ಹೊಸ ವಿಶ್ವದಲ್ಲಿದ್ದೇವೆ. ಆದುದರಿಂದ ಒಂದು ಹೊಸ ಆಧ್ಯಾತ್ಮಿಕ ಪರಿಸ್ಥಿತಿ ಉಂಟಾಗಬೇಕಾಗಿದೆ. ಭೌತಿಕ ವಿಶ್ವವು ಹಿಂದೆ ಇದ್ದಂತೆ ಇದ್ದರೂ ಹೆಚ್ಚು ಜ್ಞಾನ ಗಳಿಕೆ, ತಳಸ್ಪರ್ಶಿ ಸಂಶೋಧನೆಯ ಮೂಲಕ ಮಾಡಲಾಗುವ ಹೊಸ ಆವಿಷ್ಕಾರಗಳು ಮೊದಲಾದುವುಗಳ ಕಾರಣದಿಂದ ಹೊಸ ರೂಪ ಪಡೆದಿರುತ್ತದೆ. ಇಸ್ಲಾಮಿನ ಆಧ್ಯಾತ್ಮಿಕ ಕ್ಷೇತ್ರದಲ್ಲೂ ಹೀಗೆಯೇ ಸಂಭವಿಸಿದೆ. ಇಸ್ಲಾಮಿನ ಮೂಲಾಧಾರಗಳ ಮೇಲೆ ಅಸ್ತಿಭಾರ ಹಾಕಲಾಗಿ ಇಸ್ಲಾಮಿನ ವಾಸ್ತವಿಕ ರೂಪವನ್ನು ಪ್ರಕಟಿಸುತ್ತಿದೆಯಾದರೂ ಇಸ್ಲಾಮಿನ ಹೊಸ ಸೌಂದರ್ಯಗಳನ್ನೂ ಇಸ್ಲಾಮಿನ ಹೊಸದಾಗಿ ಗುರುತಿಸಿದ ಶ್ರೇಷ್ಠತೆಗಳನ್ನೂ– ಅವು ಮೊದಲೇ ಇದ್ದರೂ ಲೋಕವು ಅವುಗಳ ಬಗ್ಗೆ ಅಜ್ಞಾತವಾಗಿತ್ತು– ಲೋಕದ ಮುಂದಿರಿಸಿದುದರಿಂದ ಅವು ಹೊಸದಾಗಿವೆ ಎಂದು ತೋರುತ್ತವೆ. ಇಸ್ಲಾಮಿನ ಈ ಸೌಂದರ್ಯಗಳು, ಈ ಶ್ರೇಷ್ಠತೆಗಳು ಇಸ್ಲಾಮಿನಲ್ಲಿ ಮೊದಲೇ ಇದ್ದರೂ ಇವುಗಳನ್ನು ಬಹಿರಂಗವಾಗಿ ಪ್ರಕಟಿಸಿದುದು ಅಹ್ಮದಿಯ್ಯತ್ ಮಾತ್ರವಾಗಿದೆ. ಆದುದರಿಂದ ಅಹ್ಮದಿಯ್ಯತಿನ ಮಹತ್ವವನ್ನು ತಗ್ಗಿಸಲು ಸಾಧ್ಯವಿಲ್ಲ. ಅಹ್ಮದಿಯ್ಯತ್ ಇಪ್ಪತ್ತನೆಯ ಶತಮಾನದಲ್ಲಿಯೂ ಹತ್ತೊಂಬತ್ತನೆಯ ಶತಮಾನದ ಅಂತಿಮ ಘಟ್ಟದಲ್ಲೂ ಬೆಳಕಿಗೆ ಬಂದಿತ್ತು. ಅಹ್ಮದಿಯ್ಯತ್ ಇಸ್ಲಾಮಿನಲ್ಲಿ ದ್ವಯ ಸ್ಥಾನವನ್ನು ಹೊಂದಿದೆ. ಅದರ ಉದ್ಭವದ ಬಗ್ಗೆ ಹೇಳುವುದಾದರೆ, ಇಸ್ಲಾಮಿನ ಮೇಲೆ ಹೊರಿಸಲಾದ ಎಲ್ಲ ಮನುಷ್ಯ ನಿರ್ಮಿತ ವಿಶ್ವಾಸಗಳನ್ನು ಅದು ತಿರಸ್ಕರಿಸುತ್ತದೆ. ಅದು ಹದಿಮೂರು ನೂರು ವರ್ಷಗಳ ಹಿಂದಿನ ಇಸ್ಲಾಮಿನ ಮೂಲ ವಿಶ್ವಾಸಗಳ ಕಡೆಗೆ ನೇರವಾಗಿ ಹೋಗುತ್ತದೆ. ಆದರೆ ಇನ್ನೊಂದು ಕಡೆ ಅದು ಇಂದಿನ ಪರಿಸ್ಥಿತಿಯ ಮೂಲಕ ದಾಟಿ ಮುಂದೆ ದೂರ ದೂರ ಸಾಗುತ್ತಾ ಇದೆ. ಹೀಗೆ ಇಂದು ಆಧ್ಯಾತ್ಮಿಕವಾಗಿ ಮಾನವರು ಸಂಪೂರ್ಣವಾಗಿ ಹೊಸದಾದೊಂದು ಲೋಕದ ಮೂಲಕ ದಾಟಿಹೋಗಬೇಕಾಗಿದೆ. ವಿಶ್ವದಲ್ಲಿ ಎಂತಹ ಬದಲಾವಣೆಗಳು ಸಂಭವಿಸುತ್ತವೆ ಎಂದರೆ ಮುಂದಿನ ಪೀಳಿಗೆಗಳು ಹಿಂದಿನ ಕಾಲದ ಬಗ್ಗೆ ಚಿಂತಿಸಿ ಆಶ್ಚರ್ಯಪಡುವುವು ಎಂದು ಹೇಳುವುದು ಅತಿಶಯೋಕ್ತಿಯಲ್ಲ. ಬಹಳ ದೊಡ್ಡ ಬದಲಾವಣೆಗಳು ಲೋಕದಲ್ಲಿ ಉಂಟಾಗಲಿವೆ. ಹೊಸ ಆಕಾಶ ಮತ್ತು ಹೊಸ ಭೂಮಿ ಸೃಷ್ಟಿಸಲ್ಪಡುವುವು. ಹೊಸ ಲೋಕ ವ್ಯವಸ್ಥೆ ಸ್ಥಾಪಿತವಾಗುವುದು. ನಾನು ಹೀಗೆ ಹೇಳುವಾಗ ಅಹ್ಮದಿಯ್ಯತಿನ ಒಂದು ಪಾರ್ಶ್ವವನ್ನು ಮಾತ್ರ ಒತ್ತಿ ಹೇಳುತ್ತಿದ್ದೇನೆ; ನಾನು ಅಹ್ಮದಿಯ್ಯತ್‌ನ ಇನ್ನೊಂದು ಪಾರ್ಶ್ವಕ್ಕೆ ಮಹತ್ವ ನೀಡುವುದಿಲ್ಲ ಎಂಬ ತಪ್ಪು ಗ್ರಹಿಕೆ ಉಂಟಾಗಬಹುದು. ಇಂತಹ ತಪ್ಪು ಗ್ರಹಿಕೆ ಉಂಟಾಗಬಾರದೆಂದು ನಾನು ಆಶಿಸುತ್ತೇನೆ. ಅಹ್ಮದಿಯ್ಯತಿನ ಒಂದು ಮಹತ್ವಪೂರ್ಣ ಕೊಡುಗೆ ಇದಾಗಿದೆ: ಅಹ್ಮದಿಯ್ಯತ್ ಪವಿತ್ರ ಖುರ್‌ಆನಿನ ಉಪದೇಶಗಳಿಗೆ ಸತ್ಯಪೂರ್ಣವಾದ ವ್ಯಾಖ್ಯಾನ ನೀಡಿ ಲೋಕದಲ್ಲಿ ಒಂದು ಪವಾಡ ಸದೃಶ ಕೆಲಸ ಮಾಡಿದೆ. ಅಹ್ಮದಿಯ್ಯತ್ ಇದನ್ನು ಮೊದಲು ಮಾಡಿದ್ದರೂ ಅನ್ಯರು ಅದರ ಬಗ್ಗೆ ಅನಂತರ ತಮ್ಮದೆಂದು ವಾದಿಸಬಹುದು. ಪವಿತ್ರ ಖುರ್‌ಆನಿನ ವಚನಗಳ ವ್ಯಾಖ್ಯಾನವನ್ನು ಕೃತಿರೂಪಕ್ಕಿಳಿಸುವ ಕೆಲಸ ಇನ್ನೂ ಪ್ರಾರಂಭವಾಗಿಲ್ಲವಾದರೂ ಪವಿತ್ರ ಖುರ್‌ಆನಿನ ಸೌಂದರ್ಯವನ್ನು ಲೋಕಕ್ಕೆ ಯಾರಾದರೂ ಬಹಿರಂಗಪಡಿಸಬೇಕಾಗಿತ್ತು. ಪವಿತ್ರ ಖುರ್‌ಆನಿನ ಅತ್ಯಂತ ಅದ್ಭುತ ಪವಾಡಗಳನ್ನು ಅಹ್ಮದಿಯ್ಯತ್ ಮುಖಾಂತರ ಲೋಕಕ್ಕೆ ಬಹಿರಂಗಪಡಿಸಿ ತೋರಿಸಲಾಗಿದೆ.

## ಇಸ್ಲಾಮಿನ ಅದ್ಭುತ ಪವಾಡ

ಇಸ್ಲಾಮಿನ ಯಾವುದೇ ಪವಾಡ ಇಷ್ಟರತನಕ ಪ್ರಕಟವಾಗಿರಲಿಲ್ಲ ಎಂದು ಹೇಳಲು ನಾನು ಉದ್ದೇಶಿಸುವುದಿಲ್ಲ. ನಾನು ಬಾಲಕನಾಗಿದ್ದಾಗ ನಾನು ಯಾವ ಹಿರಿಯರ ಪಾದಗಳ ಬಳಿ ಕುಳಿತುಕೊಂಡಿರುತ್ತಿದ್ದೆನೋ ಆಗ ನಾನು ಅವರಿಂದ ಪವಿತ್ರ ಖುರ್‌ಆನಿನ ಒಂದು ಮಹತ್ತಾದ ಪವಾಡದ ಕುರಿತು ಹೀಗೆ ಆಲಿಸಿದ್ದೆನು: ಪವಿತ್ರ ಖುರ್‌ಆನಿನ ಒಂದು ಅಕ್ಷರವಾಗಲಿ ಅದರ ಸ್ವರ ಗುರುತಾಗಲಿ ಎಂದೂ ನಾಶವಾಗಲಿಲ್ಲ ಅಥವಾ ಬದಲಾಯಿಸಲ್ಪಡಲಿಲ್ಲ. ನಿಶ್ಚಯವಾಗಿಯೂ ಇದೊಂದು ಮಹಾನ್ ಅದ್ಭುತ ಪವಾಡವಾಗಿದೆ. ಪವಿತ್ರ ಖುರ್‌ಆನಿನ ಪಾಠ ಸಂರಕ್ಷಣೆ ಎಷ್ಟು ಪರಿಪೂರ್ಣವಾಗಿದೆ ಎಂದರೆ ಅದರ ಬರಹದ ಪ್ರತಿಗಳೆಲ್ಲವೂ ಅದೃಶ್ಯವಾದರೂ ಪವಿತ್ರ ಖುರ್‌ಆನ್ ಮಿಲಿಯಾಂತರ ಮುಸ್ಲಿಮರ ಹೃದಯಗಳಲ್ಲಿ ಬಾಯಿಪಾಠ ಮೂಲಕ ಸಂರಕ್ಷಿಸಲ್ಪಟ್ಟಿರುವುದರಿಂದ ಅದು ಮುಂದೆ ಸಹ ಕಾಪಾಡಲ್ಪಡುವುದು. ಅದು ನಿಶ್ಚಯವಾಗಿಯೂ ಒಂದು ಮಹಾನ್ ಅದ್ಭುತವೇ ಆಗಿದೆ. ಆದರೆ ಅಹ್ಮದಿಯ್ಯತ್‌ಗೆ ಸಮೀಪಿಸುವಾಗ ಪವಿತ್ರ ಖುರ್‌ಆನ್ ಬಗ್ಗೆ ಗಳಿಸುವ ಜ್ಞಾನಕ್ಕೆ ಹೋಲಿಸಿದರೆ ಈ ಅದ್ಭುತವು ಬಹಳ ಚಿಕ್ಕದಾಗಿ ಕಾಣಿಸುವುದು. ಅಹ್ಮದಿಯ್ಯತ್‌ನ ಅಸ್ತಿಭಾರವು ಈ ಮಹತ್ವಪೂರ್ಣ ಅದ್ಭುತದ ಮೇಲೆ ಸ್ಥಾಪಿತವಾಗಿದೆ. ಅಹ್ಮದಿಯ್ಯತ್ ಮತ್ತು ಅದರ ಸ್ಥಾಪಕರು ಮಾತ್ರ ಲೋಕದ ಮುಂದೆ ಬಹಿರಂಗಪಡಿಸಿದರು ಮಾತ್ರವಲ್ಲ ಲೋಕಕ್ಕೆ ಹೀಗೆ ಪಂಥಾಹ್ವಾನ ನೀಡಿದರು: ವಿಶ್ವದಲ್ಲಿ ಎಂತೆಂತಹ ಮಹತ್ವಪೂರ್ಣ ಬದಲಾವಣೆಗಳು ಸಂಭವಿಸುವುದಾದರೂ, ಲೋಕದಲ್ಲಿರುವ ಜನರು ಎಂತಹ ಕ್ರಾಂತಿಕಾರಿ ಸನ್ನಿವೇಶಗಳಲ್ಲಿ ಜೀವಿಸಬೇಕಾಗಿ ಬಂದರೂ ಎಲ್ಲ ಕಾಲಘಟ್ಟಗಳಲ್ಲೂ ಪವಿತ್ರ ಖುರ್‌ಆನ್ ಮನುಷ್ಯರ ಶಾರೀರಿಕ, ನೈತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೋಸ್ಕರ ಆಯಾ ಕಾಲಘಟ್ಟಗಳಲ್ಲಿ ಪರಿಪೂರ್ಣ ಮಾರ್ಗದರ್ಶನಗಳನ್ನು ನೀಡುತ್ತಾ ಮುಂದುವರಿಯುವುದು. ಈ ವಾದವನ್ನು ಪ್ರಶ್ನಿಸುವವರಿಗೆ ತಕ್ಕುದಾದ ಪ್ರತ್ಯುತ್ತರವನ್ನು ನೀಡಲಾಗುವುದು. ಲೋಕದ ಪರಿಸ್ಥಿತಿಗಳು ಬದಲಾವಣೆ ಹೊಂದಿದ ಹಾಗೆ ಪರಮ ಕಾರುಣಿಕನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಿಂದಲೇ ಆಯಾ ಕಾಲಘಟ್ಟದ ಸಮಸ್ಯೆಗಳಿಗೆ ಪರಿಹಾರವನ್ನು ತನ್ನ ಅನುಗ್ರಹದಿಂದ ಅವತೀರ್ಣಗೊಳಿಸುತ್ತಾ ಹೋಗುವನು. ಲೋಕದ ದಾರ್ಶನಿಕರು ಮತ್ತು ಚಿಂತಕರು ಲೋಕದ ಮುಂದೆ ಇರಿಸುವ ಮಾರ್ಗದರ್ಶನಗಳು ಇಂತಹ ಪರಿಹಾರ

ನೀಡಲಾರವು. ಅಲ್ಲಾಹನ ವಚನಗಳ ವೈಶಿಷ್ಟ್ಯತೆಗಳು ಅನ್ಯರ ಮಾತುಗಳಿಗೆ ಇರಲಾರವು.

## ಪ್ರಥಮ ಮಹತ್ತಾದ ಸಂದೇಶ

ಲೋಕಕ್ಕೆ ಅಹ್ಮದಿಯ್ಯತಿನ ಪ್ರಥಮ ಮಹತ್ತಾದ ಸಂದೇಶ ಇದಾಗಿದೆ: ಲೋಕದ ವ್ಯವಸ್ಥೆ ಬದಲಾಗುತ್ತಾ ಹೋದರೂ, ನಮ್ಮ ಕಣ್ಣ ಮುಂದೆಯೇ ಹಳೆ ವ್ಯವಸ್ಥೆಯು ಹೊರಟು ಹೋಗಿ ಹೊಸ ವ್ಯವಸ್ಥೆ ಸ್ಥಾಪಿತವಾದರೂ ಹೊಸ ವ್ಯವಸ್ಥೆಯ ಸಮಸ್ಯೆಗಳಿಗೆ ಪವಿತ್ರ ಖುರ್‌ಆನಿನಲ್ಲಿ ಆವಶ್ಯಕ ಪರಿಹಾರಗಳು ಯಾವಾಗಲೂ ದೊರಕುತ್ತಾ ಇರುವುದು ಮತ್ತು ಅದರ ಬಗ್ಗೆ ದೇವನು ಆವಶ್ಯಕವಾದುದನ್ನು ಒದಗಿಸಿರುವನು. ಹೀಗೆ ಮಾಡದೆ ಇರುತ್ತಿದ್ದರೆ, ದೇವನು ಆಧ್ಯಾತ್ಮಿಕ ಸ್ಥಿರತೆಗೆ ಹಿಂದಿನ ಕಾಲದಲ್ಲಿ ವ್ಯವಸ್ಥೆ ಮಾಡಿದರೂ ಮುಂದಿನ ಕಾಲಗಳಿಗೆ ವ್ಯವಸ್ಥೆ ಮಾಡಲು ನಿರ್ಲಕ್ಷಿಸಿದನು ಎಂಬ ಆಕ್ಷೇಪ ಉಂಟಾಗಬಹುದಾಗಿತ್ತು. ಲೋಕದ ಪರಿಸ್ಥಿತಿ ಪರಿಪೂರ್ಣವಾಗಿ ಬದಲಾಗಿದ್ದು, ಪವಿತ್ರ ಖುರ್‌ಆನ್ ಅವತೀರ್ಣಗೊಂಡ ಕಾಲದ ಪರಿಸ್ಥಿತಿಗಿಂತ ಇಪ್ಪತ್ತನೇ ಶತಮಾನದ ಮತ್ತು ಮುಂದಿನ ಶತಮಾನಗಳ ಸ್ಥಿತಿ ಸಂಪೂರ್ಣವಾಗಿ ಬದಲಾಯಿಸಿರುವಾಗ ಪವಿತ್ರ ಖುರ್‌ಆನ್ ಅದು ಅವತೀರ್ಣವಾದ ಕಾಲದ ಮಾನವರ ಆವಶ್ಯಕತೆಗಳನ್ನು ಮಾತ್ರ ಪರಿಹರಿಸುವಂತಹದಾಗಿದ್ದರೆ ಪವಿತ್ರ ಖುರ್‌ಆನ್ ಅಂತಿಮ ಮತ್ತು ಪರಿಪೂರ್ಣ ಸಾರ್ವಕಾಲಿಕ ನಿಯಮ ಸಂಹಿತೆ ಎಂಬ ಅವರ ವಾದವು ಅಪ್ರತ್ಯಕ್ಷಕವಾಗುವುದು. ಅಹ್ಮದಿಯ್ಯತಿನ ಮೊದಲನೆಯ ಸಂದೇಶ ಇದಾಗಿದೆ: ವಿಶ್ವವು ಎಷ್ಟು ಬದಲಾವಣೆಗೊಂಡರೂ ದೇವನು ವಿಶ್ವದಲ್ಲಿ ಅದಕ್ಕೆ ಆವಶ್ಯಕವಾದ ಸಾಮಗ್ರಿಗಳನ್ನು ಒದಗಿಸಿ ಕೊಟ್ಟಿರುವ ಹಾಗೆ ದೇವನ ವಚನವಾದ ಪವಿತ್ರ ಖುರ್‌ಆನಿನಲ್ಲೂ ಆಯಾಕಾಲಘಟ್ಟದ ಸಮಸ್ಯೆಗಳಿಗಿರುವ ಪರಿಹಾರ ಮಾರ್ಗಗಳನ್ನು ಒದಗಿಸಿರುವನು. ದೇವನ ಕೃತಿಯಾದ ವಿಶ್ವವು ಮತ್ತು ದೇವನ ವಚನಗಳು ಒಂದೇ ಮೂಲದಿಂದ ಉದ್ಭವಿಸಿದವುಗಳಾಗಿವೆ. ಇದು ಇಂದು ನಾನು ನಿಮಗೆ ನೀಡುವ ಒಂದೇ ಒಂದು ಉದಾಹರಣೆಯಾಗಿದೆ. ಅಹ್ಮದಿಯ್ಯತಿನ ವಿರೋಧಿಗಳು ಏನು ಹೇಳುತ್ತಾ ಇದ್ದರೂ ಅಹ್ಮದಿಯ್ಯತಿನ ನಿಜವಾದ ಪರಿಚಯ ನಾನು ನಿಮಗೆ ಮಾಡಿಕೊಟ್ಟಿರುವೆನು.

## ಅಹ್ಮದಿಯ್ಯತ್ ಎಂದರೆ ಇಸ್ಲಾಮ್

ಅಹ್ಮದಿಯ್ಯತ್ ಎಂದರೆ ಇಸ್ಲಾಮ್. ಈ ಕಾಲಘಟ್ಟದ ಜನರಿಗೆ ಅಹ್ಮದಿಯ್ಯತಿನ ಸಂದೇಶವನ್ನು ಒಂದು ಶಬ್ದದಲ್ಲಿ ಹೇಳಬಹುದು. ಅದು ಸೌಹಾರ್ದ ಸ್ಥಾಪನೆಯಾಗಿದೆ. ಮಾನವನ ಜೀವಿತದಲ್ಲಿ ಭಿನ್ನಾಭಿಪ್ರಾಯ, ಆತಂಕ ಮತ್ತು ಅಶಾಂತಿಗೆ ಕಾರಣವಾಗುವ ವಿವಿಧ ಘಟಕಗಳ ಮಧ್ಯೆ ಹೊಂದಾಣಿಕೆಯೇ ಅಹ್ಮದಿಯ್ಯತಿನ ಸಂದೇಶವಾಗಿದೆ. ಇಸ್ಲಾಮಿನಲ್ಲಿ ಅಹ್ಮದಿಯ್ಯತಿಗಿರುವ ಸ್ಥಾನವನ್ನು ವಿವರಿಸಿದ ನಂತರ ನನ್ನ ಭಾಷಣದ ಮುಂದಿನ ಭಾಗದಲ್ಲಿ ನಾನು ಅಹ್ಮದಿಯ್ಯತ್ ಮತ್ತು ಇಸ್ಲಾಮ್ ಪದಗಳನ್ನು ಬಳಸುವಾಗ ನಾನು ಒಂದೇ ವಿಷಯದ ಬಗ್ಗೆ ಮಾತನಾಡುತ್ತೇನೆಂದು ತಿಳಿಯಬೇಕು.

## ಸೌಹಾರ್ದ ಸಂದೇಶ

ನಾನು ಇದರ ಮೊದಲು ಹೇಳಿದ ಹಾಗೆ ಅಹ್ಮದಿಯ್ಯತ್ ಎಂದರೆ ಸೌಹಾರ್ದ. ಮಾನವ ಜೀವಿತದ ವಿವಿಧ ಘಟಕಗಳಲ್ಲಿ ಸಂಘರ್ಷ ಉಂಟಾಗುವಾಗ ಇದನ್ನು ಬಳಸುವಾಗ ಇದು ಎಷ್ಟು ವ್ಯಾಪಕವಾಗಿ ಬಳಸಬಹುದೆಂದು ನೀವು ಕಾಣಬಹುದು. ಅವೆಲ್ಲವುಗಳ ಬಗ್ಗೆ ಸವಿಸ್ತಾರವಾಗಿ ಈಗ ಪ್ರತಿಪಾದಿಸುವುದು ನನಗೆ ಸಾಧ್ಯವಿಲ್ಲ. ನಾನು ಕೆಲವು ಘಟಕಗಳ ಬಗ್ಗೆ ವಿವರಿಸುವೆನು ಮತ್ತು ಅಹ್ಮದಿಯ್ಯತ್ ಅವುಗಳ ಬಗ್ಗೆ ಹೊಂದಿರುವ ನಿಲುವನ್ನು ಪ್ರಸ್ತಾಪಿಸುವೆನು. ನಾನು ಹೇಳುವುದನ್ನು ನೀವು ಮನವರಿಕೆ ಮಾಡುವಿರಾದರೆ ನೀವು ಈ ಸಭಾಭವನದಿಂದ ಹೊರಗೆ ಹೋಗುವಾಗ ನಿಮ್ಮ ಮತ್ತು ನಮ್ಮ ಮಧ್ಯೆ ಕೆಲವು ಅಭಿಪ್ರಾಯ ವ್ಯತ್ಯಾಸಗಳಿರಬಹುದಾದರೂ ನೀವು ಇಸ್ಲಾಮ್ ಧರ್ಮದ ಬಗ್ಗೆ ಅಭಿಮಾನವುಳ್ಳವರಾಗುವಿರಿ. ಅದಲ್ಲದೆ ನೀವು ವಿವಿಧ ಸಮಸ್ಯೆಗಳ ಬಗ್ಗೆ ಇಸ್ಲಾಮ್ ನೀಡುವ ಪರಿಹಾರ ಮಾರ್ಗವೇನೆಂಬುದರ ಬಗ್ಗೆ ತಿಳಿಯಲು ಹೆಚ್ಚು ಆಸಕ್ತಿ ಹೊಂದಿದವರಾಗುವಿರಿ. ನಾನು ಇನ್ನು ಮುಂದೆ ಜೀವನದ ಕೆಲವು ಘಟಕಗಳ ಬಗ್ಗೆ ಪ್ರಸ್ತಾಪಿಸುವೆನು.

ಮೊದಲನೆಯದಾಗಿ, ಅಹ್ಮದಿಯ್ಯತ್ ಮನುಷ್ಯನ ಮತ್ತು ಅವನ ಸೃಷ್ಟಿಕರ್ತನ ಮಧ್ಯೆ ಸೌಹಾರ್ದ ಸಂಬಂಧ ಸ್ಥಾಪಿಸಲು ಪ್ರಯತ್ನಿಸುತ್ತದೆ. ಆಧುನಿಕ ಕಾಲದ ಸ್ಥಿತಿ ಹೇಗಿದೆ ಎಂದರೆ ಸಂಪತ್ತು ಗಳಿಸುವುದರೊಂದಿಗೆ ಧರ್ಮದ ಬಗ್ಗೆ ಅನಾಸಕ್ತಿ ವರ್ಧಿಸುತ್ತಾ ಹೋಗುತ್ತದೆ. ಆದರೆ ಇದಕ್ಕೆ ಕಾರಣವೇನು? ಶಾಲೆಗಳಲ್ಲೂ ಕಾಲೇಜುಗಳಲ್ಲೂ ಜನಸಾಮಾನ್ಯರು ಓದುವ ಸಾಹಿತ್ಯಗಳಲ್ಲೂ ಹೀಗೆ ಕಲಿಸಲಾಗುತ್ತಿದೆ: ವೈಚಾರಿಕವಾಗಿ ಅಂಗೀಕರಿಸಲು ಸಾಧ್ಯವಾಗದ ವಿಶ್ವಾಸಗಳನ್ನು ಹೊಂದಬಾರದು. ಆದರೆ ಧರ್ಮದ ಕ್ಷೇತ್ರದಲ್ಲಿ ತನ್ನ ಬುದ್ಧಿಗೆ ಹಾನಿ ಉಂಟುಮಾಡುವ ಅಥವಾ ಮನುಷ್ಯನು ಹಾಗೆ ಭಾವಿಸುವ ವಿಶ್ವಾಸಗಳನ್ನು ಅಧಿಕೃತವಾಗಿ ಅಂಗೀಕರಿಸಲು ಹೇಳಲಾಗುತ್ತಿದೆ. ಇದು ಅವನ ಧರ್ಮದ ಭಾಗವಾದುದರಿಂದ ಅದನ್ನು ನಂಬಲೇಬೇಕು. ಅವನ ಬುದ್ಧಿ ಅದನ್ನು ಒಪ್ಪದಿದ್ದರೂ ಹೀಗೆ ಮಾಡಲೇಬೇಕು. ಮನುಷ್ಯನ ಮನಸ್ಸಾಕ್ಷಿ ಯಾವುದನ್ನೂ ಕೇವಲ ಅಧಿಕೃತ ವಿಶ್ವಾಸವಾದ ಕಾರಣದಿಂದ ಒಪ್ಪಲು ನಿರಾಕರಿಸುತ್ತದೆ. ಅವನ ಬುದ್ಧಿ ಸಾಕ್ಷ್ಯಾಧಾರಗಳನ್ನು ಆವಶ್ಯಪಡುತ್ತದೆ. ತಾನು ಯಾವುದನ್ನು ನಂಬಬೇಕೆಂದು ಆವಶ್ಯಪಡಲಾಗುತ್ತಿದೆಯೋ ಅದರ ಬಗ್ಗೆ ತನ್ನ ಬುದ್ಧಿ ಸಹಮತ ಹೊಂದಬೇಕೆಂದು ಮನುಷ್ಯನು ಬಯಸುತ್ತಾನೆ. ಅಧಿಕೃತ ವಿಶ್ವಾಸವು ವೈಚಾರಿಕತೆಗೆ ಅನುಯೋಜ್ಯವಾಗಿದ್ದರೆ ಮನುಷ್ಯನು ಸಮಾಧಾನ ಹೊಂದುವನು. ಆದರೆ ಯಾವುದೇ ವಿಶ್ವಾಸಾದರ್ಶವು ಸತ್ಯಾಧಿಷ್ಠಿತವಾಗಿರದಿದ್ದರೆ ಅಥವಾ ಅವನ ಬುದ್ಧಿ ಅದು ಹಾನಿಕರವೆಂದು ಭಾವಿಸುವುದಾದರೆ ಅಂತಹ ವಿಶ್ವಾಸವು ಅವನಿಗೆ ಕೇಡುಂಟು ಮಾಡುವುದು ಖಂಡಿತವಾಗಿದೆ. ಒಂದು ನಿರ್ದಿಷ್ಟ ವಿಶ್ವಾಸಾದರ್ಶವನ್ನು ಅಂಗೀಕರಿಸದಿದ್ದರೆ ಒಬ್ಬನು ಆ ನಿರ್ದಿಷ್ಟಾದರ್ಶವನ್ನು ಪ್ರಸ್ತಾಪಿಸುವ ಧರ್ಮದ ಅನುಯಾಯಿಯಾಗಿ ಗಣಿಸಲ್ಪಡಲಾರನೆಂದು ಹೇಳುವಾಗ

ಅನೇಕ ಜನರು ಕಪಟ ವಿಶ್ವಾಸಿಗಳಾಗಿ ಮುಂದುವರಿಯುವರು. ಅವರು ಒಂದು ನಿರ್ದಿಷ್ಟ ಧರ್ಮದ ಹೆಸರನ್ನು ಹೊಂದಿದವರಾಗಿದ್ದರೂ ಅವರು ಆ ಧರ್ಮದ ನಂಬಿಕೆಗಳಲ್ಲಿ ವಿಶ್ವಾಸ ಹೊಂದದವರೂ ಅದು ಆವಶ್ಯಪಡುವ ತ್ಯಾಗಬಲಿದಾನಗಳನ್ನು ಮಾಡಲು ಸಿದ್ಧರಾಗದವರೂ ಆಗಿರುತ್ತಾರೆ. ನೀವು ಸತ್ಯವಾಗಿಯೂ ಒಂದು ವಿಶ್ವಾಸಾದರ್ಶವನ್ನು ನಂಬುವುದಿಲ್ಲವಾದರೆ ನೀವು ಅದಕ್ಕೋಸ್ಕರ ತ್ಯಾಗ ಸನ್ನದ್ಧರೂ ಆಗಲಾರಿರಿ. ಈ ಕಾರಣದಿಂದ ವೈರುಧ್ಯ ತಲೆದೋರುತ್ತದೆ.

ಇಸ್ಲಾಮಿಗೆ ಅಹ್ಮದಿಯ್ಯತ್ ನೀಡುವ ವ್ಯಾಖ್ಯಾನ ಪ್ರಕಾರ ಅದು ಪ್ರಥಮವಾಗಿ ಧರ್ಮಕ್ಕೆ ಸಂಬಂಧಿಸಿ ಮನುಷ್ಯ ಮತ್ತು ದೇವನ ಮಧ್ಯೆ ಸೌಹಾರ್ದ ಸಂಬಂಧವೇರ್ಪಡಿಸುತ್ತದೆ. ಪವಿತ್ರ ಖುರ್‌ಆನಿನ ಅದ್ಭುತ ಪವಾಡಗಳ ಬಗ್ಗೆ ಅಹ್ಮದಿಯ್ಯತ್ ಮಾತ್ರ ಒತ್ತಿ ಹೇಳಿದುದರ ಬಗ್ಗೆ ಇದರ ಮೊದಲೇ ಪ್ರಸ್ತಾಪಿಸಲಾಗಿದೆ. ನಾವು ಹೀಗೆ ನಂಬುತ್ತೇವೆ: ಪವಿತ್ರ ಖುರ್‌ಆನ್ ಒಂದು ಕೆಲಸ ಮಾಡಬೇಕೆಂದು ಆಜ್ಞೆ ನೀಡುವಾಗಲೂ ಇನ್ನೊಂದು ಕೆಲಸ ಮಾಡಬಾರದೆಂದು ಆಜ್ಞೆ ನೀಡುವಾಗಲೂ ಅವುಗಳಿಗೆ ಕಾರಣವೇನೆಂದೂ ಅವುಗಳಿಂದ ದೊರಕುವ ಪ್ರಯೋಜನವೇನೆಂದೂ ಯಾವಾಗಲೂ ಸೂಚಿಸುತ್ತದೆ. ಅದು ಕೇವಲ ಆಧಿಕಾರಿಕವಾದ ಆಜ್ಞೆ ನೀಡಿ ನಂಬಬೇಕೆಂದು ಹೇಳುವುದಿಲ್ಲ. ಅದು ಬಲಾತ್ಕಾರದಿಂದ ನಂಬಿಕೆ ಹೊಂದಲು ಹೇಳುವುದಿಲ್ಲ. ಅದು ತನ್ನ ಅನುಯಾಯಿಗಳು ಸ್ವಂತ ಇಷ್ಟಕ್ಕೆದುರಾಗಿ ನಂಬಲು ಹೇಳುವುದಿಲ್ಲ. ಅದು ತನ್ನ ಅನುಯಾಯಿಗಳು ಸಂತೋಷದಿಂದ ವಿಧೇಯರಾಗಲು ಆಜ್ಞಾಪಿಸುತ್ತದೆ. ಏಕೆಂದರೆ ವಿವೇಕ ಮತ್ತು ವಿಶ್ವಾಸ ಪರಸ್ಪರ ಸಹಕರಿಸುತ್ತವೆ. ನಾನು ಹೇಳುವುದು ಒಂದು ವಾದವಾಗಿದೆ. ಇದಕ್ಕೆ ಸಾಕ್ಷ್ಯಾಧಾರಗಳು ಬೇಕಾಗಿವೆ. ಆದರೆ ನಾನು ಪ್ರತಿಯೊಂದು ವಾದದ ಬಗ್ಗೆ ಸಾಕ್ಷ್ಯಾಧಾರಗಳನ್ನು ನೀಡಲು ಪ್ರಾರಂಭಿಸಿ ನಾನು ನಿಮ್ಮನ್ನು ಅನೇಕ ಸಾಯಂಕಾಲಗಳಲ್ಲಿ ಅಭಿಮುಖೀಕರಿಸಬೇಕಾಗಬಹುದೆಂದು ಭಾವಿಸುತ್ತೇನೆ. ಆದರೆ ಯಾರಿಗಾದರೂ ನಾನು ಹೇಳಿದ ವಿಷಯದ ಬಗ್ಗೆ ಹೆಚ್ಚಿನ ಮಾಹಿತಿಯ ಆವಶ್ಯವಿದ್ದರೆ ನನ್ನೊಂದಿಗೆ ಕೇಳಬಹುದು ಅಥವಾ ನಮ್ಮ ಜಮಾಅತಿನ ಸದಸ್ಯರೊಡನೆ ವಿಚಾರಿಸಬಹುದು. ಅಂತಹ ಜನರಿಗೆ ಆವಶ್ಯಕವಾದ ಸಾಕ್ಷ್ಯಾಧಾರಗಳನ್ನು ನೀಡಲಾಗುವುದು; ಸಾಹಿತ್ಯಗಳನ್ನು ನೀಡಲಾಗುವುದು. ಜನರು ಏಕಾಂತವಾಗಿ ಕುಳಿತುಕೊಂಡು ನಮ್ಮ ವಾದದ ಸತ್ಯತೆಯ ಬಗ್ಗೆ ಮನವರಿಕೆ ಮಾಡಿಕೊಳ್ಳಬಹುದು.

## ಒಂದೇ ಒಂದು ಉದಾಹರಣೆ

ಮನುಷ್ಯ ಮತ್ತು ದೇವನ ಮಧ್ಯೆ ಸಂಬಂಧ ಸ್ಥಾಪನೆಯ ಆವಶ್ಯಕತೆಯ ಒಂದೇ ಒಂದು ಉದಾಹರಣೆ ನಿಮ್ಮ ಮುಂದೆ ಇರಿಸಿದ್ದೇನೆ. ಈ ಉದಾಹರಣೆಯಲ್ಲಿ ನಾನು ಪ್ರತಿಪಾದಿಸಿದುದು ಸತ್ಯವಾಗಿದ್ದರೆ ಇದು ಎಂತಹ ಸಂದೇಶವಾಗುವುದೆಂದರೆ ಸತ್ಯವಾಗಿಯೂ ಪ್ರಾಮಾಣಿಕವಾಗಿಯೂ ದೇವನಲ್ಲಿ ವಿಶ್ವಾಸವನ್ನು ಹೊಂದಲು ಬಯಸುವವರು ಇದನ್ನು ದೇವನೊಂದಿಗೆ ತಮ್ಮ ಸಂಬಂಧದಲ್ಲಿ ಕಾರ್ಯಗತಗೊಳಿಸಬಹುದು. ಆದರೆ ಅವರ ವಿಶ್ವಾಸ ಕೇವಲ ಕೆಲವು ಗೊಡ್ಡು ಸಂಪ್ರದಾಯಗಳಿಗೆ, ಕಟ್ಟಳೆಗಳಿಗೆ ಮತ್ತು ಆಚಾರಗಳಿಗೆ ಸೀಮಿತವಾಗಿದ್ದರೆ ಅವರ ಬುದ್ಧಿಯು ಅದನ್ನು ಅಂಗೀಕರಿಸಲಾರದು.

## ವಿವಿಧ ವರ್ಗಗಳ ಜನರ ಮಧ್ಯೆ ಸೌಹಾರ್ದ ಸಂಬಂಧ

ಮಾನವರ ವಿವಿಧ ವರ್ಗಗಳ ಮಧ್ಯೆ ಸೌಹಾರ್ದ ಸಂಬಂಧ ಸ್ಥಾಪಿಸಲು ಅಹ್ಮದಿಯ್ಯತ್ ಬಯಸುತ್ತದೆ. ಮಾನವರು ವಿವಿಧ ಜನಾಂಗಗಳಾಗಿಯೂ ವಿವಿಧ ಧರ್ಮಗಳಿಗೆ ಸೇರಿದವರಾಗಿಯೂ ವಿಭಜಿಸಲ್ಪಟ್ಟಿರುವರೆಂದು ನಿಮಗೆ ತಿಳಿದಿದೆ. ಹಿಂದೂಸ್ತಾನದಲ್ಲಿ ವಿವಿಧ ಧರ್ಮಗಳ ಜನರ ಮಧ್ಯೆ ದುರದೃಷ್ಟಕರವಾಗಿ ಭಾವನೆಗಳನ್ನು ಉದ್ರೇಕಿಸಲಾಗುತ್ತಿದೆ. ವಿವಿಧ ಧರ್ಮಗಳ ಅನುಯಾಯಿಗಳ ಮಧ್ಯೆ ಭಿನ್ನಾಭಿಪ್ರಾಯಗಳು ಇವೆ. ಅಹ್ಮದಿಯ್ಯತ್ ಅಥವಾ ಇಸ್ಲಾಮ್ ಈ ಜನರ ಮಧ್ಯೆ ಸೌಹಾರ್ದ ಸ್ಥಾಪಿಸಲು ಬಯಸುತ್ತದೆ. ನಾನು ಅಥವಾ ನೀವು "ನನ್ನ ಧರ್ಮ ತತ್ವಗಳು ವೈಚಾರಿಕವಾಗಿವೆ. ನಾನು ಅವುಗಳನ್ನು ನಂಬುತ್ತೇನೆ" ಎಂದು ಹೇಳಿ ಜನರ ಮಧ್ಯೆ ಸೌಹಾರ್ದ ಸಂಬಂಧ ಸ್ಥಾಪಿಸಲು ಪ್ರಯತ್ನಿಸುವುದಾದರೆ ಅದು ವಿಫಲವಾಗುವುದು. ವಿವಿಧ ಧರ್ಮಗಳ ಜನರು ಬೇರೆ ಬೇರೆ ಅಭಿಪ್ರಾಯಗಳನ್ನು, ವಿಶ್ವಾಸಗಳನ್ನು ಹೊಂದಿದ್ದರೂ ಆ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಿದರೆ ಸೌಹಾರ್ದ ಸ್ಥಾಪಿಸಲು ಸಾಧ್ಯವಾಗುವುದು ಎಂದು ಹೇಳುವುದು ಸರಿಯಲ್ಲ. ವಿವಿಧ ಅಭಿಪ್ರಾಯಗಳನ್ನೂ ವಿಶ್ವಾಸಗಳನ್ನೂ ಹೊಂದಿದವರು ಒಂದೇ ಪ್ರದೇಶದಲ್ಲಿ ಒಟ್ಟಿಗೆ ಜೀವಿಸಲೇಬೇಕಾಗಿದೆ. ಅಹ್ಮದಿಯ್ಯತ್ ಪ್ರತಿಪಾದಿಸುವುದೇನೆಂದರೆ ಜನರಲ್ಲಿ ಅಭಿಪ್ರಾಯ ವ್ಯತ್ಯಾಸಗಳು ಮುಂದುವರಿಯುವುವು. ಭಿನ್ನಾಭಿಪ್ರಾಯಗಳನ್ನು ಅದುಮಿ ಹಾಕಿ ಸೌಹಾರ್ದ ಸ್ಥಾಪನೆ ಮಾಡಲು ಸಾಧ್ಯವಿಲ್ಲ. ಇದರ ಬಗ್ಗೆ ಎರಡು ರೀತಿಯಲ್ಲಿ ಪ್ರಯತ್ನಿಸಬೇಕು. ಒಂದನೆಯದಾಗಿ, ಭಿನ್ನಾಭಿಪ್ರಾಯಗಳನ್ನು ಗುರುತಿಸಿಕೊಂಡು ಅವುಗಳಿದ್ದರೂ ಹೇಗೆ ಸೌಹಾರ್ದದಿಂದ ಜೀವಿಸುವುದೆಂದು ಕಂಡುಕೊಳ್ಳಬೇಕು. ಎರಡನೆಯದಾಗಿ, ಈ ಭಿನ್ನಾಭಿಪ್ರಾಯಗಳನ್ನೆಲ್ಲ ಪರಿಹರಿಸಿ ಅಂತಿಮವಾಗಿ ಪೂರ್ಣವಾಗಿ ಏಕಾಭಿಪ್ರಾಯ ಹೊಂದುವ ಬಗ್ಗೆ ಪ್ರಯತ್ನಿಸಬೇಕು. ಭಿನ್ನಾಭಿಪ್ರಾಯಗಳನ್ನು ಅದುಮಿ ಹಾಕಿ ಸೌಹಾರ್ದ ಸ್ಥಾಪನೆಗೆ ಪ್ರಯತ್ನಿಸುವುದಾದರೆ ಅದು ಮುಂದಿನ ಕಠಿಣ ಭಿನ್ನಾಭಿಪ್ರಾಯಗಳಿಗೆ ಅಸ್ತಿಭಾರ ಹಾಕುವುದು.

ಆದುದರಿಂದ ಪ್ರಥಮ ತತ್ವವೇನೆಂದರೆ ಅಭಿಪ್ರಾಯ ವ್ಯತ್ಯಾಸಗಳನ್ನು ಗುರುತಿಸಬೇಕು ಮತ್ತು ಅದನ್ನು ಸಹಿಸಬೇಕು. ಅಭಿಪ್ರಾಯ ವ್ಯತ್ಯಾಸಗಳನ್ನು ಈ ಕ್ಷೇತ್ರದಲ್ಲಿ ಮಾತ್ರವಲ್ಲ ಇತರ ಎಲ್ಲ ಕ್ಷೇತ್ರಗಳಲ್ಲೂ ಅಂಗೀಕರಿಸದಿದ್ದರೆ ಬೌದ್ಧಿಕ ಎಲ್ಲ ಅಭಿವೃದ್ಧಿಗಳು ಕೊನೆಗೊಳ್ಳುವುವು. ನನ್ನ ಭಾಷಣದ ಪರಿಣಾಮವಾಗಿ ಯಾರಾದರೂ ಇದನ್ನು ಮನವರಿಕೆ ಮಾಡಿಕೊಂಡರೆ ಈ ವಿಷಯದ ಬಗ್ಗೆ ಆ ವ್ಯಕ್ತಿಯ ಆಸಕ್ತಿ ಪುನಶ್ಚೇತನಗೊಳ್ಳುವುದು. ಈ ಸಂಜೆ ನಾನು

ಮಾಡುವ ಭಾಷಣದ ಉದ್ದೇಶ ಭಿನ್ನಾಭಿಪ್ರಾಯಗಳು ಇವೆ ಎನ್ನುವುದನ್ನು ಅಂಗೀಕರಿಸುವುದಾಗಿದೆ. ಭೌತಿಕ ವಿಜ್ಞಾನದಲ್ಲಿ ಉಂಟಾದ ಅಭಿವೃದ್ಧಿಗೆ ಕಾರಣ ಭಿನ್ನಾಭಿಪ್ರಾಯಗಳಾಗಿವೆ. ಹಿಂದಿನ ಕಾಲದಲ್ಲಿ ಲೋಕವು ಅನೇಕ ವೈಜ್ಞಾನಿಕ ಸಂಶೋಧಕರನ್ನು, ಅವರು ಅವರಿಗಿಂತ ಹಿಂದಿನ ಜನರೊಂದಿಗೆ ಭಿನ್ನಾಭಿಪ್ರಾಯ ಹೊಂದಿರುವುದಕ್ಕಾಗಿ ಹಿಂಸಾಚಾರಕ್ಕೆ ಗುರಿಪಡಿಸಿದೆ. ಅವರ ಭಿನ್ನಾಭಿಪ್ರಾಯಗಳನ್ನು ಪರಿಪೂರ್ಣವಾಗಿ ಅದುಮಿ ಹಾಕಿರುತ್ತಿದ್ದರೆ ಮತ್ತು ಭಿನ್ನಾಭಿಪ್ರಾಯ ಹೊಂದಲು ಯಾರನ್ನೂ ಅನುಮತಿಸದೆ ಇರುತ್ತಿದ್ದರೆ ವೈಜ್ಞಾನಿಕ ಅಭಿವೃದ್ಧಿ ಉಂಟಾಗುತ್ತಿರಲಿಲ್ಲ. ಆದುದರಿಂದ ಭಿನ್ನಾಭಿಪ್ರಾಯಗಳನ್ನು ಅದುಮಿ ಹಾಕದೆ ಅವುಗಳನ್ನು ಅಂಗೀಕರಿಸಿ ಮುಂದುವರಿಯುವುದರಿಂದ ಧಾರ್ಮಿಕ ಸೌಹಾರ್ದವು ಸ್ಥಾಪಿತವಾಗುವುದು. ಅಹ್ಮದಿಯಾ ಸಂಘಟನೆಯ ಸ್ಥಾಪಕರು ಈ ತತ್ವವನ್ನು ಪ್ರತಿಪಾದಿಸಿದರು. ಅಭಿಪ್ರಾಯ ವ್ಯತ್ಯಾಸಗಳನ್ನು ಗುರುತಿಸಿ ಅಂಗೀಕರಿಸಬೇಕು. ಈ ಅಭಿಪ್ರಾಯ ವ್ಯತ್ಯಾಸಗಳು ನಿವಾರಣೆ ಯಾಗಲು ಪ್ರಯತ್ನ ಮಾಡುತ್ತಾ ಇರಬೇಕು. ಆದರೆ ಮಧ್ಯ ಕಾಲದಲ್ಲಿ ಅವರ ಬಗ್ಗೆ ಸಹನೆಯಿಂದ ವರ್ತಿಸಬೇಕು. ಇದು ಪರಸ್ಪರ ಸೌಹಾರ್ದಕ್ಕೆ ಸಹಕಾರಿಯಾಗುವುದು. 'ಎ' ಎಂಬವನ ವಿಶ್ವಾಸ 'ಬಿ' ಎಂಬವನ ವಿಶ್ವಾಸಕ್ಕೆ ಭಿನ್ನವಾಗಿದ್ದರೆ ಕಿವಿ ಹಿಂಡಿ ಅದನ್ನು ಸರಿಪಡಿಸಲು ಪ್ರಯತ್ನಿಸಬಾರದು. ಇದು ಹೇಳುವುದಕ್ಕೆ ಸುಲಭವಾಗಿದೆ. ಆದರೆ ಇದನ್ನು ಕಾರ್ಯಗತಗೊಳಿಸುವುದು ದುರದೃಷ್ಟಕರವಾಗಿ ಈ ದೇಶದಲ್ಲಿ ಕಷ್ಟಕರವಾಗಿದೆ. ವಿವಿಧ ವಿಶ್ವಾಸಗಳನ್ನು ಹೊಂದಿದ ಜನರು ಒಂದೇ ಪ್ರದೇಶದಲ್ಲಿ ಸಹನೆಯಿಂದ ಜೀವಿಸುವುದನ್ನು ಇಲ್ಲಿ ಕಾಣುವುದು ಅಸಾಧ್ಯವಾಗಿದೆ.

## ಸಹನೆಯ ಮನೋಭಾವ

ಸಹನೆಯ ಮನೋಭಾವವನ್ನು ಜನರಲ್ಲಿ ಬೆಳೆಸಲು ಅಹ್ಮದಿಯಾ ಸಂಘಟನೆಯ ಸ್ಥಾಪಕರು ನೀಡಿದ ಒಂದು ಸಲಹೆಯನ್ನು ಅಹ್ಮದಿಯರು ಅನುಸರಿಸಿ ಕಾರ್ಯನಿರತರಾಗುತ್ತಿದ್ದಾರೆ ಮತ್ತು ವಿವಿಧ ಧರ್ಮಗಳ ಜನರು ವಿಭಿನ್ನ ವಿಶ್ವಾಸಗಳನ್ನು ಹೊಂದಿದ್ದರೂ ಇವರ ಬಗ್ಗೆ ಬಹಳ ಪ್ರಯತ್ನ ನಡೆಸುತ್ತಾ ಇದ್ದಾರೆ. ಅಹ್ಮದಿಯಾ ಸಂಘಟನೆಯ ಸ್ಥಾಪಕರು ನೀಡಿದ ಸಲಹೆ ಇದಾಗಿದೆ: ಎಲ್ಲ ಧರ್ಮಗಳ ಅನುಯಾಯಿಗಳು ಒಂದು ವೇದಿಕೆಯಲ್ಲಿ ಜಮಾಯಿಸಿ ಮನುಷ್ಯರ ಲೌಕಿಕ, ನೈತಿಕ, ಆಧ್ಯಾತ್ಮಿಕ ಸಮಸ್ಯೆಗಳನ್ನು ಚರ್ಚಿಸಿ ಪ್ರತಿಯೊಂದು ಧರ್ಮದ ಪ್ರತಿನಿಧಿ ತನ್ನ ಧರ್ಮದ ಉಪದೇಶಗಳನ್ನು ಸಾರ್ವಜನಿಕ ಸಭೆಯಲ್ಲಿ ವಿವರಿಸಬೇಕು. ಇದರಿಂದ ಲಭಿಸುವ ಲಾಭವೇನೆಂದರೆ, ಎಲ್ಲ ವರ್ಗಗಳಿಗೆ ಸೇರಿದ ಜನರು ಕೆಲವು ವಿಷಯಗಳ ಬಗ್ಗೆ ಸಮಾನ ವಿಶ್ವಾಸಗಳನ್ನು ಹೊಂದಿದ್ದಾರೆಂದು ಮನವರಿಕೆ ಆಗುವುದು. ಇದರಿಂದ ಜನರ ಮಧ್ಯೆ ಸಹನೆಯ ಮನೋಭಾವ ವರ್ಧಿಸುವುದು. ಇನ್ನೊಂದು ವಿಷಯವೇನೆಂದರೆ, ನಾನು ನಂಬುವಂತಹ ವಿಷಯಗಳನ್ನು ನಂಬದಂತಹ ಅನ್ಯ ಧರ್ಮೀಯನು ನನ್ನೊಂದಿಗೆ ಶತ್ರುತ್ವವನ್ನು ಹೊಂದಿದ್ದಾನೆ; ಅವನು ನನ್ನ ಧರ್ಮವನ್ನೂ ಸಮುದಾಯವನ್ನೂ ನಾಶಮಾಡಲು ಬಯಸುತ್ತಾನೆ ಎಂದು ನಾನು ಭಾವಿಸಬಾರದು. ವಿವಿಧ ಧರ್ಮಗಳಿಗೆ ಸೇರಿದ ನಾವು ಜಮಾಯಿಸುವಾಗ ಒಬ್ಬನು ತನ್ನ ಧರ್ಮದ ವಿಶ್ವಾಸಗಳನ್ನು ತನ್ನದೇ ಆದ ಕಾರಣಗಳನ್ನು ನೀಡಿ ಬೆಂಬಲಿಸುವಾಗ ನಾನು ಅವನ ಮಾತುಗಳನ್ನು ಆಲಿಸಬೇಕು ಮತ್ತು ಅವನ ಅಭಿಪ್ರಾಯವನ್ನು ಮನವರಿಕೆ ಮಾಡಲು ಪ್ರಯತ್ನ ಮಾಡಬೇಕು. ಹೀಗೆ ಮಾಡುವುದರಿಂದ ಸಹನೆಯ ಮನೋಭಾವ ವರ್ಧಿಸುವುದು. ಅಲ್ಲದೆ ಅನೇಕ ಸತ್ಯಗಳನ್ನು ಎಲ್ಲರೂ ಸಮಾನವಾಗಿ ಹೊಂದಿದ್ದಾರೆಂದು ನಮಗೆ ತಿಳಿಯುವುದು. ಆದುದರಿಂದ ಅಭಿಪ್ರಾಯ ವ್ಯತ್ಯಾಸಗಳನ್ನು ವರ್ಧಿಸುವಂತೆ ಮಾಡಲು ಪ್ರಯತ್ನಿಸಬಾರದು. ಪರಸ್ಪರ ಸಹನೆ ಸಹಕಾರ ಮನೋಭಾವದಿಂದ ವರ್ತಿಸಲು ಪ್ರಯತ್ನಿಸಬೇಕು.

## ಪ್ರಾಯೋಗಿಕವಾಗಿ ನಡೆಸಿದ ಕೆಲಸಗಳು

ಮೇಲೆ ವಿವರಿಸಿದಂತಹ ಸಹಕಾರ ಮನೋಭಾವವನ್ನು ವಿವಿಧ ಧರ್ಮಗಳ ಜನರು ಹೊಂದಿ ಸಭೆಗಳನ್ನು ಜರಗಿಸಿದ್ದಾರೆ. ಅಹ್ಮದಿಯಾ ಜಮಾಅತಿನ ಸ್ಥಾಪಕರ ಜೀವಿತ ಕಾಲದಲ್ಲಿ 1896ರಲ್ಲಿ ಇಂತಹ ಒಂದು ಸರ್ವಧರ್ಮ ಸಮ್ಮೇಳನ ಜರಗಿತು. ಪ್ರತಿಯೊಂದು ಧರ್ಮದ ಪ್ರತಿನಿಧಿ ಐದು ವಿಷಯಗಳ ಬಗ್ಗೆ ಭಾಷಣ ನೀಡಲು ಆಹ್ವಾನಿಸಲಾಯಿತು. ಈ ಸಭೆ ನಾನು ಜನಿಸುವ ನಾಲ್ಕು 4 ವರ್ಷಗಳ ಮೊದಲೇ ಜರಗಿದ್ದರೂ ನನಗೆ ಲಭಿಸಿದ ವರದಿಯ ಪ್ರಕಾರ ಅದು ಅತ್ಯಂತ ಸೌಹಾರ್ದಪೂರ್ಣವೂ ಶಾಂತಮಯವೂ ಆಗಿತ್ತು. ಇಂತಹ ಸಭೆಗಳನ್ನು ಲೋಕದ ವಿವಿಧ ಪ್ರದೇಶಗಳಲ್ಲೂ ನಡೆಸಲಾಯಿತು. ಇಪ್ಪತ್ತಾರು ವರ್ಷಗಳ ಹಿಂದೆ ಅಮೇರಿಕದಲ್ಲಿ ವರ್ಲ್ಡ್ ಪಾರ್ಲಿಮೆಂಟ್ ಆಫ್ ರಿಲೀಜನ್ಸ್ ಎಂಬ ಸರ್ವಧರ್ಮ ಸಮ್ಮೇಳನವನ್ನು ನಡೆಸಲಾಯಿತು. ಅದರಲ್ಲಿ ವಿವಿಧ ಧರ್ಮಗಳ ವಿದ್ವಾಂಸರನ್ನು ತಮ್ಮ ಧರ್ಮಗಳ ಬಗ್ಗೆ ಭಾಷಣ ಮಾಡಲು ಆಮಂತ್ರಿಸಲಾಗಿತ್ತು. ಅನಂತರ 1924ರಲ್ಲಿ ಬ್ರಿಟಿಷ್ ಎಕ್ಸಿಬಿಶನ್ ನಡೆದಾಗ ಅದಕ್ಕೆ ಸಂಬಂಧಿಸಿ ಕಾನ್‌ಫರೆನ್ಸ್ ಆಫ್ ರಿಲೀಜನ್ಸ್ ಲಂಡನಿನ ಎಂಪಯರ್ ಇನ್‌ಸ್ಟಿಟ್ಯೂಟ್‌ನಲ್ಲಿ ಜರಗಿತು. ವಿವಿಧ ಧರ್ಮಗಳ ಪ್ರತಿನಿಧಿಗಳನ್ನು ಭಾಗವಹಿಸಲು ಆಹ್ವಾನಿಸಲಾಗಿತ್ತು. ಅಹ್ಮದಿಯಾ ಜಮಾಅತಿನ ಸರ್ವೋಚ್ಚ ನಾಯಕರಾದ ಖಲೀಫರೊಂದಿಗೆ ನಾನು ಅದರಲ್ಲಿ ಭಾಗವಹಿಸಿದೆನು. ಇಸ್ಲಾಮ್ ಧರ್ಮದ ಬಗ್ಗೆ ಇದ್ದ ಅನೇಕ ತಪ್ಪು ಗ್ರಹಿಕೆಗಳನ್ನು ನಿವಾರಿಸಲಾಯಿತು. ಚರ್ಚಿಸಲಾದ ವಿಷಯಗಳ ಬಗ್ಗೆ ಇಸ್ಲಾಮ್ ಹೊಂದಿರುವ ಆಧ್ಯಾತ್ಮಿಕ ಸಂಪತ್ತನ್ನು ಕಂಡು ಜನರು ಆಶ್ಚರ್ಯಚಕಿತರಾದರು. 1933ರಲ್ಲಿ ದ್ವಿತೀಯ ಕಾನ್‌ಫರೆನ್ಸ್ ಆಫ್ ರಿಲೀಜನ್ಸ್ ಜರಗಿತು. ಅದರಲ್ಲಿ ನಾನು ಸಹಿತ ನಮ್ಮ ಜಮಾಅತಿನ ಮೂವರು ಭಾಗವಹಿಸಿ ವಿವಿಧ ಧಾರ್ಮಿಕ ವಿಷಯಗಳ ಬಗ್ಗೆ ಭಾಷಣ ನೀಡಿದೆವು. ನಾನು ಮಾತನಾಡಿದ ವಿಷಯ "ಇಸ್ಲಾಮ್ ಶಾಂತಿ ಮತ್ತು ಐಕ್ಯತೆಯನ್ನು ರಾಷ್ಟ್ರಗಳ ಮಧ್ಯೆ ಪ್ರೋತ್ಸಾಹಿಸುತ್ತದೆ" ಎಂದಾಗಿತ್ತು. ಅಹ್ಮದಿಯಾ ಜಮಾಅತಿನ ಖಲೀಫರು ಕಳುಹಿಸಿದ

ಸಂದೇಶವನ್ನು ಆ ಸಭೆಯಲ್ಲಿ ಓದಲಾಯಿತು. ಇಂತಹ ಕಾರ್ಯಕ್ರಮಗಳನ್ನು ಲಾಹೋರು ಮತ್ತಿತರ ಸ್ಥಳಗಳಲ್ಲಿ ಹೆಚ್ಚು ಹೆಚ್ಚಾಗಿ ಜರಗಿಸಲಾಗುತ್ತಿದೆ. ನಾವು ಎಲ್ಲೆಲ್ಲ ಇಂತಹ ಸಭೆಗಳನ್ನು ಏರ್ಪಡಿಸಿದೆವೋ ಅಲ್ಲಿ ಹಿಂದುಗಳು, ಕ್ರೈಸ್ತರು ಮತ್ತು ಸಿಖ್ ಧರ್ಮದವರು ಉತ್ತಮ ಪ್ರತಿಕ್ರಿಯೆ ನೀಡಿದರು. ಅವರು ಇಸ್ಲಾಮಿನ ಪವಿತ್ರ ಪ್ರವಾದಿಯ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಆಡಿದರು. ಅನ್ಯ ಧರ್ಮದ ಜನರು ನಮ್ಮನ್ನು ಅವರು ಏರ್ಪಡಿಸಿದ ಸಭೆಗಳಿಗೆ ಆಮಂತ್ರಿಸಿದಾಗ ನಾವು ಯಾವಾಗಲೂ ಆಮಂತ್ರಣಗಳನ್ನು ಸ್ವೀಕರಿಸಿ ಅವರ ಸಭೆಗಳಿಗೆ ಹೋಗಿ ಅವರ ಧರ್ಮದ ಪವಿತ್ರ ಮಹಾನುಭಾವರ ಕುರಿತು ಮೆಚ್ಚುಗೆ ಸೂಚಿಸಿ ಭಾಷಣ ಮಾಡುತ್ತಾ ಇದ್ದೇವೆ.

ಇಸ್ಲಾಮ್ ಬಗ್ಗೆ ಹೇಳುವುದಾದರೆ, ಅಹ್ಮದಿಯಾ ಸಂಘಟನೆಯ ಸ್ಥಾಪಕರು ಹೀಗೆ ಉಪದೇಶಿಸಿರುವರು: ಎಲ್ಲ ಧರ್ಮಗಳು ಒಂದೇ ಮೂಲದಿಂದ ಉದ್ಭವಿಸಿವೆ. ಆದುದರಿಂದ ಎಲ್ಲ ಧರ್ಮಗಳ ಬಗ್ಗೆ ಸಹಿಷ್ಣುತೆಯಿಂದ ವರ್ತಿಸಬೇಕು. ನಾವು ಎಲ್ಲರೂ ಒಟ್ಟಿಗೆ ಸೇರಿ ವಿವಿಧ ಧರ್ಮಗಳ ಪ್ರವಾದಿಗಳನ್ನು ಗೌರವಿಸಿ ಮಾತನಾಡಬೇಕು. ಇದು ಅಹ್ಮದಿಯಾ ಜಮಾಅತಿನ ತತ್ವವಾಗಿದೆ. ಇದು ಕೇವಲ ಒಂದು ಧೋರಣೆಯಲ್ಲ. ಇದು ಧಾರ್ಮಿಕ ವಿಶ್ವಾಸದ ಭಾಗವಾಗಿದೆ. ಇದು ಎಲ್ಲ ಜನಾಂಗಗಳಿಗೂ ಪ್ರವಾದಿಗಳನ್ನು ಕಳುಹಿಸಲಾಗಿದೆ ಎಂದು ಪವಿತ್ರ ಖುರ್‌ಆನ್ ಉಪದೇಶಿಸುವ ಪ್ರಕಾರವಾಗಿದೆ. ನಾವು ಪ್ರವಾದಿಗಳಾದ ಇಬ್ರಾಹೀಮ್, ಮೂಸಾರನ್ನು ದೇವನ ಸತ್ಯ ಪ್ರವಾದಿಗಳೆಂದು ನಂಬುವ ಹಾಗೆ ಶ್ರೀಕೃಷ್ಣ, ಶ್ರೀ ಬುದ್ಧ ಮತ್ತು ಝೋರಾಷ್ಟರ್‌ರನ್ನು ದೇವನ ಸತ್ಯ ಪ್ರವಾದಿಗಳೆಂದು ನಂಬುತ್ತೇವೆ. ಇದಕ್ಕೆ ಸಾಕ್ಷ್ಯಾಧಾರವಾಗಿ ಪವಿತ್ರ ಖುರ್‌ಆನ್ ವಚನಗಳಿವೆ. ನಾವು ಈ ವಿಶ್ವಾಸವನ್ನು ನಮ್ಮ ಪರಿಸ್ಥಿತಿಗಳಿಗೆ ಅನುಸಾರವಾಗಿ ಸೃಷ್ಟಿಸಿಲ್ಲ. ನಾವು ಇದಕ್ಕೆ ಆಧಾರವಾಗಿ ಪವಿತ್ರ ಖುರ್‌ಆನಿನ ವಚನಗಳನ್ನು ನೀಡಬಲ್ಲೆವು.

"ಒಬ್ಬ ಮುನ್ನೆಚ್ಚರಿಕೆಗಾರನು ಕಳುಹಿಸಲ್ಪಡದ ಯಾವ ಜನಾಂಗವೂ ಇಲ್ಲ" ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ. ಪವಿತ್ರ ಖುರ್‌ಆನಿನ ಈ ಉಪದೇಶಕ್ಕೆ ಅತ್ಯಂತ ಹೆಚ್ಚು ಗಮನ ನೀಡಬೇಕಾಗಿದೆ. ಇದು ಜನಾಂಗಗಳ ಮಧ್ಯೆ ಸೌಹಾರ್ದ ಸ್ಥಾಪಿಸಲು ಅತ್ಯಂತ ಸಹಕಾರಿಯಾದ ತತ್ವವಾಗಿದೆ. ನಾನು ಯಹೂದಿಯರ ಮಹಾಪುರುಷರನ್ನು ಗೌರವಿಸುವ ಹಾಗೆ ಹಿಂದುಗಳ ಮಹಾಪುರುಷರನ್ನೂ ಗೌರವಿಸುತ್ತೇನೆ. ನಾನು ಕ್ರೈಸ್ತರ ಮಹಾಪುರುಷರನ್ನು ಗೌರವಿಸುವ ಹಾಗೆ ಸಿಖ್ಖರ ಮಹಾಪುರುಷರನ್ನೂ ಗೌರವಿಸುತ್ತೇನೆ. ಎಲ್ಲ ಪ್ರವಾದಿಗಳಿಗಿಂತ ಶ್ರೇಷ್ಠರಾದ ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಗೌರವಿಸುವ ಹಾಗೆ ಅವರ ಶಿಷ್ಯ ಪ್ರವಾದಿಯೆಂಬಂತೆ ನಾನು ನಮ್ಮ ಜಮಾಅತಿನ ಸ್ಥಾಪಕರನ್ನೂ ಗೌರವಿಸುತ್ತೇನೆ. ಇವರೆಲ್ಲ ದೇವನಿಂದ ಮನುಷ್ಯರ ಮಾರ್ಗದರ್ಶನಕ್ಕೆ ನೇಮಿಸಲ್ಪಟ್ಟವರೆಂದೂ ಅವರು ಸೃಷ್ಟಿಕರ್ತನು ತನ್ನ ಸೃಷ್ಟಿಗಳೊಂದಿಗೆ ಹೊಂದಿರುವ ಪ್ರೀತಿಯ ಪ್ರತೀಕಗಳೆಂದೂ ನಾನು ನಂಬುತ್ತೇನೆ. ಅವರೆಲ್ಲರೂ ಜನರ ಆಧ್ಯಾತ್ಮಿಕ ಪೋಷಣೆಗೋಸ್ಕರ ದೇವನಿಂದ ನೇಮಿಸಲ್ಪಟ್ಟರು. ಹೀಗೆ ನಾನು ನಂಬುವೆನಾದರೆ ನಾನು ಅನ್ಯ ಧರ್ಮದ ಜನರೊಂದಿಗೆ ಅವರ ಪ್ರವಾದಿಗಳು ಉಪದೇಶಿಸಿದ ತತ್ವಗಳ ಬಗ್ಗೆ ಅನುಯಾಯಿಗಳು ನೀಡುವ ವ್ಯಾಖ್ಯಾನಕ್ಕೆ ಸಂಬಂಧಿಸಿ ನಾನು ಎಷ್ಟು ಭಿನ್ನಾಭಿಪ್ರಾಯ ಹೊಂದಿದ್ದರೂ ನಾನು ಆ ಪ್ರವಾದಿಗಳನ್ನು ಪರಿಹಾಸ ಮಾಡಲು ಸಾಧ್ಯವೇ? ಆ ಪ್ರವಾದಿಗಳ ಸ್ವಂತ ಜೀವಿತ ಮತ್ತು ಅವರ ಆಗಮನದ ಉದ್ದೇಶದ ಬಗ್ಗೆ ಹೇಳುವುದಾದರೆ ನಾವು ಸಹಮತ ಹೊಂದಿರುತ್ತೇವೆ. ವಿವಿಧ ಧರ್ಮೀಯರ ಮಧ್ಯೆ ಸೌಹಾರ್ದ ಸಂಬಂಧ ಸ್ಥಾಪಿಸಲು ಇದು ಮಹತ್ವಪೂರ್ಣವಾಗಿದೆ. ಕೆಲವು ವಿಚಾರವಂತರು ಈ ನಿಲುವನ್ನು ಹೊಂದಿರುವುದು ಬಹಳ ಉತ್ತಮವಾಗಿದೆ. ಅಹ್ಮದಿಯಾ ಜಮಾಅತಿನ ಸ್ಥಾಪಕರು ಪವಿತ್ರ ಖುರ್‌ಆನಿನ ಉಪದೇಶಗಳಿಗನು ಸಾರವಾಗಿ ಈ ವಿಷಯದ ಬಗ್ಗೆ ಮೊತ್ತಮೊದಲು ಗಮನ ಹರಿಸಿದರು.

## ಸರಿಯಾದ ಮಾರ್ಗ

ಇಸ್ಲಾಮ್ ಅಥವಾ ಬೇರೆ ಯಾವುದೇ ಧರ್ಮದ ಪ್ರಚಾರಕ್ಕೋಸ್ಕರ ಅನ್ಯ ಧರ್ಮಗಳನ್ನು ನಿಂದಿಸುವುದು ಸರಿಯಲ್ಲ. ಅನ್ಯ ಧರ್ಮದ ಕೆಲವು ತತ್ವಗಳು ಅಸಂಗತವಾಗಿ ಕಂಡರೂ ಅವು ಅಸಮಂಜಸವೆಂದು ನೀವು ಸಾಬೀತುಗೊಳಿಸಬಹುದಾದರೂ ನೀವು ನಿಮ್ಮ ಧರ್ಮದ ಸತ್ಯತೆಯನ್ನು ಅನ್ಯ ಧರ್ಮದ ನಿಂದನೆ ಮೂಲಕ ಸ್ಥಾಪಿಸಲಾರಿರಿ. ಇದು ಪರಿಪೂರ್ಣ ಸತ್ಯವಾಗಿದೆ. ಆದರೆ ವಿವಿಧ ಧರ್ಮಗಳನ್ನು ಪ್ರತಿಪಾದಿಸುವವರಲ್ಲಿ ಯಾರು ಹೀಗೆ ವರ್ತಿಸುತ್ತಾರೆ. ನೀವು ನಂಬುವ ಧರ್ಮದ ಸೌಂದರ್ಯಗಳನ್ನೂ ಶ್ರೇಷ್ಠತೆಗಳನ್ನೂ ವಿವರಿಸಿ ಜನರು ಅದರ ಕಡೆಗೆ ಆಕರ್ಷಿಸಲ್ಪಟ್ಟು ಅದರ ಬಗ್ಗೆ ಅಧ್ಯಯನ ನಡೆಸಲು ಮುಂದಾಗಬೇಕು. ನೀವು ನಿಮ್ಮ ಧರ್ಮದ ಸೌಂದರ್ಯಗಳನ್ನು ವರ್ಣಿಸಿ ಅನ್ಯರಿಗೆ ಅದನ್ನು ಮನವರಿಕೆ ಮಾಡಿಕೊಡುವಿರಾದರೆ ಅನ್ಯರು ತಾವು ಈಗಾಗಲೇ ನಂಬುತ್ತಿರುವುದು ನ್ಯೂನತೆಯಿಂದ ಕೂಡಿದೆ ಎಂದು ತಿಳಿದುಕೊಳ್ಳುವರು.

ಮಾನವರಲ್ಲಿ ಪರಸ್ಪರ ಕಲಹಕ್ಕೆ ಕಾರಣ ಧಾರ್ಮಿಕ ವ್ಯತ್ಯಾಸಗಳು ಮಾತ್ರವಲ್ಲ, ನೈತಿಕತೆಗೆ ಸಂಬಂಧಿಸಿ ಭಿನ್ನಾಭಿಪ್ರಾಯಗಳಿವೆ. ರಾಜಕೀಯ ವಿಷಯಗಳಿಗೆ ಸಂಬಂಧಿಸಿ ಭಿನ್ನಾಭಿಪ್ರಾಯಗಳಿವೆ. ಆರ್ಥಿಕತೆ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಅಂತರ್ರಾಷ್ಟ್ರೀಯ ಸಂಬಂಧಗಳ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಇವೆಲ್ಲವೂ ಒಗ್ಗೂಡಿ ಮಾನವರ ಮಧ್ಯೆ ಕಲಹಕ್ಕೆ ಕಾರಣಗಳಾಗಿವೆ. ಇವುಗಳಲ್ಲಿ ಪ್ರತಿಯೊಂದಕ್ಕೆ ಇಸ್ಲಾಮಿನಲ್ಲಿ ಪರಿಹಾರ ಮಾರ್ಗಗಳಿವೆ. ಇವುಗಳಲ್ಲಿ ಕೆಲವು ವಿಷಯಗಳ ಬಗ್ಗೆ ನಾನು ಪ್ರಸ್ತಾಪಿಸುವೆನು. ಮೊದಲನೆಯದಾಗಿ ನೈತಿಕತೆ ಬಗ್ಗೆ ಹೇಳುವುದಾದರೆ, ಇದು ವಿವರಿಸಲು ಕಷ್ಟವಾದ ವಿಷಯವಾಗಿದೆ. ಅದನ್ನು ಮನವರಿಕೆ ಮಾಡಿಕೊಳ್ಳುವುದು ಪ್ರಾರಂಭದಲ್ಲಿ ಸ್ವಲ್ಪ ಪ್ರಯಾಸಕರವಾಗಬಹುದು. ಅದರ ಬಗ್ಗೆ ಮೊದಲೇ ಸಿದ್ಧತೆ ಮಾಡಿಕೊಳ್ಳಬೇಕಾಗಿದೆ. ನಾನು ಹೇಳುವುದರ ಬಗ್ಗೆ ತಪ್ಪು ಗ್ರಹಿಕೆಯಾಗಬಹುದಾದರೂ ಇಸ್ಲಾಮ್ ಬಹಿರಂಗ ಪಡಿಸಿದ ಕೆಲವು ಸತ್ಯಗಳನ್ನು ನಾನು ವಿವರಿಸುವೆನು.

ವಾಗ್ದತ್ತ ಮಸೀಹರು ಇಸ್ಲಾಮಿನ ಉಪದೇಶದ ಭಾಗವಾಗಿ ಅದನ್ನು ಲೋಕದ ಮುಂದೆ ನೈತಿಕತೆಗೆ ಸಂಬಂಧಿಸಿ ಇರಿಸಿದರು.

## ಮಾನವ ಪ್ರಕೃತಿ ಪರಿಶುದ್ಧವಾಗಿದೆ

ಇಸ್ಲಾಮ್ ಕಲಿಸಿದ ಮಹತ್ವಪೂರ್ಣವಾದ ಸತ್ಯವನ್ನು ವಾಗ್ದತ್ತ ಮಸೀಹರು ಒತ್ತಿ ಹೇಳಿದರು. ಮಾನವ ಪ್ರಕೃತಿ ಪರಿಶುದ್ಧವಾಗಿದೆ. ಅದು ಕೆಡುಕಿನಿಂದ ಕಳಂಕಿತವಾಗಿಲ್ಲ. ಕೆಡುಕು ಮಾನವನಲ್ಲಿ ಅಂತರ್ಗತವಾಗಿಲ್ಲ. ಕೆಡುಕು ಹೊರಗಿನಿಂದ ಪ್ರವೇಶಿಸುತ್ತದೆ. ವಾಗ್ದತ್ತ ಮಸೀಹರು ಇದನ್ನು ಇನ್ನಷ್ಟು ಒತ್ತಿ ಹೇಳಿದರು. ಇದು ಉಲ್ಲಾಸದಾಯಕವಾದ ಸಂದೇಶವಾಗಿದೆ. ಇದು ಮಾನವರೆಲ್ಲರಿಗೂ ಶುಭ ಪ್ರತೀಕ್ಷೆ ಭರಿತವಾದುದಾಗಿದೆ. ಎಲ್ಲ ಕಾರ್ಯಗಳ ಅಂತಿಮ ಗುರಿಯಾದ ಸೃಷ್ಟಿಕರ್ತನ ಸಾಮೀಪ್ಯ ಗಳಿಸುವುದನ್ನು ಆಶಿಸುವ ಜನರಿಗೆ ಇದು ಭರವಸೆ ನೀಡುವುದಾಗಿದೆ. ಪವಿತ್ರ ಖುರ್‌ಆನ್ ಇದನ್ನು ಕಲಿಸಿದೆ ಮತ್ತು ಇಸ್ಲಾಮ್ ಅದನ್ನು ಒತ್ತಿ ಹೇಳಿದೆ.

## ಮಾನವನಲ್ಲಿ ಆಂತರಿಕವಾಗಿ ಕೆಡುಕಿಲ್ಲ

ಮಾನವನ ಸಹಜಗುಣಗಳು ಕೆಟ್ಟದೂ ಅಲ್ಲ ಒಳ್ಳೆಯದೂ ಅಲ್ಲ. ಅದನ್ನು ಪ್ರಯೋಗಿಸುವಾಗ ಅದು ಒಳ್ಳೆಯ ಗುಣ ಅಥವಾ ಕೆಟ್ಟ ಗುಣವಾಗಿ ಗಣಿಸಲ್ಪಡುವುದು. ಉದಾಹರಣೆಗೆ, ಪ್ರೀತಿ ಎನ್ನುವುದು ಸಹಜ ಗುಣವಾಗಿದೆ. ಹಾಗೆಯೇ ದ್ವೇಷ ಸಹ ಸಹಜ ಗುಣವಾಗಿದೆ. ಒಂದು ವಸ್ತುವನ್ನು ಇಷ್ಟಪಡುವುದು ಒಳ್ಳೆಯದೂ ಅಲ್ಲ. ಕೆಟ್ಟದ್ದೂ ಅಲ್ಲ. ಅದೇ ರೀತಿ ಒಂದು ವಸ್ತುವನ್ನು ಇಷ್ಟಪಡದಿರುವುದು ಒಳ್ಳೆಯದೂ ಅಲ್ಲ. ಕೆಟ್ಟದ್ದೂ ಅಲ್ಲ. ಪವಿತ್ರ ಖುರ್‌ಆನ್ ಒತ್ತಿ ಹೇಳುವುದೇನೆಂದರೆ, ಒಬ್ಬನು ಒಬ್ಬ ವ್ಯಕ್ತಿಯನ್ನು ಅಥವಾ ವಸ್ತುವನ್ನು ಪ್ರೀತಿಸುವುದು ಕ್ರಮಬದ್ಧವಾಗಿದ್ದು ಅದು ಒಳಿತಿಗೆ ಒಯ್ಯುವುದಾದರೆ ಅದು ಒಳ್ಳೆಯದಾಗುತ್ತದೆ. ಪ್ರೀತಿಯನ್ನು ಸ್ವಾರ್ಥ ಲಾಭಕ್ಕಾಗಿ ಬಳಸಿದರೆ ಅದು ಕೆಟ್ಟದ್ದು ಆಗುತ್ತದೆ. ಮನುಷ್ಯನ ಪ್ರತಿಯೊಂದು ಸಹಜ ಗುಣವನ್ನು ಕ್ರಮಬದ್ಧಗೊಳಿಸಲು, ಅವುಗಳನ್ನು ನೈತಿಕ ಗುಣಗಳನ್ನಾಗಿ ಪರಿವರ್ತಿಸಲು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಉಪದೇಶಗಳನ್ನು ನೀಡಿದ್ದಾರೆ. ನಾನು ಈ ಉದಾಹರಣೆ ನೀಡುವುದು ಅದು ಎಲ್ಲರಿಗೂ ಆಸಕ್ತಿದಾಯಕವಾಗ ಬಹುದೆಂಬ ಕಾರಣದಿಂದಾಗಿದೆ. ಪ್ರೀತಿ ಎಂಬ ಸಹಜ ಗುಣ ನೈತಿಕ ಗುಣವಾಗಿ ಪರಿವರ್ತನೆ ಹೊಂದುವುದು ಈ ಕೆಳಗಿನ ಮೂರು ಕಾರಣಗಳಿಂದಾಗಿದೆ:

1) ಪ್ರೀತಿಯಲ್ಲಿ ಹಂತವಿರಬೇಕು. ಒಂದು ವಸ್ತುವನ್ನು ಪ್ರೀತಿಸಿ ಅದಕ್ಕಿಂತ ಉತ್ತಮವಾದುದನ್ನು ಪ್ರೀತಿಸುವುದಕ್ಕೆ ಅದು ದಾರಿ ಮಾಡಿಕೊಡಬೇಕು. ಒಂದು ವಸ್ತುವನ್ನು ಪ್ರೀತಿಸುವ ಮೂಲಕ ಅದು ಕೆಡುಕಿಗೆ ಒಯ್ಯುವಂತಹದಾಗಬಾರದು. ಉದಾಹರಣೆಗೆ, ಒಬ್ಬನು ತನ್ನ ಮಕ್ಕಳನ್ನು ಪ್ರೀತಿಸುವಾಗ ಪ್ರಾಮಾಣಿಕತೆಯಿಂದಲೂ ಸತ್ಯಪೂರ್ಣವಾಗಿಯೂ ವರ್ತಿಸುವನಾದರೆ ಅದು ಆತನಿಗೆ ಗುಣಕರವಾಗಿದೆ. ಯಾಕೆಂದರೆ ಅದು ಸರಿಯಾಗಿ ನಿಯಂತ್ರಿಸಲ್ಪಡುತ್ತದೆ. ಆದರೆ ಒಬ್ಬನು ತನ್ನ ಮಕ್ಕಳನ್ನು ಪ್ರೀತಿಸುವಾಗ ಅವರ ಪಾಲನೆ ಪೋಷಣೆಗೋಸ್ಕರ ಲಂಚ ಪಡೆಯಲು ಯತ್ನಿಸುವುದಾದರೆ ಅಂತಹ ಪ್ರೀತಿ ಕೆಟ್ಟದ್ದಾಗಿದೆ.

2) ಪ್ರೀತಿ ಕೃತಜ್ಞತೆಯನ್ನು ಆಧರಿಸಿರಬೇಕು. ಸಿಗುವ ಲಾಭೇಚ್ಛೆಯಿಂದ ಪ್ರೀತಿಸಬಾರದು. ಇದು ನಾನು ಇದರ ಮೊದಲು ಹೇಳಿದಂತೆ ಮನವರಿಕೆ ಮಾಡಲು ಕಷ್ಟಕರವಾದ ವಿಷಯವಾಗಿದೆ. ಮಕ್ಕಳ ಬಗ್ಗೆ ಪ್ರೀತಿಯ ಉದಾಹರಣೆ ಪುನಃ ನೀಡುತ್ತೇನೆ. ನಾವು ಮಕ್ಕಳನ್ನು ತಂದೆ ಮಕ್ಕಳ ಸಹಜ ಗುಣದ ಪ್ರಕಾರ ಪ್ರೀತಿಸುತ್ತೇವೆಯಾದರೂ ಅವರಲ್ಲಿ ಮುಂದೆ ಸಿಗಬಹುದಾದ ಲಾಭದ ಅಂಶವೂ ಅಡಕವಾಗಿರುತ್ತದೆ. ದುರಾಶೆ ಮತ್ತು ಕೃತಜ್ಞತೆ ಇವುಗಳ ಮಧ್ಯೆ ಸಂಘರ್ಷ ಉಂಟಾಗುವಾಗ ದುರಾಶೆಯು ಕೃತಜ್ಞತೆಗೆ ದಾರಿ ಬಿಟ್ಟುಕೊಡಬೇಕು.

3) ಪ್ರೀತಿ ಬಗ್ಗೆ ಮೂರನೆಯ ಶರತ್ತೇನೆಂದರೆ, ಅದು ಕೃತಜ್ಞತೆ ಅಥವಾ ಲಾಭದ ಮೇಲೆ ಸೀಮಿತವಾಗಿರದೆ ಪ್ರೀತಿಗೆ ಅದಕ್ಕಿಂತ ಶ್ರೇಷ್ಠ ಉದ್ದೇಶ ಲಕ್ಷ್ಯಗಳು ಇರಬೇಕು. ಉದಾಹರಣೆಗೆ ಹೇಳುವುದಾದರೆ, ನಾವು ಎಲ್ಲರನ್ನೂ ಪ್ರೀತಿಸಬೇಕು ಎಂದು ಹೇಳಲಾಗುತ್ತದೆ. ಇದು ಸುಂದರ ತತ್ವವಾಗಿದೆ. ಆದರೆ ಅದನ್ನು ನಮ್ಮ ಜೀವಿತದಲ್ಲಿ ಪ್ರಯೋಗಿಸುವಾಗ ಬಹಳ ಗೊಂದಲ ತಲೆದೋರುತ್ತದೆ. ನಾವು ಕೆಲವು ವಸ್ತುಗಳನ್ನು ಇಷ್ಟಪಡಬಾರದು. ಹೀಗೆ ವರ್ತಿಸದಿದ್ದರೆ ಸಮಾಜವು ಇಪ್ಪತ್ತನಾಲ್ಕು ಗಂಟೆಗಳೊಳಗೆ ಕೊನೆಗೊಳ್ಳುವುದು. ಉದಾಹರಣೆಗೆ, ನಾವು ಕೆಡುಕನ್ನು ಇಷ್ಟಪಡಬಾರದು. ಅಹ್ಮದಿಯಾ ಸಂಘಟನೆಯ ಸ್ಥಾಪಕರು ಪಾಪ ಮತ್ತು ಪಾಪಿಯ ಮಧ್ಯೆ ವ್ಯತ್ಯಾಸವನ್ನು ಸ್ಪಷ್ಟಪಡಿಸಿರುವರು. ನಾವು ಪಾಪವನ್ನು ದ್ವೇಷಿಸಬೇಕು. ಆದರೆ ನಾವು ಪಾಪಿಯನ್ನು ಪಾಪದಿಂದ ಮುಕ್ತನನ್ನಾಗಿಸಲು ಪ್ರಯತ್ನಿಸಿ ಅವನನ್ನು ಪ್ರೀತಿಸುವಂತೆ ಆಗಬೇಕು. ಒಂದು ಪಾತ್ರೆಯಲ್ಲಿ ಕೊಳಕು ನೀರು ತುಂಬಿದ್ದರೆ ಆ ಕೊಳಕು ನೀರನ್ನು ಹೊರಗೆ ಚೆಲ್ಲಿ ಪಾತ್ರೆಯನ್ನು ಶುದ್ಧ ಮಾಡಬಹುದು. ಆದರೆ ಪಾತ್ರೆಯನ್ನು ರಕ್ಷಿಸುವ ಕಾಳಜಿ ನಮಗಿಲ್ಲವಾದರೆ ಮತ್ತು ಕೊಳಕು ನೀರನ್ನು ಅದರಿಂದ ಹೊರಗೆ ಚೆಲ್ಲುವುದು ಹೇಗೆಂದು ತಿಳಿಯದಿದ್ದರೆ ನಾವು ಪಾತ್ರೆಯನ್ನು ಒಡೆದು ಹಾಕಿ ಕೊಳಕು ನೀರನ್ನು ಚೆಲ್ಲುತ್ತೇವೆ. ಕೆಲವು ವಸ್ತುಗಳನ್ನೂ ಕೆಲಸಗಳನ್ನೂ ನಾವು ಇಷ್ಟಪಡಬಾರದು. ಆದರೆ ಇಷ್ಟಪಡದಿರುವಿಕೆಯುಲ್ಲೂ ಹಂತಗಳಿರುತ್ತವೆ.

## ಬೇರೆ ಕೆಲವು ತತ್ವಗಳು

ಅಹ್ಮದಿಯಾ ಸಂಘಟನೆಯ ಸ್ಥಾಪಕರು ಉಪದೇಶಿಸಿದ ಬೇರೆ ತತ್ವಗಳು ಆಧ್ಯಾತ್ಮಿಕ ಪ್ರಗತಿಯ ಹಂತಗಳ ಬಗ್ಗೆಯಾಗಿದೆ. ಅದು ನೈತಿಕ ಗುಣಗಳ ಬೆಳವಣಿಗೆಯ ಬಗ್ಗೆಯಾಗಿದೆ. ಉದಾಹರಣೆಗೆ, ಒಬ್ಬನು ಎಲ್ಲ ವಿಧ ದುರ್ಗುಣಗಳಲ್ಲಿ ಮುಳುಗಿರುವನೆಂದು ಭಾವಿಸಿರಿ. ಯಾವುದು ಸರಿ, ಯಾವುದು ತಪ್ಪು ಎಂಬುದರ ಬಗ್ಗೆ ಅವನಿಗೆ ಪ್ರಜ್ಞೆ ಇರುವುದಿಲ್ಲ. ಅವನೊಂದಿಗೆ, "ನೀನು ಒಬ್ಬ ಸಂತನಾಗಬೇಕು" ಎಂದು ಹೇಳಿದರೆ, ಅವನು ಹೇಳುತ್ತಾನೆ: "ನೀವು ನನ್ನ ಬಗ್ಗೆ

ಚಿಂತಿಸಬೇಡಿರಿ. ನಾನು ಅದರಿಂದ ಬಹಳ ದೂರ ಇದ್ದೇನೆ." ಇಸ್ಲಾಮ್ ಈ ರೀತಿ ಉಪದೇಶಿಸುವುದಿಲ್ಲ. ಅದು ನೈತಿಕ ಗುಣಗಳ ವಿವಿಧ ಹಂತಗಳನ್ನು ನಿರ್ದೇಶಿಸುತ್ತದೆ. ಇವುಗಳನ್ನು ಆಧಾರವಾಗಿಟ್ಟು ಕೊಂಡು ಒಬ್ಬ ಪಾಪಿಯು ಪಾಪದ ಯಾವ ಮಟ್ಟಕ್ಕೆ ತಲಪಿದ್ದಾನೆ, ಅವನನ್ನು ಹೇಗೆ ಪಾಪ ಮುಕ್ತನನ್ನಾಗಿ ಮಾಡಿ ನೈತಿಕ ಗುಣಶಾಲಿ ಯನ್ನಾಗಿ ಮಾಡಬಹುದೆಂದು ಕಂಡುಕೊಳ್ಳಬಹುದಾಗಿದೆ. ಪವಿತ್ರ ಖುರ್‌ಆನ್ ನೈತಿಕ ಗುಣಗಳ ಮೂರು ಹಂತಗಳನ್ನು ವಿವರಿಸಿದೆ.

## ನೈತಿಕ ಗುಣಗಳ ಮೂರು ಅಭಿವೃದ್ಧಿಯ ಹಂತಗಳು

ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: ಇನ್ನಲ್ಲಾಹ ಯಅ್‌ಮುರು ಬಿಲ್ ಅದ್‌ಲಿ ವಲ್ ಇಹ್‌ಸಾನಿ ವ ಈತಾಯಿ ಧಿಲ್ ಖುರ್‌ಬಾ ವ ಯನ್‌ಹಾ ಅನಿಲ್ ಫಹ್‌ಶಾಇ ವಲ್ ಮುನ್‌ಕರಿ ವಲ್ ಬಗ್‌ಯೀ.

"ನ್ಯಾಯ ನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ನಿಕಟ ಬಂಧುಗಳಿಗೆ ಎಂಬಂತೆ (ಪರರಿಗೂ) ಸಹಾಯಮಾಡಲಿಕ್ಕೂ ಅಲ್ಲಾಹನು ಆಜ್ಞಾಪಿಸುತ್ತಾನೆ. ಅಸಭ್ಯತೆಯನ್ನೂ ದುಷ್ಕೃತ್ಯವನ್ನೂ ನಿಯಮೋಲ್ಲಂಘನೆಯನ್ನೂ ಅವನು ನಿಷಿದ್ಧಗೊಳಿಸಿದ್ದಾನೆ." (16:91)

ಅದ್‌ಲ್ (ನ್ಯಾಯನಿಷ್ಠೆ) ನೈತಿಕ ಗುಣದ ಪ್ರಥಮ ಶ್ರೇಷ್ಠ ಹಂತವಾಗಿದೆ. ಇಹ್‌ಸಾನ್ (ಔದಾರ್ಯ) ಎರಡನೆಯ ಹಂತವಾಗಿದೆ. ಈತಾಯಿ ಧಿಲ್‌ಖುರ್‌ಬಾ (ನಿಕಟ ಬಂಧುಗಳಿಗೆ ಎಂಬಂತೆ ಪರರಿಗೂ ಸಹಾಯ ನೀಡುವುದು) ಮೂರನೆಯ ಹಂತವಾಗಿದೆ. ಪವಿತ್ರ ಖುರ್‌ಆನಿನಲ್ಲಿ ಬಳಸಲಾದ ಅದ್‌ಲ್ ಶಬ್ದದ ಅರ್ಥ ನ್ಯಾಯನಿಷ್ಠೆ ಎಂದು ಮಾತ್ರ ಹೇಳಿದರೆ ಸಾಕಾಗಲಾರದು. ನೀವು ಅನ್ಯರೊಂದಿಗೆ ಸಮಾನತೆಯಿಂದ ವರ್ತಿಸಬೇಕು. ಒಂದಿಷ್ಟು ತಪ್ಪು ಕೂಡ ಆಗದಂತೆ ವರ್ತಿಸಬೇಕು. ನೀವು ಅನ್ಯರಿಂದ ಗಳಿಸಿದ ಒಳಿತಿಗೆ ಪ್ರತಿಫಲವಾಗಿ ಕನಿಷ್ಠ ಅದಕ್ಕೆ ಸಮವಾದ ಒಳಿತನ್ನು ಪ್ರತಿಫಲವಾಗಿ ನೀಡಬೇಕು. ಇದು ಮನುಷ್ಯನ ನೈತಿಕ ಗುಣದ ಕನಿಷ್ಠ ಹಂತವಾಗಿದೆ. ಅದ್‌ಲ್ ಎಂದರೆ ಒಳಿತಿಗೆ ಸರಿಸಮಾನವಾದ ಒಳಿತು ಎಂದಾಗಿದೆ. ಇಹ್‌ಸಾನ್(ಔದಾರ್ಯ) ಎರಡನೆಯ ಹಂತವಾಗಿದೆ. ಅದು ಲಭಿಸಿದ ಒಳಿತಿಗೆ ಬದಲಾಗಿ ಹೆಚ್ಚು ಒಳಿತನ್ನು ನೀಡುವುದು. ಕೆಡುಕಿಗೆ ಪ್ರತಿಯಾಗಿ ಒಳಿತನ್ನು ಮಾಡುವುದೂ ಇದರಲ್ಲಿ ಸೇರಿದೆ. ಮೂರನೆಯ ಹಂತ ಈತಾಯಿ ಧಿಲ್‌ಖುರ್‌ಬಾ. ನಿಕಟ ಬಂಧುಗಳಿಗೆ ಎಂಬಂತೆ ಪರರಿಗೂ ಸಹಾಯ ಮಾಡುವ ಗುಣ ಇದಾಗಿದೆ.

ನೈತಿಕ ಉನ್ನತಿಗೇರಲು ಮೂರು ಹಂತಗಳಿರುವ ಹಾಗೆ ಮೂರು ಹಂತದ ಕೆಡುಕುಗಳಿಂದ ರಕ್ಷಿಸಿಕೊಳ್ಳುವುದು ಸಹ ಆವಶ್ಯಕವಾಗಿದೆ. ಮೊದಲನೆಯ ಕೆಡುಕು ಫಹ್‌ಶಾ (ಅಸಭ್ಯತೆ) ಆಗಿದೆ. ಈ ಕೆಡುಕಿನಿಂದ ಅನ್ಯರು ಬಾಧಿತರಾಗುವುದಿಲ್ಲ. ವ್ಯಕ್ತಿ ಸ್ವತಃ ಇದರಿಂದ ಬಾಧಿತ ನಾಗುತ್ತಾನೆ. ಕೆಟ್ಟ ಯೋಚನೆಗಳು, ಕೆಟ್ಟ ಯೋಜನೆಗಳು, ಕೆಟ್ಟ ಯೋಜನೆಗಳ ಮುಂದುವರಿಸುವಿಕೆ ಮೊದಲಾದುವುಗಳು ಇದರಲ್ಲಿ ಸೇರುತ್ತವೆ. ಇನ್ನೊಂದು ಕೆಡುಕು ಮುನ್‌ಕರ್ (ದುಷ್ಕೃತ್ಯ) ಆಗಿದೆ. ಅನ್ಯರು ಇಷ್ಟಪಡದ ಕೆಡುಕುಗಳು ಇವುಗಳಾಗಿವೆ. ಮೂರನೆಯದು ಬಗ್‌ಯೀ ಎಂದರೆ ಗಾಯ ಎಂದು ಅರ್ಥ. ನಿಮ್ಮ ಕೆಲಸದಿಂದ ಅನ್ಯರಿಗೆ ಹಾನಿ ಉಂಟಾಗುವುದಾದರೆ ಅದೇ ಬಗ್‌ಯೀ ಆಗಿದೆ.

ಹೀಗೆ ಒಳಿತಿನಲ್ಲಿ ಮೇಲೇರಲು ವಿವಿಧ ಹಂತಗಳಿವೆ. ಕೆಡುಕಿನಲ್ಲಿ ಕೆಳಗೆ ಇಳಿಯಲು ಸಹ ಬೇರೆ ಬೇರೆ ಹಂತಗಳಿವೆ. ಒಬ್ಬ ವ್ಯಕ್ತಿಯನ್ನಾಗಲಿ ಒಂದು ಸಮಾಜವನ್ನಾಗಲಿ ಅಥವಾ ಮಾನವರನ್ನೆಲ್ಲ ಸುಧಾರಣೆ ಮಾಡಲು, "ನೀವು ತಪ್ಪಿನಲ್ಲಿದ್ದೀರಿ. ನೀವೆಲ್ಲರೂ ನೈತಿಕವಾಗಿ ಉನ್ನತಿಗೊಳ್ಳಬೇಕು" ಎಂದು ಹೇಳಿ ಕೂಡಲೇ ಒಳ್ಳೆಯವರನ್ನಾಗಿ ಮಾಡಲಾರಿರಿ. ನೀವು ಒಬ್ಬ ವಿದ್ಯಾರ್ಥಿಯ ಉದಾಹರಣೆ ತೆಗೆದುಕೊಳ್ಳಿರಿ. "ನೀನು ಈ ಎಲ್ಲ ಪುಸ್ತಕಗಳನ್ನು ಓದಿ ಎಂ.ಎ. ಬಿರುದು ಪಡೆದುಕೊಳ್ಳು" ಎಂದು ಹೇಳಿದರೆ ಅವನು ಓದಿ ಕೂಡಲೇ ಎಂ.ಎ. ಬಿರುದು ಪಡಕೊಳ್ಳಲಾರ. ಅವನು ಹಂತ ಹಂತವಾಗಿ ವಿದ್ಯಾರ್ಜನೆ ಮಾಡಿಯೇ ಬಿರುದು ಗಳಿಸಲು ಸಾಧ್ಯ.

ಈ ಹಂತಗಳಲ್ಲಿ ನೈತಿಕ ಉನ್ನತಿ ಗಳಿಸುವ ಬಗ್ಗೆ ಮತ್ತು ಕೆಡುಕುಗಳ ನಿವಾರಣೆ ಬಗ್ಗೆ ಇಸ್ಲಾಮ್ ಉಪದೇಶಿಸುತ್ತದೆ. ನೈತಿಕತೆಯ ಬಗ್ಗೆ ಬಹಳ ಹೆಚ್ಚು ತಿಳಿಯಲಿಕ್ಕಿದೆ ಎಂದು ಅದು ಸ್ಪಷ್ಟಪಡಿಸುತ್ತದೆ.

## ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳು

ಇನ್ನು ಮುಂದೆ ನಾನು ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳ ಬಗ್ಗೆ ಮಾತನಾಡುವೆನು. ಎರಡು ವರ್ಷಗಳ ಹಿಂದೆ ಲಂಡನಿನಲ್ಲಿ ರೌಂಡ್ ಟೇಬಲ್ ಕಾನ್‌ಫರೆನ್ಸ್ ನಡೆಯುತ್ತಿದ್ದಾಗ ಜೊಯಿಂಟ್ ಸಿಲೆಕ್ಟ್ ಕಮಿಟಿಯ ಮುಸ್ಲಿಮ್ ಸದಸ್ಯರನ್ನು ಹೌಸ್ ಆಫ್ ಕಾಮನ್ಸ್ ಕಮಿಟಿ ರೂಮಿಗೆ ಆಮಂತ್ರಿಸಲಾಯಿತು. ಬ್ರಿಟಿಷ್ ಪಾರ್ಲಿಮೆಂಟಿನ ಎರಡು ಸಭೆಗಳ ಸದಸ್ಯರನ್ನು ಸಂಬೋಧಿಸಿ ಜಾಗತಿಕ ಸಮಸ್ಯೆಗಳಿಗೆ ಮತ್ತು ವಿಶಿಷ್ಟವಾಗಿ ಆರ್ಥಿಕ ಸಮಸ್ಯೆಗಳಿಗೆ ಇಸ್ಲಾಮಿನ ಪರಿಹಾರ ಮಾರ್ಗಗಳ ಬಗ್ಗೆ ಭಾಷಣ ಮಾಡಲಿಕ್ಕಿತ್ತು. ಪ್ರತಿನಿಧಿ ಸಂಘದ ಅನೇಕ ಸದಸ್ಯರು ಪಾರ್ಲಿಮೆಂಟ್ ಸದಸ್ಯರನ್ನು ಸಂಬೋಧಿಸಿ ಇಸ್ಲಾಮ್ ಸಮಸ್ಯೆಗಳಿಗೆ ಯಾವ ರೀತಿ ಪರಿಹಾರ ಸೂಚಿಸುತ್ತದೆ ಎನ್ನುವ ಬಗ್ಗೆ ತಮ್ಮ ತಮ್ಮ ನಿಲುವನ್ನು ವಿವರಿಸಿದರು. ಒಬ್ಬ ಸದಸ್ಯ ಹೀಗೆ ಹೇಳಿದರು: "ಹಿಂದೂಸ್ತಾನದ ಮುಂದಿನ ವೈಸ್‌ರೋಯಿ ರಾಜ ಕುಟುಂಬಕ್ಕೆ ಸೇರಿದವರಾಗಬೇಕು." ಇನ್ನೊಬ್ಬ ಸದಸ್ಯ ಹೀಗೆ ಹೇಳಿದರು: "ನಾವು ಬಡ್ಡಿ ವ್ಯವಸ್ಥೆಯನ್ನು ಅಂಗೀಕರಿಸಬೇಕು. ಬಡ್ಡಿಯನ್ನು ನಿಷಿದ್ಧಗೊಳಿಸಿದುದು ಮುಸ್ಲಿಮ್ ಸಮುದಾಯಗಳ ಬೆಳವಣಿಗೆಗೆ ತಡೆಯಾಗಿದೆ. ಈ ಅಡ್ಡಿಯನ್ನು ನಿವಾರಿಸುವ ತನಕ ಮುಸ್ಲಿಮರು ಆರ್ಥಿಕ ಸಮಸ್ಯೆಗಳ ನಿವಾರಣೆಗೆ ಯಾವ ಕೊಡುಗೆಯನ್ನೂ ನೀಡಲು ಸಾಧ್ಯವಾಗದು." ನಾನು ಏನು ಹೇಳಿದೆನೆಂದು ನಿಮಗೆ ಸಂಕ್ಷಿಪ್ತವಾಗಿ ವಿವರಿಸುತ್ತೇನೆ. ನಾನು ಹೇಳಿದೆ: "ನಿಮ್ಮ ಉದ್ದೇಶಲಕ್ಷ್ಯ ಪ್ರತಿಯೊಂದು ಸಮುದಾಯದಲ್ಲಿ ಕೆಲವು ಮಿಲಿಯಾಧಿಪತಿಗಳು ಇರಬೇಕೆಂದೂ ಬಡ ಮತ್ತು ಕಾರ್ಮಿಕರು ಕಷ್ಟದಲ್ಲಿ ದಿನಗಳೆಯಬೇಕೆಂದೂ ಆಗಿದ್ದರೆ ಅದಕ್ಕೋಸ್ಕರ ಇಸ್ಲಾಮ್ ಧರ್ಮವು ಯಾವ ಕೊಡುಗೆಯನ್ನೂ ನೀಡಲಾರದು. ಇಸ್ಲಾಮ್

ಕೆಲವು ತತ್ವಗಳನ್ನು ಆರ್ಥಿಕ ಸಮಸ್ಯೆಗಳ ನಿವಾರಣೆಗೆ ಸೂಚಿಸಿದೆ." ನನ್ನ ಭಾಷಣದ ನಂತರ ಪ್ರಸಿದ್ಧ ಬ್ಯಾಂಕರ್ ಮಿಸ್ಟರ್ ಜೇಮ್ಸ್ ಡೆ ರೋತ್ಸ್‌ಚೈಲ್ಡ್ ನನ್ನ ಸಮೀಪಕ್ಕೆ ಬಂದು ಹೇಳಿದರು: "ಆರ್ಥಿಕತೆ ಬಗ್ಗೆ ಇವು ಇಸ್ಲಾಮಿನ ಉಪದೇಶವೆಂದಾದರೆ, ಇಸ್ಲಾಮ್‌ನಲ್ಲಿ ನನಗೆ ಯಾವ ಸ್ಥಾನವೂ ದೊರಕಲಾರದೆಂದು ನಾನು ಭಯಪಡುತ್ತೇನೆ." ನಾನು ಹೇಳಿದೆ: ನಿಮಗೆ ಇಸ್ಲಾಮಿನಲ್ಲಿ ಯಾವ ಸ್ಥಾನವೂ ಇಲ್ಲ. ಇಸ್ಲಾಮ್ ಎಂತಹ ಸಮಾಜವನ್ನು ಬಯಸುತ್ತದೆ ಎಂದರೆ ಸಂಪತ್ತು ಯಾವಾಗಲೂ ಚಲಿಸುತ್ತಾ ಇರಬೇಕು. ಅದು ಕೆಲವರ ಕೈಗಳಲ್ಲಿ ಮಾತ್ರ ಶೇಖರಿಸಲ್ಪಡಬಾರದು. ಇಸ್ಲಾಮ್ ಜನರೆಲ್ಲರ ಅಭಿವೃದ್ಧಿಯನ್ನು ಗುರಿಯಾಗಿಟ್ಟುಕೊಂಡಿರುತ್ತದೆ. ಹತ್ತೊಂಬತ್ತನೇ ಮತ್ತು ಇಪ್ಪತ್ತನೇ ಶತಮಾನಗಳಲ್ಲಿ ರೂಪುಗೊಂಡ ಆರ್ಥಿಕ ಸಮಾಜದಲ್ಲಿ ಜಾರಿಯಲ್ಲಿರುವ ನಿಯಮಗಳನ್ನು ಇಸ್ಲಾಮ್ ಉದ್ದೇಶವಾಗಿ ಇಟ್ಟುಕೊಳ್ಳುವುದಿಲ್ಲ. ನಮ್ಮನ್ನು ಆರ್ಥಿಕವಾದ ಕೆಲವು ಕೆಡುಕುಗಳಿಂದ ರಕ್ಷಿಸಲು ಇಸ್ಲಾಮ್ ವಿಧಿಸುವ ಪ್ರಥಮ ನಿಬಂಧನೆ ಇದಾಗಿದೆ. ಅದನ್ನು ತಡೆಗಟ್ಟದಿದ್ದರೆ ಪಶ್ಚಿಮದಲ್ಲಿ ಈಗ ಇರುವ ಸಾಮಾಜಿಕ ವ್ಯವಸ್ಥೆ ಸ್ಥಾಪಿಸಲ್ಪಡುವುದು. ಇಸ್ಲಾಮ್ ಸಂಪತ್ತನ್ನು ಹಂಚುವ ಧೋರಣೆ ಹೊಂದಿದೆ. ಇಸ್ಲಾಮ್ ಮರಣಶಾಸನ ಮೂಲಕ ನೀಡಬಹುದಾದ ಸಂಪತ್ತನ್ನು ಸಂಪತ್ತಿನ ಮೂರನೆಯ ಒಂದು ಭಾಗಕ್ಕೆ ಸೀಮಿತಗೊಳಿಸಿದೆ. ಮೃತನಾದ ಮನುಷ್ಯನ ಸಂಪತ್ತಿನ ಮೂರರಲ್ಲಿ ಎರಡು ಭಾಗ ವಾರೀಸುದಾರರಲ್ಲಿ ಹಂಚಬೇಕು.

## ಝಕಾತ್ ತೆರಿಗೆ

ಇಸ್ಲಾಮ್ ಸಾಮಾಜಿಕ ಆರ್ಥಿಕ ಏಳಿಗೆಗೆ ಝಕಾತ್ ಎಂಬ ತೆರಿಗೆಯನ್ನು ವಿಧಿಸಿದೆ. ಝಕಾತ್ ಮುಸ್ಲಿಮ್ ಸರಕಾರ ವಿಧಿಸುವ ತೆರಿಗೆಯಾಗಿದೆ. ಈ ತೆರಿಗೆ ಲಾಭದ ಮೇಲೆ ಮಾತ್ರವಲ್ಲ ಭಂಡವಾಳದ ಮೇಲೆ ಸಹ ವಿಧಿಸಲಾಗಿದೆ. ನಿಷ್ಕ್ರಿಯೆಯಾಗಿರುವ ಸಂಪತ್ತಿನ ಮೇಲೆ ತೆರಿಗೆ ವಿಧಿಸಲಾಗಿದೆ. ಕಾರ್ಯನಿರತವಾಗಿರುವ ಸಂಪತ್ತಿನ ಮೇಲೆ ತೆರಿಗೆ ಇಲ್ಲ. ಇಸ್ಲಾಮ್ ಧರ್ಮ ಪ್ರಕಾರ ಸಂಪತ್ತನ್ನು ಗಳಿಸಿ ಕೊಡುವ ಎಲ್ಲವೂ ದೇವನು ಸಮಾಜಕ್ಕೆ ನೀಡಿದ ಕೊಡುಗೆಯಾಗಿದೆ. ಆದುದರಿಂದ ಇಸ್ಲಾಮ್ ಇವುಗಳ ಮೇಲೆ ಯಾರ ಮಾಲಿಕತ್ವವನ್ನೂ ಅಂಗೀಕರಿಸುವುದಿಲ್ಲ. ಅವುಗಳನ್ನು ವಿಶ್ವಸ್ತ ನಿಧಿಗಳೆಂದು ಪರಿಗಣಿಸಲಾಗಿದೆ. ಆದುದರಿಂದ ಈ ದೇವದತ್ತ ಕೊಡುಗೆಗಳನ್ನು ಸಂಪತ್ತನ್ನು ಗಳಿಸಲು ವಿನಿಯೋಗಿಸಿದರೆ ಕಾರ್ಮಿಕನಿಗೆ ಮಜೂರಿ ನೀಡಲಾಗಿದೆ; ಆದುದರಿಂದ ಅವನ ಪಾಲು ಮುಕ್ತಾಯವಾಗಿದೆ ಎಂದು ಹೇಳಬಾರದು. ದೇವನ ಕೊಡುಗೆಯ ಪಾಲು ಇನ್ನು ಸಹ ಕೊಡಲಿಕ್ಕಿದೆ; ಅದನ್ನು ಝಕಾತ್ ರೂಪದಲ್ಲಿ ಕೊಡಬೇಕು. ಹಾಗೆ ಮಾಡದಿದ್ದರೆ ನಿಮಗೆ ಹಕ್ಕು ಇಲ್ಲದುದನ್ನು ನೀವು ಬಳಸಿದಂತಾಗುವುದು. ಅದು ಸರಿಯಲ್ಲ.

ಝಕಾತ್ ಸಾಮಾನ್ಯ ತೆರಿಗೆಯಲ್ಲ. ಸರಕಾರದ ಇನ್ನಿತರ ಆಯಗಳೊಂದಿಗೆ ಅದನ್ನು ಸೇರಿಸಬಹುದು. ಝಕಾತ್ ವಸೂಲಾತಿಗೆ ಪ್ರತ್ಯೇಕ ವ್ಯವಸ್ಥೆ ಸಹ ಮಾಡಬಹುದು. ಹಾಗೆ ದೊರಕುವ ಹಣವನ್ನು ಈ ಕೆಳಗಿನ ಆವಶ್ಯಕತೆಗಳಿಗೆ ಮಾತ್ರ ವಿನಿಯೋಗಿಸಬೇಕು.

1) ವಿಜ್ಞಾನ ಮತ್ತು ವಿದ್ಯಾಭ್ಯಾಸದ ಅಭಿವೃದ್ಧಿಗೋಸ್ಕರ.

2) ಆವಿಷ್ಕಾರಗಳನ್ನು ಮಾಡುವವರಿಗೋಸ್ಕರ ಮತ್ತು ಸಮಾಜದ ಹಿತಕ್ಕಾಗಿ ಕೆಲಸ ಮಾಡುವ, ಆದರೆ ಹಣಕಾಸಿನ ಅನುಕೂಲವಿಲ್ಲದ ಜನರಿಗೋಸ್ಕರ.

3) ಬಡವರಿಗೂ ನಿರ್ಗತಿಕರಿಗೂ ಮತ್ತು ಸಾರ್ವಜನಿಕರಿಗೆ ಉಪಯೋಗವಾಗುವ ಕಾಮಗಾರಿಗಳಿಗೂ ಉಪಯೋಗಿಸಬಹುದು. ಅದನ್ನು ಕಾನೂನು ಕಾಯಿದೆ ವ್ಯವಸ್ಥೆಗೂ ಉಪಯೋಗಿಸಬಹುದು.

ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ ನನ್ನ ಸ್ನೇಹಿತರೊಬ್ಬರು ಲಂಡನ್‌ನಲ್ಲಿ ಬಡ್ಡಿ ನಿಷೇಧ ಬಗ್ಗೆ ಪ್ರಸ್ತಾಪಿಸಿದ್ದರು. ಬಡ್ಡಿ ಮಾಡುವುದಾದರೂ ಏನು? ಕೆಲವು ಜನರ ಕೈಗಳಲ್ಲಿ ಸಂಪತ್ತು ಶೇಖರಿಸುವಂತೆ ಬಡ್ಡಿ ಮಾಡುತ್ತದೆ. ನಾನು ದೂರಲು ಬಯಸುವುದಿಲ್ಲ. ಆದರೆ ಬಡ್ಡಿ ವ್ಯವಹಾರ ಮಾಡುವ ಜನರು ಅನ್ಯರ ಕಷ್ಟದಿಂದ ಲಾಭ ಪಡೆಯಲು ಯತ್ನಿಸುವಾಗ ಎಷ್ಟೆಷ್ಟು ಮಾನವೀಯ ಗುಣಗಳನ್ನು ಕಳೆದುಕೊಳ್ಳುತ್ತಾರೆಂದು ಅವರು ಹೇಳುವರು. ಇಸ್ಲಾಮ್ ಬಡ್ಡಿಯನ್ನು ನಿಷಿದ್ಧಗೊಳಿಸಿದರೂ ಸಾಲ ನೀಡುವಿಕೆಯನ್ನು ನಿಷಿದ್ಧಗೊಳಿಸಿಲ್ಲ. ಅದು ಖರ್‌ಝುಯೆ ಹಸನ (ಚಲೋದಾದ ಸಾಲ) ಎಂಬ ಉತ್ತಮ ವ್ಯವಸ್ಥೆಯನ್ನು ರೂಪಿಸಿದೆ. ಆಧ್ಯಾತ್ಮಿಕ ವ್ಯವಸ್ಥೆಯಲ್ಲಿ ನೀವು ನಿಮ್ಮ ಸ್ವಂತ ಏಳಿಗೆಗೋಸ್ಕರ ಪ್ರಯತ್ನ ಮಾಡಬೇಕಾಗಿದೆ. ಆದುದರಿಂದ ಸಮಾಜದ ಸದಸ್ಯರಿಗೆ ನಿಬಡ್ಡಿ ಸಾಲ ನೀಡಲು ಪ್ರೋತ್ಸಾಹಿಸಲಾಗಿದೆ. ಸಾಲ ನೀಡುವಾಗ ಬರೆದು ದಾಖಲಿಸಬೇಕು. ಸಾಲ ಪತ್ರವನ್ನು ಸಾಲ ಕೊಡುವವನಲ್ಲ ಸಾಲ ಪಡಕೊಳ್ಳುವವನು ಹೇಳಿ ಬರೆಸಬೇಕು. ಇದರ ಬಗ್ಗೆ ಬಹುತೇಕ ಮುಸ್ಲಿಮರು ಅರಿತಿಲ್ಲ.

## ಒಂದು ಇನ್‌ಶೂರೆನ್ಸ್ ವ್ಯವಸ್ಥೆ

ಇಸ್ಲಾಮ್ ಒಂದು ಇನ್‌ಶೂರೆನ್ಸ್ ವ್ಯವಸ್ಥೆಯನ್ನು ಜಾರಿಗೊಳಿಸಿದೆ. ಬೇರೆ ಯಾವ ಸಮಾಜದಲ್ಲೂ ಇದನ್ನು ಕಾಣಲಾರಿರಿ. ಒಬ್ಬನು ತನ್ನ ಖರ್ಚು ವೆಚ್ಚಗಳನ್ನು ಸಂಪಾದಿಸಿಕೊಳ್ಳಲು ಸಾಕಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗದಿದ್ದರೆ ಸರಕಾರ ಆತನ ವಾರೀಸುದಾರರನ್ನು – ಎಂದರೆ ಸಂಪತ್ತು ಇದ್ದರೆ ವಾರೀಸುದಾರರಾಗಬಹುದಾದ ಜನರನ್ನು – ಆತನ ಖರ್ಚು ವೆಚ್ಚಗಳನ್ನು ವಹಿಸಲು ನಿರ್ಬಂಧಿಸಬೇಕು. ಇದಕ್ಕಿಂತ ದೊಡ್ಡ ಇನ್‌ಶೂರೆನ್ಸ್ ಬೇರೆ ಏನಿದೆ?

## ಕೀಳರಿಮೆಗೆ ಸ್ಥಾನವಿಲ್ಲ

ಇಸ್ಲಾಮ್ ಉಪದೇಶಿಸುವುದೇನೆಂದರೆ, ಯಾವುದೇ ಜನಾಂಗ ತನ್ನದು ಶ್ರೇಷ್ಠ ಜನಾಂಗ ಎಂದು ಗಣಿಸಿ ಅನ್ಯ ಜನಾಂಗದವರನ್ನು ತನಗಿಂತ ಕೀಳು ಎಂದು ಭಾವಿಸಬಾರದು. ಅವರನ್ನು ಅಪಹಾಸ್ಯ ಮಾಡಬಾರದು. ಇಸ್ಲಾಮ್ ಕೆಲವರ ವೈಯಕ್ತಿಕ ಶ್ರೇಷ್ಠತೆ ಬಗ್ಗೆ ಮಾತ್ರ ಪ್ರತಿಪಾದಿಸಿದೆ. ಕೆಲವು ಕ್ಷೇತ್ರಗಳಲ್ಲಿ ಅದನ್ನು ಕಡೆಗಣಿಸಿದರೆ ಹಾನಿ ಉಂಟಾಗಬಹುದು.

ಇಸ್ಲಾಮ್ ಖಿಲಾಫತ್ ವ್ಯವಸ್ಥೆಯನ್ನು ಅಂಗೀಕರಿಸಿದೆ. ಖಲೀಫರಿಗೆ ಖಲೀಫರೆಂಬ ಸ್ಥಾನದಲ್ಲಿ ಕೆಲವು ವಿಶಿಷ್ಟ ಅಧಿಕಾರಗಳು ಇವೆ. ಆದರೆ ವ್ಯಕ್ತಿ ಎಂಬ ನೆಲೆಯಲ್ಲಿ ಖಲೀಫರು ಇತರ ಮುಸ್ಲಿಮರಿಗಿಂತ ಶ್ರೇಷ್ಠರಲ್ಲ. ಇಸ್ಲಾಮಿನ ದ್ವಿತೀಯ ಖಲೀಫರಾಗಿದ್ದ ಹಝ್ರತ್ ಉಮರರಿಗೆ(ರ) ವಿರುದ್ಧವಾಗಿ ಒಬ್ಬ ಮುಸ್ಲಿಮನು ಮೊಕದ್ದಮೆ ದಾಖಲಿಸಿದ್ದನು. ಖಾಝಿಯ ನ್ಯಾಯಾಲಯಕ್ಕೆ ಖಲೀಫರಾದ ಹಝ್ರತ್ ಉಮರ್(ರ) ಆಗಮಿಸಿದಾಗ ಖಾಝಿ ಅವರಿಗೆ ವಂದಿಸಿ ತನ್ನ ಸಮೀಪ ಬಂದು ಕುಳಿತುಕೊಳ್ಳಲು ಹೇಳಿದರು. ಹಝ್ರತ್ ಉಮರ್(ರ) ಖಾಝಿಯ ವರ್ತನೆ ಬಗ್ಗೆ ಅಸಂತೃಪ್ತಿ ಸೂಚಿಸಿ ತನ್ನ ವಿರುದ್ಧ ಮೊಕದ್ದಮೆ ಹೂಡಿದವನ ಸಮೀಪವೇ ನಿಂತು ಖಾಝಿಯೊಂದಿಗೆ ಹೇಳಿದರು: "ವೈಯಕ್ತಿಕವಾಗಿ ನೀವು ದೂರುಗಾರ ಮತ್ತು ನನ್ನ ಮಧ್ಯೆ ತಾರತಮ್ಯ ಭಾವದಿಂದ ವರ್ತಿಸಬಾರದು."

ಸಾಮಾಜಿಕ ವ್ಯವಹಾರಗಳಲ್ಲಿ ಮುಖ್ಯವಾದುದು ವಿವಾಹವಾಗಿದೆ. ಇಸ್ಲಾಮ್ ಇದರ ಬಗ್ಗೆ ಸವಿಸ್ತಾರವಾಗಿ ವಿವರಿಸಿದೆ. ಮದುವೆಯ ಅಸ್ತಿಭಾರ ಭೌತಿಕವಾಗಿದೆ. ಅದು ವ್ಯಕ್ತಿಗಳನ್ನು ಮಾತ್ರವಲ್ಲ ಕುಟುಂಬಗಳನ್ನೂ ಸಮಾಜವನ್ನೂ ಬಾಧಿಸುವಂತಹದ್ದಾಗಿದೆ. ಇಸ್ಲಾಮ್ ಮಕ್ಕಳ ಆರೈಕೆಯ ಬಗ್ಗೆ ಸಹ ಉಪದೇಶಿಸಿದೆ.

## ಸರಕಾರ

ಸರಕಾರದ ಮುಖ್ಯಾಧಿಕಾರಿ ಖಲೀಫರಾಗಿದ್ದಾರೆ. ಅತ್ಯಂತ ಶ್ರೇಷ್ಠರನ್ನು ಖಲೀಫರಾಗಿ ಆಯ್ಕೆ ಮಾಡಲಾಗುತ್ತಿದೆ. ಸರಕಾರ ಮತ್ತು ಪ್ರಜೆಗಳ ಮಧ್ಯೆ ಸೌಹಾರ್ದಮಯ ಸಂಬಂಧವಿರಬೇಕು. ಇಸ್ಲಾಮ್ ಹೇಳುವುದೇನೆಂದರೆ, ಒಂದು ದೇಶದಲ್ಲಿ ಒಂದು ವ್ಯವಸ್ಥೆಯ ಸರಕಾರ ಜಾರಿಗೊಂಡರೆ ಆ ದೇಶದ ಪ್ರಜೆಗಳು ಸರಕಾರದ ವಿರುದ್ಧ ದಂಗೆಯೇಳಬಾರದು. ಈ ಕಾರಣದಿಂದ ಕೆಲವು ಜನಾಂಗಗಳಿಗೆ ಕಷ್ಟ ಉಂಟಾಗಬಹುದಾದರೂ ಈ ತತ್ವವನ್ನು ಪಾಲಿಸಬೇಕು. ಪ್ರಜೆಗಳು ತಮ್ಮ ಕಷ್ಟಗಳನ್ನು ಪ್ರತಿನಿಧಿ ಸಂಘಗಳ ಮೂಲಕ ಸರಕಾರದ ಅವಗಾಹನೆಗೆ ತರಬೇಕು. ಹಿಂಸಾಚಾರ ನಡೆಸಿ ತಮ್ಮ ಆವಶ್ಯಕತೆಗಳನ್ನು ಪ್ರಜೆಗಳು ಸರಕಾರದ ಗಮನಕ್ಕೆ ತರಬಾರದು.

ಅಂತರ್ರಾಷ್ಟ್ರೀಯ ಸಂಬಂಧಗಳ ಬಗ್ಗೆ ಪವಿತ್ರ ಖುರ್‌ಆನ್ ಪ್ರತಿಪಾದಿಸುತ್ತದೆ. ಇಸ್ಲಾಮ್ ಏಕ ಲೋಕವನ್ನು ಅಥವಾ ಜಾಗತಿಕ ಒಗ್ಗೂಡಿದ ದೇಶಗಳ ಕಲ್ಪನೆಯನ್ನು ಮುಂದಿರಿಸುತ್ತದೆ. ಇದರ ಬಗ್ಗೆ ಪವಿತ್ರ ಖುರ್‌ಆನ್ ನೀಡುವ ಆಜ್ಞೆ ಹೀಗಿದೆ: ಎರಡು ದೇಶಗಳು ಜಗಳವಾಡಿದರೆ ಉಳಿದ ಮುಸ್ಲಿಮ್ ದೇಶಗಳು ಆ ದೇಶಗಳು ರಾಜಿ ಮಾಡಿಕೊಳ್ಳಲು ಪ್ರಸ್ತಾಪ ನೀಡಬೇಕು. ಯಾವುದಾದರೂ ದೇಶ ರಾಜಿ ಪ್ರಸ್ತಾಪವನ್ನು ಅಂಗೀಕರಿಸದಿದ್ದರೆ ಉಳಿದ ದೇಶಗಳು ಆ ದೇಶದ ವಿರುದ್ಧ ಹೋರಾಡಿ ರಾಜಿಗೆ ಸಮ್ಮತಿಸುವಂತೆ ಮಾಡಬೇಕು. ರಾಜಿ ಮಾಡಿಸಿದ ದೇಶಗಳು ಯಾವುದೇ ರೀತಿ ತಮ್ಮ ಲಾಭಕ್ಕೋಸ್ಕರ ಪ್ರಯತ್ನಿಸಬಾರದು. ಜಗಳ ಪ್ರಾರಂಭಿಸಿದ ದೇಶಗಳು ತಮ್ಮ ಸಮಸ್ಯೆಗಳನ್ನು ಪರಿಹರಿಸಿ ಒಪ್ಪಂದ ಮಾಡಿಕೊಳ್ಳುವಂತೆ ಮಾಡಬೇಕು.

ಶಾಂತಿಯ ಒಪ್ಪಂದದ ಶರತ್ತುಗಳು ಅನ್ಯಾಯ ಭರಿತವಾದುದರಿಂದ ಇನ್ನೊಂದು ಯುದ್ಧಕ್ಕೆ ತಯಾರಿಯನ್ನು ನಡೆಸುತ್ತಿರುವುದು ಆತಂಕಕರವಾಗಿದೆ. ನಾನು ವಿವರಿಸಿದ ಉಪದೇಶಗಳನ್ನು ಅನುಸರಿಸುತ್ತಿದ್ದರೆ ಇನ್ನೊಂದು ಯುದ್ಧಕ್ಕೆ ಕಾರಣ ಉಂಟಾಗುತ್ತಿರಲಿಲ್ಲ. ಯುದ್ಧದ ವಿರುದ್ಧ ಶಾಂತಿ ಸ್ಥಾಪಿಸಲು ಮೂಲಭೂತವಾದ ತತ್ವ ನಾನು ವಿವರಿಸಿದುದಾಗಿದೆ.

## ಅಹ್ಮದಿಯ್ಯತ್ ಜಯಶಾಲಿಯಾಗುವುದು

ಇಸ್ಲಾಮ್ ಮತ್ತು ಅಹ್ಮದಿಯ್ಯತ್ ಸಂದೇಶ ಮೇಲೆ ವಿವರಿಸಿದಂತಾಗಿದೆ. ಅಹ್ಮದಿಯ್ಯತ್ ವಿರುದ್ಧ ಉದ್ದೇಶಪೂರ್ವಕವಾಗಿ ಅಥವಾ ತಪ್ಪು ಗ್ರಹಿಕೆಗಳಿಂದ ಅಪಪ್ರಚಾರವನ್ನು ಎಷ್ಟು ನಡೆಸಿದರೂ ಸತ್ಯವು ನಿಶ್ಚಯವಾಗಿಯೂ ಜಯಿಸುವುದು. ಚರಿತ್ರೆ ನಮಗೆ ತಿಳಿಸುವುದೇನೆಂದರೆ, ಅಪಪ್ರಚಾರ ನಡೆಸುವವರು ಮತ್ತು ಹಿಂಸಾಚಾರ ಮಾಡುವವರು ಅಪಪ್ರಚಾರಕ್ಕೆ ಗುರಿಯಾದವರ ಮತ್ತು ಹಿಂಸಾಚಾರಕ್ಕೆ ಈಡಾದವರ ಸ್ಥಿತಿಗೆ ತಳ್ಳಲ್ಪಟ್ಟರು. ಅಪಪ್ರಚಾರ ಮತ್ತು ಹಿಂಸಾಚಾರಕ್ಕೆ ಗುರಿಪಡಿಸಿ ಯಾವುದೇ ಧಾರ್ಮಿಕ ಸಮುದಾಯವನ್ನು ನಾಶ ಮಾಡಲು ಎಂದೂ ಸಾಧ್ಯವಾಗಲಿಲ್ಲ. ನೀವು ಒಂದು ವಿಷಯ ನೆನಪಿಡಿರಿ. ಯಾವುದೆಲ್ಲ ಪರೀಕ್ಷೆಗಳಿಗೆ ಒಬ್ಬನು ಗುರಿಯಾಗುತ್ತಾನೋ ಅದು ಆತನಗೆ ತರಬೇತಿ ನೀಡಲು ಮತ್ತು ವಿಜಯಕ್ಕೆ ಸಿದ್ಧಗೊಳಿಸಲಿಕ್ಕೋಸ್ಕರವಾಗಿದೆ. ನಾನು ದೃಢವಾಗಿ ನಂಬುತ್ತೇನೆ– ನಮ್ಮ ಜಮಾಅತ್ ಈಗ ದಾಟಿ ಹೋಗುತ್ತಿರುವ ಪರೀಕ್ಷೆಯ ಘಟ್ಟವು ಮುಂದೆ ನಮ್ಮ ಭುಜಗಳ ಮೇಲೆ ಹೊರಿಸಲ್ಪಡುವ ಜವಾಬ್ದಾರಿಗಳನ್ನು ನಿರ್ವಹಿಸಲು ನಮ್ಮನ್ನು ಸಿದ್ಧರನ್ನಾಗಿ ಮಾಡಲಿಕ್ಕೋಸ್ಕರವಾಗಿದೆ. ನಾವು ಸತ್ಯದ ದೀವಟಿಗೆಗಳನ್ನು ಎತ್ತಿ ಹಿಡಿಯುವವರೂ ಮಾನವರ ಆಧ್ಯಾತ್ಮಿಕ ನಾಯಕರಾಗಲೂ ಇದು ಆವಶ್ಯಕವಾಗಿದೆ. ಭೂಮಿಯ ದೂರ ದೂರದ ಎಲ್ಲೆಗಳ ತನಕ ಸತ್ಯ ಸಂದೇಶವನ್ನು ತಲಪಿಸಲು ನಾವು ಪರೀಕ್ಷಿಸಲ್ಪಡುವುದು, ಅಪಪ್ರಚಾರಕ್ಕೆ ಗುರಿಯಾಗುವುದು ಮತ್ತು ಎಲ್ಲ ರೀತಿಯ ಅನಾನುಕೂಲತೆಗಳಿಗೆ ಈಡಾಗುವುದು ಆವಶ್ಯಕವಾಗಿದೆ. ನಾವು ನಮ್ಮ ವಿರುದ್ಧ ಮಾಡಲಾಗುವ ಅಪಪ್ರಚಾರಗಳನ್ನೂ ಹಿಂಸಾಚಾರಗಳನ್ನೂ ಸಹಿಸಿ ಮುಂದುವರಿದರೆ ನಮ್ಮ ಮೇಲೆ ಹೊರಿಸಲಾದ ಜವಾಬ್ದಾರಿಗಳನ್ನು ಈಡೇರಿಸುವವರಾಗುವೆವು. ಆ ಅಗ್ನಿಯನ್ನು ದಾಟಿ ಹೋಗದೆ ನಾವು ನಮಗೆ ವಹಿಸಲಾದ ಹೊಣೆಗಾರಿಕೆಯನ್ನು ಈಡೇರಿಸಲು ಯೋಗ್ಯತೆ ಹೊಂದಲಾರೆವು. ನಾವು ಸೇವೆ ಮೂಲಕ ನಮ್ಮನ್ನು ಅರ್ಹರನ್ನಾಗಿ ಮಾಡಬೇಕು.

ಹಿಂಸಾಚಾರಗಳಿಗೆ ಈಡಾದ ನಾವು ಶುದ್ಧೀಕರಿಸಲ್ಪಡುವೆವು. ಬಾಹ್ಯವಾಗಿ ನಡೆಸುವ ನಮ್ಮ ಕೆಲಸಗಳು ಮಾನವರ ಉತ್ತಮ ಹಿತವನ್ನು ಈಡೇರಿಸುವಂತೆ ಮಾಡುವುದು ಮತ್ತು ಮಾನವರಿಗೆ ಜ್ಞಾನ ದರ್ಶನ ನೀಡುವವರನ್ನಾಗಿ ನಮ್ಮನ್ನು ಮಾಡುವುದು.

# ತಾಯಿಯೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಲು ಉಪದೇಶ

## ಒಬ್ಬ ಅಹ್ಮದೀ ಸಹೋದರನಿಗೆ ಹಝ್ರತ್ ವಾಗ್ದತ್ತ ಮಸೀಹ್ ಅಲೈಹಿಸ್ಸಲಾಮ್ ಬರೆದ ಪತ್ರ

ನೀನು ನಿನ್ನ ತಾಯಿಯ ಸೇವೆ ಮಾಡುತ್ತಿಲ್ಲ, ಅವಳೊಂದಿಗೆ ಕಠಿಣವಾಗಿ ವರ್ತಿಸುತ್ತಿದ್ದೀಯಾ ಮತ್ತು ಅವಳನ್ನು ತಳ್ಳುತ್ತೀಯಾ ಎಂಬ ಮಾತು ಕೇಳಿ ನನಗೆ ಬಹಳ ದುಃಖವಾಯಿತು ಹಾಗೂ ಮನಸ್ಸಿಗೆ ತುಂಬ ನೋವಾಯಿತು. ನೆನಪಿಡು, ಯಥಾರ್ಥ ದೀನಿನ ರೀತಿ ಇದಲ್ಲ. ದೇವನು ಮತ್ತು ಅವನ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮರ ನಂತರ ತಾಯಿಯ ಹಕ್ಕಿಗೆ ಸಮಾನ ಯಾವುದೇ ಹಕ್ಕಿಲ್ಲ. ತಾಯಿಯನ್ನು ಬೈಯ್ಯುವವನು, ಅವಳ ಸೇವೆ ಮಾಡದವನು ಮತ್ತು ಅವಳನ್ನು ಅನುಸರಿಸದವನು ಖಂಡಿತವಾಗಿಯೂ ನರಕವಾಸಿಯಾಗಿರುವನು ಎಂದು ಅಲ್ಲಾಹನ ವಚನಗಳಿಂದ ತಿಳಿದುಬರುತ್ತದೆ. ಆದ್ದರಿಂದ ನೀನು ದೇವನಿಗೆ ಭಯಪಡು, ಮರಣದ ಯಾವುದೇ ಭರವಸೆ ಇಲ್ಲ. ಅವಿಶ್ವಾಸಿಯಾಗಿ ಮರಣ ಹೊಂದುವಂತಾಗದಿರಲಿ. ತಂದೆ ತಾಯಂದಿರ ಕಾಲಿನಡಿಯಲ್ಲಾಗಿದೆ ಸ್ವರ್ಗವೆಂದು ಹದೀಸುಗಳಲ್ಲಿ ಬಂದಿದೆ. ಹದೀಸಿನಲ್ಲಿ ಹೀಗೆ ಸಹ ಬಂದಿದೆ: ಒಬ್ಬ ವ್ಯಕ್ತಿಯ ತಾಯಿಗೆ ಒಂದು ರಾತ್ರಿ ಬಾಯಾರಿಕೆಯಾಯಿತು. ಅವರ ಮಗ ಅವರಿಗೆ ನೀರು ತೆಗೆದುಕೊಂಡು ಬಂದನು, ಆದರೆ ಅವರು ನಿದ್ದೆ ಹೋಗಿದ್ದರು. ತನ್ನ ತಾಯಿಯನ್ನು ಎಬ್ಬಿಸುವುದು ಸರಿಯಲ್ಲ ಎಂದು ಅವನು ಭಾವಿಸಿದನು. ರಾತ್ರಿಯ ಯಾವುದೇ ಸಮಯದಲ್ಲಿ ತಾಯಿಗೆ ನೀರಿನ ಆವಶ್ಯಕತೆ ಬಂದು ತೊಂದರೆ ಉಂಟಾಗದಿರಲಿಕ್ಕಾಗಿ ಅವನು ರಾತ್ರಿ ಪೂರ್ತಿ ನೀರಿನೊಂದಿಗೆ ಅವರ ಬಳಿಯಲ್ಲೇ ಇದ್ದನು. ದೇವನು ಅವನ ಸೇವೆಯ ಕಾರಣ ಅವನ ಪಾಪಗಳನ್ನು ಕ್ಷಮಿಸಿದನು.

ಆದ್ದರಿಂದ ನಿನ್ನ ಈ ರೀತಿ ಸರಿಯಲ್ಲ ಎಂದು ನೀನು ತಿಳಿ. ಕೊನೆಗೆ ಒಂದು ಯಾತನೆಗೆ ಗುರಿಯಾಗುತ್ತೀಯಾ. ನಿನ್ನ ತಾಯಿಯ ಸೇವೆ ಮಾಡಲು ಮತ್ತು ತಾಯಿಯನ್ನು ಬೈಯ್ಯದಿರಲು ನಿನ್ನ ಪತ್ನಿಗೆ ಸಹ ಹೇಳು. ಇದರಿಂದ ಅವಳು ಹಿಂದೆ ಸರಿಯದಿದ್ದರೆ ಅವಳಿಗೆ ತಲಾಖ್ ಕೊಡು. ನೀನು ನನ್ನ ಈ ಉಪದೇಶಗಳನ್ನು ಅನುಸರಿಸದಿದ್ದರೆ ನಿನ್ನ ಮರಣದ ವಾರ್ತೆ ನನಗೆ ಬರುವುದು ಎಂಬ ಭಯ ನನಗೆ ಇದೆ. ದೇವನ ಶಿಕ್ಷೆ ಭೂಮಿಗೆ ಬಂದದ್ದನ್ನು ಮತ್ತು ಪ್ಲೇಗ್ ರೋಗ ಲೋಕವನ್ನು ತಿನ್ನುತ್ತಿರುವುದನ್ನು ನೀನು ಕಾಣುತ್ತಿಲ್ಲವೇ? ಈ ಕೆಟ್ಟ ವರ್ತನೆಗಳ ಕಾರಣ ನೀನು ಪ್ಲೇಗ್ ರೋಗಕ್ಕೆ ಬಲಿಯಾಗದಿರಲಿ. ನೀನು ನಿನ್ನ ಧನದಿಂದ ನಿನ್ನ ತಾಯಿಯ ಸೇವೆ ಮಾಡಿದರೆ ದೇವನು ನಿನಗೆ ಅನುಗ್ರಹ ನೀಡುವನು. ಅವಳು ಪ್ರಾರ್ಥನೆ ಮತ್ತು ಬಹಳ ಸಂಕಷ್ಟದೊಂದಿಗೆ ನಿನ್ನನ್ನು ಸಾಕಿದ ಅದೇ ತಾಯಿಯಾಗಿದ್ದಾಳೆ. ಸಕಲ ಲೋಕಕ್ಕಿಂತ ಅಧಿಕ ನಿನ್ನನ್ನು ಅವಳು ಪ್ರೀತಿಸಿದಳು.

ಆದ್ದರಿಂದ ದೇವನು ಈ ಪಾಪವನ್ನು ಕ್ಷಮಿಸಲಿಕ್ಕಿಲ್ಲ. ಬೇಗನೆ ಪಶ್ಚಾತ್ತಾಪಪಡು, ಬೇಗನೆ ಪಶ್ಚಾತ್ತಾಪ ಮಾಡಿಕೊಳ್ಳು. ಇಲ್ಲದಿದ್ದರೆ ಶಿಕ್ಷೆ ಸಮೀಪವಿದೆ. ಆ ದಿನ ನೀನು ಲಜ್ಜಿತನಾಗುವೆ. ಲೌಕಿಕತೆ ಮತ್ತು ವಿಶ್ವಾಸ (ಈಮಾನ್) ಎರಡೂ ಇಲ್ಲವಾಗುವುವು. ನನಗೆ ಬಹಳ ಕಡಿಮೆ ಪುರಸತ್ತು ಇದ್ದೂ ಈ ಪತ್ರ ಬರೆದಿರುವೆನು. ಧಿಕ್ಕಾರಿಗಳ ಮೇಲೆ ಬೀಳುವ ಶಾಪದಿಂದ ದೇವನು ನಿನ್ನನ್ನು ರಕ್ಷಿಸಲಿ. ನಿನ್ನ ತಾಯಿಯ ಮಾತು ಕೆಟ್ಟದಾಗಿದ್ದರೂ ಅವಳು ಎಷ್ಟೇ ಕೆಟ್ಟದ್ದಾಗಿ ವರ್ತಿಸಿದರೂ ನಿನ್ನ ಪ್ರಕಾರ ಅವಳು ಎಷ್ಟೇ ಕೆಟ್ಟವಳಾಗಿದ್ದರೂ ಅವುಗಳೆಲ್ಲ ಅವಳಿಗೆ ಕ್ಷಮಿಸಲ್ಪಡುವುವು. ಏಕೆಂದರೆ ಅವಳ ಬಳಿ ಇವೆಲ್ಲಕ್ಕಿಂತ ದೊಡ್ಡದು ಇದೆ. ನನ್ನ ಈ ಲಿಖಿತವನ್ನು ಓದಿ ನೀನು ಪಶ್ಚಾತ್ತಾಪಪಡುವಿಯಾದರೆ ನೀನು ಸೌಭಾಗ್ಯವಂತನು. ಈ ಪತ್ರದಿಂದ ನೀನು ಪ್ರಯೋಜನ ಪಡೆಯುವುದಿಲ್ಲವಾದರೆ ನಿನ್ನ ದೌರ್ಭಾಗ್ಯ.

(ಆ ಅಹ್ಮದೀ ಸಹೋದರ ಹೇಳುತ್ತಾನೆ: ನಾನು ಈ ಪತ್ರವನ್ನು ಓದಿ ನಡುಗಿದೆ. ನನ್ನ ಶರೀರದಲ್ಲಿ ಕಂಪನ ಉಂಟಾಯಿತು. ತಾಯಿಯನ್ನು ಹೊಗಳುತ್ತಾ ಮತ್ತು ವಿನಂತಿಸುತ್ತಾ ನನ್ನ ತಾಯಿಯ ಕ್ಷಮೆ ಕೇಳಿದೆ, ಅವರನ್ನು ಸಂತೋಷಪಡಿಸಿದೆ, ಜೀವನ ಪೂರ್ತಿ ಅವರ ಅನುಸರಣೆ ಮತ್ತು ಅವರನ್ನು ಸಂತೋಷಪಡಿಸುವುದನ್ನು ನನ್ನ ಮುಖ್ಯ ಗುರಿಯಾಗಿರಿಸಿದೆ.) [ಅಲ್‌ಫಝ್ಲ್ ದಿನಪತ್ರಿಕೆ, ಡಿಸೆಂಬರ್ 1, 1938]

**ಸಂಗ್ರಹ ಮತ್ತು ಭಾಷಾಂತರ : ಮೌಲವಿ ಇನಾಮುಲ್ಲಾಹ್**

## ಹಿಂದಿನ ಸಂಚಿಕೆಗಳನ್ನು ತಿರುವಿ ಹಾಕಿದಾಗ......

**ಸಂಪಾದಕರಿಗೆ ಪತ್ರ**

### (ಡಿಸೆಂಬರ್ 1978 ಸಂಚಿಕೆಯಿಂದ)

ಮಾನ್ಯರೇ,

.....ಯುಗರಶ್ಮಿಯನ್ನು ಓದಿ ಅದರ ವೈಚಾರಿಕ ದೃಷ್ಟಿ, ವಿಶಾಲ ಮನೋಭಾವ, ಸರ್ವಸಮನ್ವಯಭಾವ, ನಿಷ್ಪಕ್ಷಪಾತ ಧೋರಣೆ ನಮಗೆ ಮೆಚ್ಚುಗೆಯಾಯಿತು. ಆದರೆ ಲೇಖನಗಳಲ್ಲಿ ಇನ್ನೂ ಸರಳೀಕೃತ ಸಾಲುಗಳು ಸ್ಪಂದಿಸಿದರೆ, ಸಂವಹನ ಸಮರ್ಥವಾಗುತ್ತದೆ ಎನಿಸುತ್ತದೆ. ಒಂದು ಸುಂದರ ಸಂಚಿಕೆ 'ಯುಗರಶ್ಮಿ', ಇದರ ಪ್ರಗತಿಯನ್ನು ಹೆಚ್ಚು ಕಾಣುವ ಅಭಿಲಾಷೆ ನಮಗಿದೆ.

**ರಾಮನಗರಂ.** **ಎಂ.ಜಿ. ನಾಗರಾಜ್**
**ಪ್ರಧಾನ ಕಾರ್ಯದರ್ಶಿ, ಕನ್ನಡ ಸಾಹಿತ್ಯ ಸಮಿತಿ**

*****

ಮಿತ್ರರೇ,

"ಯುಗರಶ್ಮಿ" ಬಹಳ ಚೆನ್ನಾಗಿದೆ. 'ದೇವರು– ಧರ್ಮ' ಎಂಬ ಜೀವನಾಡಿಯಿಂದ ಉಳಿದುಕೊಂಡಿರುವ ನಮ್ಮ ಜನಾಂಗದ ಸಂಸ್ಕೃತಿಗೆ ಪೋಷಕವಾಗಿರುವ ಬೋಧಪ್ರದ ವಿಚಾರಗಳನ್ನು ತಿಳಿಸುವುದರ ಮೂಲಕ ನನ್ನಂತಹ ಓದುಗನಿಗೆ "ಬುದ್ಧ್ಯಾವಿಮರ್ಶ್ಯಾ" ಎಂಬ ಶ್ರೀಕೃಷ್ಣನ ವಚನದಂತೆ, ಸ್ವಬುದ್ಧಿಯಿಂದ ವಿಚಾರ ಸಂಗ್ರಹ ಮಾಡಿಕೊಳ್ಳುವಂತೆ, ಜ್ಞಾನ ಪ್ರಸಾರಣೆಯ ಪ್ರಯೋಜನ ಕೊಡುತ್ತದೆ. "ವಾರ್ಯನ್ನ ಗೋದಾನೇನ, ಬ್ರಹ್ಮದಾನ ವಿಶಿಷ್ಯತೇ" ಎಂಬ ಶಾಸ್ತ್ರ ಸೂಕ್ತಿಯಂತೆ ಜನತಾ ಕಲ್ಯಾಣ ಸಾಧಿಸುವಲ್ಲಿ ತಮ್ಮ "ಯುಗರಶ್ಮಿ"ಯ ಮೂಲಕವಾದ ಬ್ರಹ್ಮದಾನ ಅರ್ಥಾತ್ ಜ್ಞಾನ ಪ್ರಚಾರವು ಆವಶ್ಯಕವೇ ಹೌದು. ಈ ಮೊದಲಿನ ಸಂಚಿಕೆಗಳನ್ನು ಓದಿ ವಿಚಾರ ಸಂಗ್ರಹದಿಂದ ಲಾಭ ಪಡೆದೆ. ಆ ಬಗೆಗೆ ನಿಮ್ಮುಪಕಾರವನ್ನು ನೆನೆಯುತ್ತೇನೆ.

**ಮಲ್ಪೆ.** **ಎಂ.ಎಸ್. ಸಾಮುಕ ಹರಿದಾಸ್**

*****

ಮಾನ್ಯ ಸಂಪಾದಕರೇ,

ಯುಗರಶ್ಮಿ ಬೇರೆ ಬೇರೆ ಧರ್ಮಗಳನ್ನು ಚೊಕ್ಕವಾಗಿ ತಿಳಿಸಲು ಇರುವ ಏಕೈಕ ಕನ್ನಡ ಪತ್ರಿಕೆ. ಹಿಂದೂ ಮುಸ್ಲಿಂ ಬಾಂಧವ್ಯವನ್ನು ಆದಷ್ಟು ಸಮೀಪಿಸಲು ಆ ಪತ್ರಿಕೆ ತುಂಬಾ ಸಹಕಾರಿಯಾಗಿದೆ ಎಂದು ನನ್ನ ಅಭಿಪ್ರಾಯ. ಆದಷ್ಟು ಬೇಗ ಈ ಪತ್ರಿಕೆಯನ್ನು ಮಾಸ ಪತ್ರಿಕೆಯನ್ನಾಗಿ ಮಾರ್ಪಡಿಸುವಿರೆಂದು ನಂಬಲೇ?

**ಉಡುಪಿ.** **ಓರ್ವ ಹಿಂದೂ ಓದುಗ**

*****

ಮಾನ್ಯರೇ,

.....ಸರ್ಕಾರ ಕಡ್ಡಾಯಗೊಳಿಸಿರುವ ಏಕ ಪತ್ನಿ ಕಾಯಿದೆಯಿಂದ ಕಂಗಾಲಾಗಿರುವ ಹಿಂದು ಗೃಹಸ್ಥರ ದುರವಸ್ಥೆಯನ್ನು ವಿವರಿಸಲು ನನಗೆ ಶಬ್ದಗಳೇ ದೊರಕುವುದಿಲ್ಲ. ನಾನು ಒಬ್ಬ ಹಿಂದೂ ಬ್ರಾಹ್ಮಣನಾಗಿದ್ದರೂ ಮುಸ್ಲಿಂ ವಿವಾಹ ನಿಯಮಗಳನ್ನು ಮೆಚ್ಚುತ್ತೇನೆ. ಬಹುಭಾರ್ಯೆಯರನ್ನು ಹೊಂದುವ ಹಕ್ಕು ಹಿಂದೂಗಳಿಗೆ ಪುರಾತನ ಕಾಲದಿಂದಲೂ ಇತ್ತು. ಪುನಃ ಈ ಹಕ್ಕು ನಮಗೆ ದೊರಕಬಹುದೆಂದು ಆಶಿಸುತ್ತೇವೆ.....

**ಬೆಂಗಳೂರು.** **ಎಸ್.ಆರ್. ವಾಸುದೇವಾಚಾರ್**

*****

### (ಮಾರ್ಚ್ 1979 ಸಂಚಿಕೆಯಿಂದ)

ಯುಗರಶ್ಮಿಯಲ್ಲಿ ಹಿಂದೂ – ಮುಸ್ಲಿಂ ಐಕ್ಯವನ್ನು ಉತ್ತಮ ರೀತಿ, ಶೈಲಿಯಲ್ಲಿ ಉದಾಹರಣೆ ಸಹಿತ ಚೆನ್ನಾಗಿ ವಿವರಿಸಲಾಗಿದೆ. ಹಾಗೆಯೇ ಮುಹಮ್ಮದ್ ಪೈಗಂಬರರ ನುಡಿಮುತ್ತುಗಳಲ್ಲಿ ಕೆಲವಂತು ನನಗೆ ತುಂಬಾ ಮೆಚ್ಚಿಗೆಯಾಯಿತು. ಈ ಪತ್ರಿಕೆಗೆ ಉತ್ತರೋತ್ತರ ಶ್ರೇಯಸ್ಸನ್ನು ಬಯಸುತ್ತೇನೆ.

**ಉಡುಪಿ.** **ಕೆ. ರಾಮಚಂದ್ರ**

*****

ಯುಗರಶ್ಮಿಯಲ್ಲಿ ಪ್ರಕಟವಾದ ಲೇಖನಗಳನ್ನು ಓದಿ ನನಗೆ ಬಹಳ ಮೆಚ್ಚುಗೆಯಾಯಿತು. ಇನ್ನೂ ಹೆಚ್ಚಿಗೆ ತಿಳಿದುಕೊಳ್ಳಲು ನನಗೆ ಕೆಲವು ಪುಸ್ತಕಗಳನ್ನು ಕಳುಹಿಸಿ ಕೊಡಬೇಕಾಗಿ ವಿನಂತಿ.

**ಶಿವಮೊಗ್ಗ.** **ಮುಜೀಬ್ ಅಹ್ಮದ್**

*****

ಇಸ್ಲಾಮಿನ ಬಗ್ಗೆ ತಿಳಿದುಕೊಳ್ಳಲು ನಾನು ಜಿಜ್ಞಾಸೆಯುಳ್ಳವನಾಗಿದ್ದೇನೆ. ಮುಹಮ್ಮದ್ ಪೈಗಂಬರರನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ನನಗೆ ದಯವಿಟ್ಟು ನೆರವು ನೀಡಿರಿ. ನನ್ನ ಕೇಳಿಕೆಯನ್ನು ಪೂರೈಸುವಿರೆಂದೂ ಸರಿಯಾದ ಪಥದಲ್ಲಿ ನನ್ನನ್ನು ಕೊಂಡೊಯ್ಯುವಿರೆಂದೂ ನಾನು ಭರವಸೆಪಡುತ್ತೇನೆ. ನಿಮ್ಮ ಯುಗರಶ್ಮಿ ಓದಿ ನನಗೆ ಈ ಇಚ್ಛೆಯುಂಟಾಗಿದೆ.

**ಮೈಸೂರ್.** **ಟಿ.ಎಂ.ಬ್ಯಾರಿ**

*****

ಯುಗರಶ್ಮಿಯ ಕೊಡುಗೆಗೆ ಕೃತಜ್ಞತೆಗಳು. ಹೊಸ ವರ್ಷ ನಿಮಗೆ ಅನುಗ್ರಹವನ್ನೂ ಆಯುರಾರೋಗ್ಯವನ್ನೂ ಕರ್ತವ್ಯ ನಿರ್ವಹಣೆಯಲ್ಲಿ ಸಂತೃಪ್ತಿಯನ್ನೂ ನೀಡಲಿಯೆಂದು ಹಾರೈಸುತ್ತೇನೆ.

**ಬೆಂಗಳೂರು.** **(ಶ್ರೀಮತಿ) ಆದಿಯಪ್ಪ**

ವಾರ್ತೆಗಳು

## ಅಹ್ಮದಿಯಾ ಜಮಾಅತಿನ ಪ್ರಗತಿ

ಇಷ್ಟರ ವರೆಗೆ ಅಹ್ಮದಿಯ್ಯತ್ 209 ದೇಶಗಳಲ್ಲಿ ಸ್ಥಾಪಿಸಲ್ಪಟ್ಟಿದೆ.

1984ರಿಂದ 2016ರ ವರೆಗೆ 118 ದೇಶಗಳಲ್ಲಿ ಅಹ್ಮದಿಯ್ಯತ್ ಸ್ಥಾಪಿತವಾಯಿತು.

ಪೆರುಗ್ವೆ ಮತ್ತು ಕೇಮನ್ ಐಲೇಂಡ್ಸ್ ಈ ವರ್ಷ ಸೇರ್ಪಡೆಯಾದ ಹೊಸ ದೇಶಗಳು.

ಪಾಕಿಸ್ಥಾನದ ಹೊರಗೆ 721 ಹೊಸ ಘಟಕಗಳು ಸ್ಥಾಪಿಸಲ್ಪಟ್ಟಿವೆ.

ನೈಜರ್, ಬೆನಿನ್, ಮಾಲಿ ಮೊದಲಾದ ದೇಶಗಳ 964 ಕಡೆಗಳಲ್ಲಿ ಅಹ್ಮದಿಯ್ಯತ್ ಸ್ಥಾಪನೆ.

120 ಹೊಸ ಮತ್ತು 179 ಹಳೆ ಮಸೀದಿಗಳ ಸೇರ್ಪಡೆ.

450 ಪ್ರಚಾರ ಕೇಂದ್ರಗಳ ಸ್ಥಾಪನೆ.

ಸೋಮಾಲಿಯನ್ ಭಾಷೆಯಲ್ಲಿ ಖುರ್ಆನ್ ತರ್ಜಮೆ. 58 ಭಾಷೆಗಳಲ್ಲಿ 891 ಪುಸ್ತಕಗಳ ಮತ್ತು ಕರಪತ್ರಗಳ ಪ್ರಕಟಣೆ.

ಲೋಕದಾದ್ಯಂತ 580 ಬುಕ್‌ಫೇರ್ಸ್, 1566 ಪ್ರದರ್ಶನಗಳು ಮತ್ತು 13000 ಬುಕ್‌ಸ್ಟಾಲ್‌ಗಳಲ್ಲಿ ಜಮಾಅತ್ ಭಾಗವಹಿಸಿದೆ.

ಲೋಕದಾದ್ಯಂತ 5000ಕ್ಕೆ ಮಿಕ್ಕಿದ ಲೇಖನಗಳು ವಿವಿಧ ವಾರ್ತಾ ಪತ್ರಿಕೆಗಳಲ್ಲಿ ಮತ್ತು ಮ್ಯಾಗಸಿನ್‌ಗಳಲ್ಲಿ ಪ್ರಕಟಗೊಂಡಿವೆ.

ಪವಿತ್ರ ಖುರ್ಆನಿನ 47 ಭಾಷೆಗಳ ತರ್ಜುಮೆ www.alislam.orgನಲ್ಲಿ ಲಭ್ಯ.

ಖಲೀಫರ ಶುಕ್ರವಾರದ ಜುಮುಅ ಖುತ್‌ಬ 18 ಭಾಷೆಗಳಲ್ಲಿ ಭಾಷಾಂತರಿಸಲ್ಪಡುತ್ತದೆ.

ಮಾಲಿ, ಬುರ್ಕಿನೋಫಾಸೋ, ಸಿಯೆರಾಲಿಯೋನ್ ದೇಶಗಳಲ್ಲಿ 20 ರೇಡಿಯೋ ಸ್ಟೇಶನ್‌ಗಳು.

ವಕ್ಫೆ ನೌ ಯೋಜನೆಯಲ್ಲಿ 3441 ಮಕ್ಕಳ ಹೊಸ ಸೇರ್ಪಡೆ. ಒಟ್ಟು ಮಕ್ಕಳ ಸಂಖ್ಯೆ: 60259. ಹುಡುಗರು 36,437 ಮತ್ತು ಹುಡುಗಿಯರು 23,822.

49 ದೇಶಗಳಲ್ಲಿ Humanity First ಸಮಾಜ ಸೇವೆಯ ದಾಖಲಾತಿ.

97000ಕ್ಕೆ ಮಿಕ್ಕಿದ ರೋಗಿಗಳಿಗೆ ಮೆಡಿಕಲ್ ಕ್ಯಾಂಪ್ ಮೂಲಕ ಶುಶ್ರೂಷೆ.

ಈ ವರ್ಷ 119 ದೇಶಗಳ 303 ಜನಾಂಗಗಳಿಗೆ ಸೇರಿದ 584000 ಮಂದಿ ಅಹ್ಮದಿಯ್ಯತ್ ಸ್ವೀಕರಿಸಿದ್ದಾರೆ.

ಪ್ರಥಮ ಸ್ಥಾನ ಮಾಲಿ ದೇಶಕ್ಕೆ– 140000 ಮಂದಿ. ಅದರ ನಂತರ ನೈಜೀರಿಯಾ 70000, ಸೆನೆಗಲ್ 24000, ಐವರಿಕೋಸ್ಟ್ 14000.

**(ಹಝ್ರತ್ ಖಲೀಫತುಲ್ ಮಸೀಹ್, ಯು.ಕೆ. ಜಲ್ಸಾ ಸಾಲಾನದ ದ್ವಿತೀಯ ದಿನ ಮಾಡಿದ ಭಾಷಣದಿಂದ).**

## ಖುದ್ದಾಮುಲ್ ಅಹ್ಮದಿಯಾ, ಅತ್‌ಫಾಲುಲ್ ಅಹ್ಮದಿಯಾ ಕರ್ನಾಟಕ ದಕ್ಷಿಣ ವಲಯ ಇಜ್ತಿಮಾ

ಬೆಂಗಳೂರು: ಕಳೆದ ಆಗಸ್ಟ್ 27 ಮತ್ತು 28ರಂದು ಖುದ್ದಾಮುಲ್ ಅಹ್ಮದಿಯಾ, ಅತ್‌ಫಾಲುಲ್ ಅಹ್ಮದಿಯಾ ಕರ್ನಾಟಕ ದಕ್ಷಿಣ ವಲಯ ಇಜ್ತಿಮಾ ಬೆಂಗಳೂರಿನಲ್ಲಿ ಜರಗಿತು.

27ರಂದು ತಹಜ್ಜುದ್ ನಮಾಝ್ ಅಹ್ಮದಿಯಾ ಮಸೀದಿಯಲ್ಲಿ ನಿರ್ವಹಿಸಲ್ಪಟ್ಟಿತು. ಮೌಲವಿ ಮೀರ್ ಅಬ್ದುಲ್ ಹಮೀದ್ ಸಾಹೇಬ್ ಮುಬಲ್ಲಿಗ್ ಬೆಂಗಳೂರು ದರ್ಸ್ ನೀಡಿದರು.

ನಾಇಬ್ ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ದಕ್ಷಿಣ ಭಾರತ ಜನಾಬ್ ಮುಸವ್ವಿರ್ ಅಹ್ಮದ್ ಸಾಹೇಬ್ ಧ್ವಜಾರೋಹಣ ಮಾಡಿದರು. ಅವರ ಅಧ್ಯಕ್ಷತೆಯಲ್ಲೇ ಉದ್ಘಾಟನಾ ಸಮಾರಂಭ ಜರಗಿತು. ಅಶ್ರಫ್ ಖಾನ್ ಸಾಹೇಬ್ ಸ್ವಾಗತ ಭಾಷಣ ಮಾಡಿದರು. ಝೋನಲ್ ಖಾಯಿದ್ ಯಂ. ಅಬ್ದುಸ್ಸಲಾಮ್ ಸಾಹೇಬ್ ಸಭಿಕರನ್ನು ಉದ್ದೇಶಿಸಿ ಮಾತನಾಡಿದರು. ಬೆಂಗಳೂರು ಜಮಾಅತಿನ ಅಮೀರ್ ಮುಸದ್ದಿಖ್ ಅಹ್ಮದ್ ಸಾಹೇಬ್ ಖುದ್ದಾಮ್‌ಗಳಿಗೆ ಉಪದೇಶಗಳನ್ನು ನೀಡಿದರು. ವಿವಿಧ ಶೈಕ್ಷಣಿಕ ಸ್ಪರ್ಧೆಗಳು ನಡೆದವು.

28ರಂದು ತಹಜ್ಜುದ್ ನಮಾಝ್ ನಿರ್ವಹಣೆ ಮೂಲಕ ಕಾರ್ಯಕ್ರಮ ಆರಂಭವಾಯಿತು. ಮೌಲವಿ ವಾಹಿದ್ ಸಾಹೇಬ್ ಮುಬಲ್ಲಿಗ್ ಶಿವಮೊಗ್ಗ ದರ್ಸ್ ನೀಡಿದರು.

ಹೊಂಬೇಗೌಡ ಮೈದಾನದಲ್ಲಿ ವಿವಿಧ ಕ್ರೀಡಾ ಸ್ಪರ್ಧೆಗಳು ನಡೆದವು. ನಾಇಬ್ ಸದರ್ ಸಾಹೇಬರು ಕ್ರೀಡಾ ಸ್ಪರ್ಧೆಗಳಿಗೆ ಸಂಬಂಧಿಸಿ ಪಾಲಿಸಬೇಕಾದ ನಿಯಮಗಳನ್ನು ವಿವರಿಸಿದರು.

ಸಾಯಂಕಾಲ ಮುಸವ್ವಿರ್ ಅಹ್ಮದ್ ಸಾಹೇಬರ ಅಧ್ಯಕ್ಷತೆಯಲ್ಲಿ ಸಮಾರೋಪ ಸಭೆ ಜರಗಿತು. ಮೌಲವಿ ಮೀರ್ ಅಬ್ದುಲ್ ಹಮೀದ್ ಸಾಹೇಬ್ ಸಭಿಕರನ್ನು ಉದ್ದೇಶಿಸಿ ಮಾತನಾಡಿದರು. ಅಶ್ರಫ್ ಖಾನ್ ಸಾಹೇಬ್ ಕೃತಜ್ಞತೆ ಸಲ್ಲಿಸಿದರು. ಮೌನ ಪ್ರಾರ್ಥನೆಯೊಂದಿಗೆ ಸಮಾರಂಭ ಮುಕ್ತಾಯವಾಯಿತು.

==========================================================

## ಮಜ್ಲಿಸ್ ಅನ್ಸಾರುಲ್ಲಾಹ್ ಇಜ್ತಿಮಾ ಬೆಂಗಳೂರು

ಬೆಂಗಳೂರು: ಆಗಸ್ಟ್ ದಿನಾಂಕ 7ರಂದು ಭಾನುವಾರ ಮಜ್ಲಿಸ್ ಅನ್ಸಾರುಲ್ಲಾಹ್ ಬೆಂಗಳೂರಿನ ಸ್ಥಳೀಯ ಇಜ್ತಿಮಾ ಅಹ್ಮದಿಯಾ ಮಸೀದಿಯಲ್ಲಿ ಜರಗಿತು.

ಪ್ರಾತಃಕಾಲ 11 ಗಂಟೆಗೆ ಉದ್ಘಾಟನಾ ಸಮಾರಂಭವು ಜ। ಮುಸದ್ದಿಖ್ ಸಾಹೇಬ್ ಅಮೀರ್ ಜಮಾಅತ್ ಅಹ್ಮದಿಯಾ ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಜ। ಖ್ವಾಜಾ ಕಮಾಲುದ್ದೀನ್ ಸಾಹೇಬ್ ನಾಇಬ್ ಝುಯೀಮ್‌ರವರ ಖುರ್‌ಆನ್ ಪಠಣದೊಂದಿಗೆ ಪ್ರಾರಂಭಗೊಂಡಿತು. ನಂತರ ಝುಯೀಮ್ ಮಜ್ಲಿಸ್ ಅನ್ಸಾರುಲ್ಲಾಹ್ ಜ। ಶಾರಿಖ್ ಮಜೀದ್ ಸಾಹೇಬ್ ಅಹದ್ ವಚನವನ್ನು ಬೋಧಿಸಿದರು. ಜ। ಮೆಹಮೂದ್ ಸೆಹಗಲ್ ಸಾಹೇಬ್ ಕವನ ಹಾಡಿದರು. ಮುಹಮ್ಮದ್ ಇಸ್ಮಾಈಲ್ ಮುಂತಝಿಮ್ ಉಮೂಮಿ ವಾರ್ಷಿಕ ವರದಿಯನ್ನು ಓದಿದರು. ಜನಾಬ್ ಖುರೇಶಿ ಅಬ್ದುಲ್ ಹಕೀಮ್ ಸಾಹೇಬ್ ಅನ್ಸಾರುಲ್ಲಾಹ್ ಕರ್ತವ್ಯಗಳ ಬಗ್ಗೆ ಭಾಷಣ ಮಾಡಿದರು. ಅಧ್ಯಕ್ಷರ ಭಾಷಣ ಹಾಗೂ ದುಆದೊಂದಿಗೆ ಉದ್ಘಾಟನಾ ಸಮಾರಂಭವು ಮುಕ್ತಾಯಗೊಂಡಿತು.

12:00 ಗಂಟೆಯಿಂದ 1:30ರ ವರೆಗೆ ಶೈಕ್ಷಣಿಕ ಸ್ಪರ್ಧೆಗಳು ನಡೆದವು. ಝುಹರ್, ಅಸರ್ ನಮಾಝ್ ನಿರ್ವಹಿಸಿದ ನಂತರ ಊಟದ ವ್ಯವಸ್ಥೆಯಿತ್ತು. 3:00 ಗಂಟೆಯಿಂದ 4 ಗಂಟೆಯವರೆಗೆ ದೈಹಿಕ ಸ್ಪರ್ಧೆಗಳು ನಡೆದವು.

ಸಮಾಪನಾ ಸಭೆ: ಸಂಜೆ 4:30ಕ್ಕೆ ಸಮಾಪನಾ ಸಭೆ ಜರಗಿತು. ಜ। ಶಾರಿಖ್ ಮಜೀದ್ ಸಾಹೇಬ್ ನಾಝಿಮ್ ಅನ್ಸಾರುಲ್ಲಾಹ್ ಅಧ್ಯಕ್ಷತೆಯನ್ನು ವಹಿಸಿದರು. ಜನಾಬ್ ಬರ್‌ಕತುಲ್ಲಾಹ್ ಸಾಹೇಬ್ ಖುರ್‌ಆನ್ ಪಠಿಸಿದರು. ಝುಯೀಮ್ ಅನ್ಸಾರುಲ್ಲಾಹ್‌ರವರಿಂದ ಅಹದ್ ವಚನ ಬೋಧಿಸಲಾಯಿತು. ಮುಹಮ್ಮದ್ ಇಸ್ಮಾಈಲ್ ಸಾಹೇಬ್ ಕವನ ಹಾಡಿದರು. ಜ। ಮೀರ್ ಅಬ್ದುಲ್ ಹಮೀದ್ ಸಾಹೇಬ್ ಮುಬಲ್ಲಿಗ್ ಸಾಂದರ್ಭಿಕ ಭಾಷಣ ಮಾಡಿದರು. ನಂತರ ಶೈಕ್ಷಣಿಕ ಹಾಗೂ ದೈಹಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಅಧ್ಯಕ್ಷರ ಭಾಷಣ ಹಾಗೂ ದುಆದೊಂದಿಗೆ ಇಜ್ತಿಮಾ ಕೊನೆಗೊಂಡಿತು.

==========================================================

## ಮಜ್ಲಿಸ್ ಅನ್ಸಾರುಲ್ಲಾಹ್ ಇಜ್ತಿಮಾ ಮಡಿಕೇರಿ

ಮಡಿಕೇರಿ: ಸೆಪ್ಟೆಂಬರ್ 3 ಮತ್ತು 4ರಂದು ಮಡಿಕೇರಿ ಮಜ್ಲಿಸ್ ಅನ್ಸಾರುಲ್ಲಾಹ್ ವತಿಯಿಂದ ಸ್ಥಳೀಯ ಇಜ್ತಿಮಾ ನಡೆಯಿತು. ಸೆಪ್ಟೆಂಬರ್ 3 ಶನಿವಾರ ಬೆಳಗ್ಗೆ 4:30ಕ್ಕೆ ತಹಜ್ಜುದ್ ನಮಾಝ್, ಸುಬಹಿ ನಮಾಝ್ ನಂತರ 8 ಗಂಟೆಗೆ ಮಡಿಕೇರಿ ಜೂನಿಯರ್ ಕಾಲೇಜಿನ ಮ್ಯಾನ್ಸ್ ಕಂಪೌಂಡಿನಲ್ಲಿ ಆಟೋಟ ಸ್ಪರ್ಧೆ ನಡೆಯಿತು. ಆಟೋಟ ಸ್ಪರ್ಧೆ ಮಡಿಕೇರಿ ಅಹ್ಮದಿಯಾ ಮುಸ್ಲಿಂ ಜಮಾಅತಿನ ಝಈಂ ಅನ್ಸಾರುಲ್ಲಾಹ್ ಜ। ಕೆ.ಎಂ. ಇಬ್ರಾಹಿಂ ಸಾಹೀಬರ ನೇತೃತ್ವದ ದುಆದೊಂದಿಗೆ ಪ್ರಾರಂಭವಾಯಿತು. ಕ್ರಿಕೆಟ್, ಫುಟ್‌ಬಾಲ್, ಓಟದ ಸ್ಪರ್ಧೆ, ಶಾಟ್‌ಪುಟ್, ಮ್ಯೂಝಿಕಲ್ ಚೇರ್, ಹಗ್ಗ ಜಗ್ಗಾಟ, ಬೆಲೂನ್ ರನ್ನಿಂಗ್ ಹಾಗೂ ವೇಗ ನಡೆಯುವುದು ಮುಂತಾದ ಆಟದ ಸ್ಪರ್ಧೆ ತುಂಬಾ ಸೊಗಸಾದ ರೀತಿಯಲ್ಲಿ ನಡೆಯಿತು.

ಸೆಪ್ಟೆಂಬರ್ 4 ಭಾನುವಾರ ಇಲ್‌ಮೀ ಸ್ಪರ್ಧೆ 11:30ಕ್ಕೆ ಶುರುವಾಯಿತು. ಖುರ್‌ಆನ್ ತಿಲಾವತ್, ಖಸೀದ, ನಝ್ಮ್, ಭಾಷಣ, ಹಾಗೂ ಕ್ವಿಝ್ ಸ್ಪರ್ಧೆ ನಡೆದವು. ತೀರ್ಪುಗಾರರಾಗಿ ಮಡಿಕೇರಿ ಅಹ್ಮದಿಯಾ ಜಮಾಅತಿನ ಮುಬಲ್ಲಿಗ್ ಜ। ಸಾದಲಿ ಸಾಹೇಬ್, ಗೋಣಿಕೊಪ್ಪ ಜಮಾಅತಿನ ಮೌಲವಿ ಮೌಲಾ ಸಾಹೇಬ್, ಗೋಣಿಕೊಪ್ಪ ಜಮಾಅತಿನ ಅಧ್ಯಕ್ಷರಾದ ಜ। ಮೆಹಬೂಬ್ ಸಾಹೇಬ್ ಹಾಗೂ ಮಡಿಕೇರಿ ಜಮಾಅತಿನ ಖಾಯಿದ್ ಜ। ಜೆ.ಎಂ. ಶರೀಫ್ ಸಾಹೇಬರು ಕಾರ್ಯ ನಿರ್ವಹಿಸಿದರು. ಈ ಕಾರ್ಯಕ್ರಮ ಮಡಿಕೇರಿ ಜಮಾಅತಿನ ಝಈಂ ಅನ್ಸಾರುಲ್ಲಾಹ್ ಜ। ಇಬ್ರಾಹಿಂ ಸಾಹೇಬರ ಸ್ವಾಗತ ಭಾಷಣದೊಂದಿಗೆ ಶುರುವಾಯಿತು.

ಸಮಾರೋಪ ಸಮಾರಂಭದಲ್ಲಿ ಜ। ಕೆ.ಎಂ. ಇಬ್ರಾಹಿಂ ಸಾಹೇಬ್, ಜ। ಮೌಲವಿ ಸಾದಲಿ ಸಾಹೇಬ್ ಮತ್ತು ಮಡಿಕೇರಿ ಜಮಾಅತಿನ ಅಧ್ಯಕ್ಷರಾದ ಜ। ಎಂ.ಬಿ. ಝಹೀರ್ ಅಹ್ಮದ್ ಸಾಹೇಬ್ ಉಪದೇಶ ಭಾಷಣ ಮಾಡಿದರು. ಝಈಂ ಅನ್ಸಾರುಲ್ಲಾಹ್ ಜ। ಇಬ್ರಾಹಿಂ ಸಾಹೇಬ್ ಕೃತಜ್ಞತೆ ಸಲ್ಲಿಸಿದರು. ಕೊನೆಗೆ ದುಆದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

---

ಓದಿದ್ದು

### ಭಯೋತ್ಪಾದನೆ ಹರಾಮ್: 1 ಲಕ್ಷ ಮೌಲ್ವಿಗಳಿಂದ ಫತ್ವಾ

ಢಾಕಾ, ಜೂ.19: ಬಾಂಗ್ಲಾದೇಶದಲ್ಲಿ ಹಿಂದೂಗಳು ಮತ್ತು ಜಾತ್ಯಾತೀತ ಬರಹಗಾರರ ಹತ್ಯೆಗೆ ಕಳವಳ ವ್ಯಕ್ತಪಡಿಸಿ ಒಂದು ಲಕ್ಷಕ್ಕೂ ಅಧಿಕ ಮೌಲ್ವಿಗಳು ಇಸ್ಲಾಂ ಭಯೋತ್ಪಾದನೆಯ ವಿರುದ್ಧ ಫತ್ವಾ ಹೊರಡಿಸಿದ್ದಾರೆ. ಇಸ್ಲಾಮ್ ಹೆಸರಿನಲ್ಲಿ ಉಗ್ರವಾದ ಮತ್ತು ಭಯೋತ್ಪಾದನೆ ನಡೆಸುವುದು 'ಹರಾಮ್' ಎಂದು ಫತ್ವಾದಲ್ಲಿ ಘೋಷಿಸಲಾಗಿದೆ. ಸುದ್ದಿಗೋಷ್ಠಿಯ ವೇಳೆ, ಇಸ್ಲಾಮಿಕ್ ವಿದ್ವಾಂಸರ ಸಂಘಟನೆಯ ಮುಖ್ಯಸ್ಥ ಮೌಲಾನಾ ಫರೀದ್ ಉದ್ದೀನ್ ಮಸೂದ್ ಅವರು ಫತ್ವಾ ಹೊರಡಿಸಿದ್ದು. 1,01,524 ಮೌಲ್ವಿಗಳು ಫತ್ವಾಕ್ಕೆ ಸಹಿ ಹಾಕಿದ್ದಾರೆ. ಇಸ್ಲಾಂ ಶಾಂತಿಪ್ರಿಯ ಧರ್ಮವಾಗಿದೆ. ಇಸ್ಲಾಂ ಯಾವತ್ತೂ ಭಯೋತ್ಪಾದನೆಯನ್ನು ಬೆಂಬಲಿಸುವುದಿಲ್ಲ ಎಂದು ಮಸೂದ್ ಹೇಳಿದ್ದಾರೆ.

**(ಉದಯವಾಣಿ 20–6–2016)**

*****

### ಆರೆಸ್ಸೆಸ್ ಶಾಲೆಗಳಲ್ಲಿ ಮುಸ್ಲಿಮರ ಸಂಖ್ಯೆ ಡಬಲ್

ಅಲಹಾಬಾದ್: ಉತ್ತರಪ್ರದೇಶದ 1,200 ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರೆಸ್ಸೆಸ್) ಶಾಲೆಗಳಲ್ಲಿ ಸುಮಾರು 7,000ಕ್ಕೂ ಅಧಿಕ ಮುಸ್ಲಿಂ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮುಸ್ಲಿಂ ವಿದ್ಯಾರ್ಥಿಗಳ ಸಂಖ್ಯೆ ಶೇ.30ರಷ್ಟು ಏರಿಕೆಯಾಗಿದೆ.

**(ಉದಯವಾಣಿ 21–6–2016)**

*****

### ಹಮಾಲರಾಗಲು ಎಂಫಿಲ್ ಪದವೀಧರರ ಅರ್ಜಿ!

ಮುಂಬಯಿ: ಮಹಾರಾಷ್ಟ್ರದಲ್ಲಿ ಖಾಲಿ ಇರುವ 5 ಹಮಾಲರ ಹುದ್ದೆಗೆ 984 ಪದವೀಧರರು ಮತ್ತು 5 ಎಂಫಿಲ್ ಪದವೀಧರರು ಕೂಡ ಅರ್ಜಿ ಸಲ್ಲಿಸಿರುವ ಸಂಗತಿ ಬಹಿರಂಗಗೊಂಡಿದೆ. ಆದರೆ, ಈ ಹುದ್ದೆಗೆ ಕನಿಷ್ಠ ವಿದ್ಯಾರ್ಹತೆ ನಾಲ್ಕನೇ ತರಗತಿ ಪಾಸಾದರೆ ಸಾಕು. ಖಾಲಿ ಇರುವ 5 ಹಮಾಲ ಹುದ್ದೆಗೆ 2,424 ಅಭ್ಯರ್ಥಿಗಳಿಂದ ಅರ್ಜಿಯನ್ನು ಸ್ವೀಕರಿಸಿದ್ದೇವೆ. ಅವರಲ್ಲಿ 5 ಎಂಫಿಲ್ ಪದವೀಧರರು, 9 ಸ್ನಾತಕೋತ್ತರ ಡಿಪ್ಲೋಮಾ ಪದವೀಧರರು, 109 ಡಿಪ್ಲೋಮಾ ಮತ್ತು 253 ಸ್ನಾತಕೋತ್ತರ ಪದವೀಧರರು ಸೇರಿದ್ದಾರೆ.

**(ಉದಯವಾಣಿ 21–6–2016)**

*****

## ಅಟೆಂಡರ್ ಹುದ್ದೆಗೆ 12 ಸಾವಿರ ಎಂಜಿನಿಯರುಗಳ ಅರ್ಜಿ!

ಭೋಪಾಲ್, ಜೂ.23: ಬಿಜೆಪಿ ಆಡಳಿತವಿರುವ ಮಧ್ಯಪ್ರದೇಶದಲ್ಲಿ ಆಹ್ವಾನಿಸಲಾಗಿದ್ದ ಅಟೆಂಡರ್ ಹುದ್ದೆಗಳಿಗೆ 12 ಸಾವಿರ ಎಂಜಿನಿಯರ್ ಪದವೀಧರರು, 34 ಪಿಎಚ್‌ಡಿ ಪದವೀಧರರು ಅರ್ಜಿ ಲಗತ್ತಿಸಿದ್ದಾರೆ. ಈ ಹುದ್ದೆಗಳಿಗೆ 10ನೇ ತರಗತಿ ವಿದ್ಯಾರ್ಹತೆ ನಿಗದಿಪಡಿಸಲಾಗಿತ್ತು. ಕಳೆದ ವಾರ, ಮಹಾರಾಷ್ಟ್ರದಲ್ಲಿ ನಾಲ್ಕನೇ ತರಗತಿ ವಿದ್ಯಾರ್ಹತೆ ನಿಗದಿಪಡಿಸಿ ಅಹ್ವಾನಿಸಲಾಗಿದ್ದ ಕೇವಲ 4 ಹಮಾಲಿ ಹುದ್ದೆಗಳಿಗೆ ಪದವೀಧರರು, ಸ್ನಾತಕೋತ್ತರ, ಎಂಫಿಲ್ ಪದವೀಧರರು ಸೇರಿದಂತೆ 2,424 ಮಂದಿ ಅರ್ಜಿ ಸಲ್ಲಿಸಿದ್ದರು. ಕಳೆದ ವರ್ಷ ಉತ್ತರಪ್ರದೇಶದಲ್ಲಿ 368 ಜವಾನ ಹುದ್ದೆಗಳಿಗೆ 23 ಲಕ್ಷ ಮಂದಿ ಅರ್ಜಿ ಸಲ್ಲಿಸಿದ್ದರು. **(ಉದಯವಾಣಿ 24–6–2016)**

*****

## ಮ.ಪ್ರ: 14000 ಪೇದೆ ಹುದ್ದೆಗೆ 9ಲಕ್ಷ ಅರ್ಜಿ

ಭೋಪಾಲ್: ಮಧ್ಯಪ್ರದೇಶ ಸರಕಾರ 14000 ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆ ಭರ್ತಿಗೆ ಅರ್ಹರಿಂದ ಅರ್ಜಿ ಆಹ್ವಾನಿಸಿದ್ದು ಇದಕ್ಕೆ ಭರ್ಜರಿ 9 ಲಕ್ಷ ಅರ್ಜಿ ಹಾಕಿದ್ದಾರೆ. ಹೀಗೆ ಅರ್ಜಿ ಹಾಕಿದವರಲ್ಲಿ, ಪಿಎಚ್‌ಡಿ, ಸ್ನಾತಕೋತ್ತರ ಪದವೀಧರರು, ಇಂಜಿನಿಯರ್ ಪದವೀಧರರು ಸೇರಿದ್ದಾರೆ. ಜುಲೈ 17ರಂದು ಅಭ್ಯರ್ಥಿಗಳಿಗೆ ಪರೀಕ್ಷೆ ನಡೆಯಲಿದೆ. **(ಉದಯವಾಣಿ 27–6–2016)**

*****

## ಧರ್ಮ ಪ್ರವಚನ ನೀಡಲು ಝಾಕಿರ್ ಅಯೋಗ್ಯ

ಹೊಸದಿಲ್ಲಿ, ಜು.9: ವಿವಾದಿತ ಇಸ್ಲಾಮ್ ಪ್ರಚಾರಕ, ಢಾಕಾ ಉಗ್ರರಿಗೆ ಪ್ರೇರಣೆಯಾದ ಅಪಾದನೆ ಹೊತ್ತಿರುವ ಝಾಕಿರ್ ನ್ಯಾಕ್ ಧರ್ಮ ಪ್ರಚೋದನೆಗೆ ಯೋಗ್ಯನಲ್ಲ. ಮುಸ್ಲಿಮರು ಈತನ ಮಾತುಗಳನ್ನು ಕೇಳಬಾರದು ಎಂದು ದಾರುಲ್ ಉಲೂಂ ದೇವ್‌ಬಂದ್ ತಿಳಿಸಿದೆ. ಝಾಕಿರ್ ನ್ಯಾಕ್ ವಿರುದ್ಧ ಹಲವಾರು ಬಾರಿ ಫತ್ವ ಹಾಗೂ ಕಟ್ಟಳೆಗಳನ್ನು ವಿಧಿಸಲಾಗಿದೆ, ಈತನಿಗೆ ಆಳವಾದ ಜ್ಞಾನವಿಲ್ಲ. ಈತ ನಂಬಿಕೆಗೆ ಅರ್ಹನಲ್ಲ. ಮುಸ್ಲಿಮರು ಈತನ ಮಾತುಗಳನ್ನು ಆಲಿಸಬಾರದು ಎಂದು ದಾರುಲ್ ಉಲೂಂ ಮಾಜಿ ವಿದ್ಯಾರ್ಥಿ, ಮೀರತ್‌ನ ಹಿದಯಾ ಮದರಸಾ ಸಂಸ್ಥಾಪಕ ಅಬುರ್ ರಹಮಾನ್ ಕ್ವಾಸಿಮಿ ತಿಳಿಸಿದ್ದಾರೆ. **(ಉದಯವಾಣಿ 10–7–2016)**

*****

## ಝಾಕಿರ್ ನ್ಯಾಕ್ ಪೀಸ್ ಟಿವಿಗೆ ಬಾಂಗ್ಲಾ ನಿಷೇಧ

ಢಾಕಾ, ಜು.10: ಹತ್ತು ದಿನಗಳ ಹಿಂದೆ ಢಾಕಾದ ಪ್ರಸಿದ್ಧ ರೆಸ್ಟೋರೆಂಟ್‌ನಲ್ಲಿ 22 ಮಂದಿಯನ್ನು ಬಲಿ ಪಡೆದ ಭಯೋತ್ಪಾದಕರು ಮುಂಬೈ ಮೂಲದ ಇಸ್ಲಾಮ್ ಮತ ಪ್ರಚಾರಕ ಝಾಕಿರ್ ನ್ಯಾಕ್‌ನಿಂದ ಪ್ರೇರಿತರಾಗಿದ್ದರು ಎಂಬ ವಿಷಯ ಬಯಲಾದ ಬೆನ್ನಲ್ಲೇ ಝಾಕಿರ್ ನ್ಯಾಕ್‌ಗೆ ಸೇರಿದ 'ಪೀಸ್ ಟಿವಿ'ಗೆ ಬಾಂಗ್ಲಾದೇಶ ನಿಷೇಧ ಹೇರಿದೆ.

ಕಾನೂನು – ಸುವ್ಯವಸ್ಥೆಗೆ ಸಂಬಂಧಿಸಿದ ಸಂಪುಟ ಸಮಿತಿಯ ರವಿವಾರದ ವಿಶೇಷ ಸಭೆಯಲ್ಲಿ ಈ ಕುರಿತು ನಿರ್ಧಾರ ಕೈಗೊಳ್ಳಲಾಗಿದೆ. ಶುಕ್ರವಾರದ ಪ್ರಾರ್ಥನೆ ಸಂದರ್ಭಗಳಲ್ಲಿ ನೀಡಲಾಗುವ ಪ್ರವಚನಗಳಲ್ಲಿ ಏನಾದರೂ ಪ್ರಚೋದನಕಾರಿ ಅಂಶಗಳಿವೆಯೇ ಎಂಬುದನ್ನು ಪರಿಶೀಲಿಸಲು ಕೂಡ ಸಭೆ ತೀರ್ಮಾನಿಸಿದೆ. ಅಲ್ಲದೆ, ಭಯೋತ್ಪಾದನೆ, ಬಂಡುಕೋರತ್ವ ತ್ಯಜಿಸುವಂತಹ ನೈಜ ಇಸ್ಲಾಮಿಕ್ ಸಿದ್ಧಾಂತಗಳ ಕುರಿತು ಶುಕ್ರವಾರದ ಪ್ರಾರ್ಥನೆ ಸಂದರ್ಭದಲ್ಲಿ ಉಪನ್ಯಾಸ ನೀಡುವಂತೆ ಇಮಾಂಗಳಿಗೆ ಸರಕಾರ ಮನವಿ ಮಾಡಿಕೊಂಡಿದೆ.

ಢಾಕಾದ ರೆಸ್ಟೋರೆಂಟ್ ಮೇಲೆ ಜು.1ರಂದು ದಾಳಿ ನಡೆಸಿದ ಭಯೋತ್ಪಾದಕರ ಪೈಕಿ 22 ವರ್ಷದ ರೋಹನ್ ಇಮ್ತಿಯಾಜ್ ಎಂಬಾತ ಝಾಕಿರ್ ನ್ಯಾಕ್‌ನ ಹೇಳಿಕೆಯೊಂದನ್ನು ಫೇಸ್ ಬುಕ್‌ನಲ್ಲಿ ಉಲ್ಲೇಖಿಸಿದ್ದ. ಎಲ್ಲ ಮುಸ್ಲಿಮರೂ ಭಯೋತ್ಪಾದಕರಾಗಬೇಕು ಎಂಬ ಅಂಶ ಝಾಕಿರ್ ನ್ಯಾಕ್‌ನ ಆ ಹೇಳಿಕೆಯಲ್ಲಿತ್ತು. ಹೀಗಾಗಿ 50 ವರ್ಷದ ನ್ಯಾಕ್ ವಿರುದ್ಧ ಢಾಕಾ ಭಯೋತ್ಪಾದನೆಗೆ ಪ್ರೇರಣೆ ನೀಡಿದ ಆರೋಪ ಕೇಳಿ ಬಂದಿತ್ತು. **(ಉದಯವಾಣಿ 11–7–2016)**

*****

## ಗೋ ರಕ್ಷಿಸಿ: ಮುಸ್ಲಿಮರಿಗೆ ಅಜ್ಮೇರ್ ದರ್ಗಾ ಕರೆ

ಜೈಪುರ: ಹಿಂದೂಗಳ ಧಾರ್ಮಿಕತೆಯ ಭಾಗವಾಗಿರುವ ಗೋವುಗಳ ಹತ್ಯೆ ನಡೆಸದಂತೆ ಅಜ್ಮೇರ್ ದರ್ಗಾದ ಮುಖಂಡ ಝೈನುಲ್ ಅಬೆದಿನ್ ಆಲಿ ಖಾನ್ ಮುಸ್ಲಿಮರಿಗೆ ಕರೆ ನೀಡಿದರು. ದೇಶದ ಒಳಿತಿಗಾಗಿ ಮುಸ್ಲಿಮರು ಗೋವುಗಳನ್ನು ರಕ್ಷಿಸಬೇಕು. ಗೋ ಮಾಂಸದ ವಿಷಯಕ್ಕಾಗಿ ಹಿಂಸಾಚಾರ ಹುಟ್ಟುಹಾಕುವವರು ಅಂಥ ದುರುದ್ದೇಶ ಕೈಬಿಡಬೇಕು ಎಂದರು. **(ಉದಯವಾಣಿ 29–7–2016)**

*****

## ಬಾಂಗ್ಲಾ ಜಮಾತೆ ಮುಖಂಡ ಅಲಿ ನೇಣುಗಂಬಕ್ಕೆ

ಢಾಕಾ: ಬಾಂಗ್ಲಾದೇಶದಲ್ಲಿ ಯುದ್ಧ ಅಪರಾಧಿಯಾಗಿದ್ದ ಜಮಾತೆ ಇಸ್ಲಾಮಿ ನಾಯಕ, ಮಾಧ್ಯಮ ಉದ್ಯಮಿ ಮಿರ್ ಕ್ವಾಸೆಮ್ ಅಲಿ (63) ಅವರನ್ನು ಶನಿವಾರ ರಾತ್ರಿ ನೇಣಿಗೇರಿಸಲಾಗಿದೆ. 1971ರ ಬಾಂಗ್ಲಾ ವಿಮೋಚನೆ ಯುದ್ಧದ ವಿರುದ್ಧ ಹೋರಾಟ ನಡೆಸಿದ ಹಿನ್ನೆಲೆಯಲ್ಲಿ ಅವರಿಗೆ ಗಲ್ಲುಶಿಕ್ಷೆ ವಿಧಿಸಲಾಗಿತ್ತು. ರಾಷ್ಟ್ರಪತಿಗಳು ಶುಕ್ರವಾರ ಅಲಿ ಅವರ ಕ್ಷಮಾದಾನ ಅರ್ಜಿಯನ್ನು ತಿರಸ್ಕರಿಸಿದ್ದರಿಂದ ಅವರನ್ನು ಇಲ್ಲಿನ ಕಾಶಿಂಪುರ ಕೇಂದ್ರೀಯ ಕಾರಾಗೃಹದಲ್ಲಿ ಶನಿವಾರ ರಾತ್ರಿ 10.35ಕ್ಕೆ ಗಲ್ಲಿಗೇರಿಸಲಾಯಿತು.

**(ಉದಯವಾಣಿ 4–9–2016)**

*****

## ಹಿಂದೂ ಕಾಯ್ದೆಯ ಪರಿಷ್ಕರಣೆ

ಹಿಂದೂ ಸಾಂಪ್ರದಾಯಿಕ ಕಾಯ್ದೆ ಪ್ರಕಾರ ಸ್ತ್ರೀಯರಿಗೆ ಆಸ್ತಿ ಹೊಂದಲು, ಪಡೆಯಲು, ಅನುಭೋಗಿಸಲು, ಪರಭಾರೆ ಮಾಡಲು ಹಕ್ಕುಗಳಿರಲಿಲ್ಲ. 1937ರಲ್ಲಿ ಜಾರಿಗೆ ಬಂದ ಹಿಂದೂ ಸ್ತ್ರೀಯರು ಕುಟುಂಬದಿಂದ ಆಸ್ತಿ ಪಡೆದು ಅನುಭೋಗಿಸುವ ಹಕ್ಕು ನೀಡುವ ಕಾಯ್ದೆ ಸ್ತ್ರೀ ಪರವಾದ ಪ್ರಥಮ ಕಾಯ್ದೆ ಎನ್ನಬಹುದು. ಆದರೆ ಈ ಹಕ್ಕು ಬಹಳ ಸೀಮಿತವಾದುದು. ಆಕೆಯ ಜೀವನಾವಶ್ಯಕ್ಕೆ ಮತ್ತು ಕಾಯ್ದೆಯಲ್ಲಿ ಕಾಣಿಸಿರುವ ಉದ್ದೇಶಗಳಿಗೆ ಮಾತ್ರ ಆಸ್ತಿಯ ಉತ್ಪತ್ತಿಯನ್ನು ಸಂಗ್ರಹಿಸಿ ಖರ್ಚು ಮಾಡುವ ಕೇವಲ ಜೀವಿತಾವಧಿ ಹಕ್ಕುಗಳನ್ನು ಮಾತ್ರ ಆಕೆಗೆ ನೀಡಲಾಗಿತ್ತು. 1956ರ ಉತ್ತರಾಧಿಕಾರ ಶಾಸನದಲ್ಲಿ ಸ್ತ್ರೀಯರು ತಮಗೆ ಬಂದ ಆಸ್ತಿಯನ್ನು ಸ್ವತಂತ್ರವಾಗಿ ಪಡೆದು ಅನುಭೋಗಿಸಲು ಮತ್ತು ಪರಭಾರೆ ಮಾಡಲು ಸಂಪೂರ್ಣ ಹಕ್ಕು ಪಡೆದರು. ಅಲ್ಲದೆ 1937ರ ಕಾಯ್ದೆ ಪ್ರಕಾರ ಆಕೆ ಪಡೆದ ಸೀಮಿತ ಹಕ್ಕಿನ ಆಸ್ತಿಯೂ ಆಕೆಯ ಸಂಪೂರ್ಣ ಹಕ್ಕಿನದ್ದಾಯಿತು. ಆದರೂ ಸಮಷ್ಟಿ ಕುಟುಂಬದಲ್ಲಿ ಗಂಡು ಮಕ್ಕಳಿಗಿರುವಂತೆ ಜನನ ಪೂರ್ವನಿಹಿತವಾದ ಹಕ್ಕು 1956ರ ಕಾಯ್ದೆಯಡಿಯಲ್ಲಿ ಆಕೆಗೆ ಸಿಗಲಿಲ್ಲ. 2005ರಲ್ಲಿ ಉತ್ತರಾಧಿಕಾರ ಶಾಸನಕ್ಕೆ ತಿದ್ದುಪಡಿ ಮಾಡಿ, ಈ ವಿಷಯದಲ್ಲಿ ಸ್ತ್ರೀ–ಪುರುಷರಿಬ್ಬರಿಗೂ ಸಮಾನ ಹಕ್ಕು ನೀಡಲಾಯಿತು. ಈ ಕಾಯ್ದೆಯ ವ್ಯಾಪ್ತಿ ಉತ್ತರಾನ್ವಯ ಮಾತ್ರ ಎಂದು ಸರ್ವೋಚ್ಚ ನ್ಯಾಯಾಲಯ ಇತ್ತೀಚೆಗೆ ತೀರ್ಪು ನೀಡಿದೆ. 2005ರಿಂದ ಮಗಳು ಸಹ ಅವಿಭಜಿತ ಕುಟುಂಬದಲ್ಲಿ ದಾಯಾದಿ (coparcener) ಎಂದು ಪರಿಗಣಿತಳು.

ಇನ್ನು ಹಿಂದೂ ವಿವಾಹ ಕಾಯ್ದೆಯ ಚರಿತ್ರೆಯನ್ನು ಅವಲೋಕಿಸಿದರೆ, 1956ಕ್ಕಿಂತ ಹಿಂದೆ ಪುರುಷರಿಗೆ ಬಹುಪತ್ನಿತ್ವ ನಿಷಿದ್ಧವಾಗಿರಲಿಲ್ಲ. ಆದರೆ, ಹಿಂದೂ ವಿವಾಹ ಕಾಯ್ದೆ ಬಂದ ನಂತರ ಪತಿ ಅಥವಾ ಪತ್ನಿಯು ತನ್ನ ಸಂಗಾತಿ ಬದುಕಿರುವಾಗ ಮತ್ತೊಬ್ಬರನ್ನು ಮದುವೆಯಾಗುವುದು ನಿಷಿದ್ಧಗೊಂಡು, ಶಿಕ್ಷಾರ್ಹ ಅಪರಾಧವಾಯಿತು. ಆದರೆ ಈ ಅಪರಾಧ ಕೇವಲ ಸಂಜ್ಞೇಯ (cognizable). ಅಂದರೆ ಈ ಅಪರಾಧದ ಕುರಿತು ಪತ್ನಿ ಅಥವಾ ಪತಿ ಸರ್ಕಾರಕ್ಕೆ ದೂರು ಸಲ್ಲಿಸುವುದು ಅಗತ್ಯ. ದೂರು ಇಲ್ಲದೆ ಸರ್ಕಾರ ತನಿಖೆ ಮಾಡಲು ಸಾಧ್ಯವಿಲ್ಲ. ಪ್ರಾಯಃ ಈ ಕಾರಣದಿಂದ ಹಲವಾರು ಪ್ರತಿಷ್ಠಿತ ಮಂದಿ ಉಪಪತ್ನಿಯರನ್ನು ಹೊಂದಿಯೂ ಸಮಾಜದ ಮನ್ನಣೆಗೆ ಅರ್ಹರಾಗಿದ್ದಾರೆ.

ಹಿಂದೂ ಕಾಯ್ದೆ ಪ್ರಕಾರ 1956ರ ತನಕವೂ ಸ್ತ್ರೀ ಸಂಪೂರ್ಣ ಹಕ್ಕಿನಿಂದ ಆಸ್ತಿ ಹೊಂದಲು, ಅನುಭೋಗಿಸಲು ಅಥವಾ ಪರಭಾರೆ ಮಾಡಲು ಸಾಧ್ಯವಿರಲಿಲ್ಲ. ಆದರೆ ಮುಸ್ಲಿಂ ಕಾಯ್ದೆಯಂತೆ ಪ್ರವಾದಿ ಮಹಮ್ಮದ್ ಪೈಗಂಬರರ ಕಾಲದಿಂದಲೇ ಸ್ತ್ರೀಯು ಆಸ್ತಿ, ಸೊತ್ತುಗಳನ್ನು ಹೊಂದಲು, ಅನುಭೋಗಿಸಲು ಮತ್ತು ಪರಭಾರೆ ಮಾಡಲು ಅಧಿಕಾರ ಹೊಂದಿದ್ದಳು. **(ಉದಯವಾಣಿ 3–8–2016)**

*****

## ಇಸ್ಲಾಂನಿಂದ ಹಫೀಜ್ ಉಚ್ಚಾಟನೆ: ಫತ್ವಾ

ಬರೇಲಿ (ಉತ್ತರ ಪ್ರದೇಶ): ಇಲ್ಲಿಯ ಬರೇಲ್ವಿ ಪಂಥದ ಇಸ್ಲಾಂ ಧಾರ್ಮಿಕ ಸಂಸ್ಥೆ ಮುಂಬೈ ದಾಳಿ ರೂವಾರಿ ಉಗ್ರ ಪಾಕಿಸ್ತಾನದ ಹಫೀಜ್ ಸಯೀದ್ ವಿರುದ್ಧ ಫತ್ವಾ ಹೊರಡಿಸಿದೆ. ಆತನನ್ನು ಇಸ್ಲಾಂ ವಿರೋಧಿ ಎಂದು ಘೋಷಿಸಿದೆ. ಇಸ್ಲಾಂ ವಿದ್ವಾಂಸ ಮುಫ್ತಿ ಮಹಮ್ಮದ್ ಸಲೀಂ ಬರೇಲ್ವಿ ಜಮಾತ್ ಉದ್‌ದಾವಾ ಮುಖ್ಯಸ್ಥನ ವಿರುದ್ಧ ಫತ್ವಾ ಹೊರಡಿಸಿದ್ದಾರೆ. ಆತನನ್ನು ಇಸ್ಲಾಂ ಧರ್ಮದಿಂದ ಹೊರ ಹಾಕಲಾಗಿದೆ. ಆತನನ್ನು ಹಿಂಬಾಲಿಸುವುದು ಮತ್ತು ಮುಸ್ಲಿಂ ಎಂದು ಪರಿಗಣಿಸುವುದು ಅಕ್ರಮ ಎಂದಿದೆ.

**(ಉದಯವಾಣಿ 19–8–2016)**

*****

## ಚಂದ್ರನ ಮೇಲೆ ಮಾನವ: ಎಷ್ಟು ಸತ್ಯ?

**ಚ**ಂದ್ರನ ಮೇಲೆ ಮಾನವ ಕಾಲಿಟ್ಟಿದ್ದಾನೆಂದು ನಾವೆಲ್ಲ ನಂಬಿದ್ದೇವೆ. 1969ರಲ್ಲಿ ಅಪೋಲೋ ವ್ಯೋಮನೌಕೆಯಲ್ಲಿ ಪ್ರಯಾಣಿಸಿದ ನೀಲ್ ಆರ್ಮ್‌ಸ್ಟ್ರಾಂಗ್, ಎಡ್ವಿನ್ ಆಲ್ವಿನ್ ಮುಂತಾದವರು ಚಂದ್ರನ ಮೇಲೆ ಇಳಿದರೆಂದು ಓದಿದ್ದೇವೆ. ಆದರೆ ನಾಸಾ ಸಂಸ್ಥೆ ಚಂದ್ರನ ಮೇಲಿನದ್ದೆಂದು ಹೇಳಿ ಬಿಡುಗಡೆ ಮಾಡಿದ ನೂರೆಂಟು ಚಿತ್ರಗಳನ್ನು ಸೂಕ್ಷ್ಮವಾಗಿ ನೋಡಿದ ವಿಜ್ಞಾನಿಗಳಿಗೆ ಅನುಮಾನಗಳು ಆರಂಭವಾದವು. ಚಿತ್ರಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದ ತಜ್ಞರ ಕಣ್ಣುಗಳಿಗೆ ಅದರಲ್ಲಿದ್ದ ಹುಳುಕುಗಳು ಒಂದೊಂದಾಗಿ ಕಾಣತೊಡಗಿದವು.

ಜಗತ್ತಿನಲ್ಲಿ ತನ್ನ ಹಿರಿಮೆಯನ್ನು ಸಾರಲು ದೊಡ್ಡಣ್ಣ ಅಮೆರಿಕಾ ಅತಿದೊಡ್ಡ ಸುಳ್ಳೊಂದನ್ನು ಹೇಳಿದ್ದು ಸಾಬೀತಾಯಿತು. ಆದರೆ ಇನ್ನೂ ಮನುಷ್ಯ ಚಂದ್ರನ ಮೇಲೆ ಕಾಲಿಟ್ಟಿದ್ದು ನಿಜ ಎಂದು ನಂಬಿದವರಿದ್ದಾರೆ. ಇದಕ್ಕೆಲ್ಲ ಕಾರಣವೆಂದರೆ ರಷ್ಯಾ ಮತ್ತು ಅಮೆರಿಕಗಳ ನಡುವಿನ ಶೀತಲ ಸಮರ. ರಷ್ಯಾ ಆಕಾಶಕ್ಕೆ ಮೊದಲ ಬಾಹ್ಯಾಕಾಶ ನೌಕೆ ಸ್ಪುಟ್ನಿಕ್ ಅನ್ನು 1957ರಲ್ಲಿ ಹಾರಿಬಿಟ್ಟಿತು. ಇದು ಅಮೆರಿಕಾದವರ ತಲೆಕೆಡಿಸಿತ್ತು. ಅಮೆರಿಕಾದ ಅಧ್ಯಕ್ಷ ಜಾನ್ ಎಫ್ ಕೆನಡಿ 1960ರಲ್ಲಿ ಈ ದಶಕದ ಕೊನೆಯೊಳಗೆ ಅಮೆರಿಕನ್ನರು ಚಂದ್ರನ ಮೇಲೆ ಮಾನವನನ್ನು ಇಳಿಸಲಿದ್ದಾರೆ ಎಂದು ಘೋಷಿಸಿದರು. ಅದು ವಿಜ್ಞಾನಿಗಳ ಮನಶ್ಶಾಂತಿಯನ್ನು ಕದಡಿತು. ಕೊನೆಗೆ ಕೆನಡಿ ಹೇಳಿದ ಮಾತನ್ನು ಉಳಿಸಿಕೊಳ್ಳಬೇಕಾದ ಒತ್ತಡಕ್ಕೆ ಸಿಲುಕಿದ ವಿಜ್ಞಾನಿಗಳು ನಿರ್ಜನವಾದ ಮರುಭೂಮಿಯೊಂದಕ್ಕೆ ಹೋಗಿ ಅಲ್ಲಿ ದೃಶ್ಯಗಳನ್ನು ಚಿತ್ರೀಕರಿಸಿ ಜಗತ್ತಿಗೆ ತೋರಿಸಿದರು ಎಂಬುದು ಸತ್ಯದ ಬೆನ್ನುಹತ್ತಿದ ತಜ್ಞರ ಸಂಶಯ. ಅಮೆರಿಕಾ ಹೇಳಿದ್ದು ಸುಳ್ಳೆಂದು ಖಡಾಖಂಡಿತವಾಗಿ ಯಾರೂ ಇದುವರೆಗೆ ಹೇಳದಿದ್ದರೂ ಸಾಕ್ಷ್ಯಗಳೆಲ್ಲ ಇದನ್ನೇ ಬಲವಾಗಿ ಪ್ರತಿಪಾದಿಸುತ್ತವೆ. **(ತರಂಗ 22–9–2016)**

*****

## ಕುರಾನ್‌ನ ಭಾರ ಎಂಟು ಕ್ವಿಂಟಾಲ್!

**ಮನುಷ್ಯನ ಸಾಹಸಗಳು, ಹವ್ಯಾಸಗಳು ಎಲ್ಲವೂ ಒಂದು ಬಗೆಯಲ್ಲಿ ವಿಚಿತ್ರವೇ. ಹೊಸತನ್ನು ಮಾಡಿ ತೋರಿಸಬೇಕೆಂಬ ಛಲವೇ ಜಗತ್ತಿನಲ್ಲಿಯೇ ಅತೀ ದೊಡ್ಡ ಗಾತ್ರದ ಕುರಾನ್ ಸೃಷ್ಟಿಗೆ ಕಾರಣವಾಗಿದೆ.**

ಇಸ್ಲಾಂ ಜನಾಂಗದ ಪವಿತ್ರ ಗ್ರಂಥ ಇಂದು ಸಂದರ್ಶಕರ ಅಚ್ಚರಿಗೆ ಗ್ರಾಸವಾಗಿದೆ. ಅಫ್ಘಾನಿಸ್ತಾನದ ರಾಜಧಾನಿ ಕಾಬೂಲಿನಲ್ಲಿ ಸೃಷ್ಟಿಯಾಗಿರುವ ಈ ಕುರಾನ್ ಮೊಹಮ್ಮದ್ ಸಬೀರ್ ಹುಸೈನಿ ಸಾಗೋಟ್ ಅವರ ಕಲ್ಪನೆಯ ಕೂಸು. ಒಂಬತ್ತು ವಿದ್ಯಾರ್ಥಿಗಳು ಮುದ್ದಾದ ಕೈ ಬರಹದಲ್ಲಿ ಕುರಾನಿನ ಪವಿತ್ರ ಶ್ಲೋಕಗಳನ್ನು ಬರೆಯುತ್ತ ಹೋದರು.

ಅದನ್ನು ಕಲಾವಿದ ಹಕೀಂ ನಾಸಿರ್ ಖುರಾಸಾನ್ ಭಾಲ್ಕಿ ಮತ್ತು ಅವರ ಸಂಗಡಿಗ ಕಲಾವಿದರು ವಿನ್ಯಾಸಗೊಳಿಸಿ ಪಡಿಯಚ್ಚುಗಳನ್ನು ಸಿದ್ಧಗೊಳಿಸುವ ಕಾಯಕದಲ್ಲಿ ನಿರತರಾದರು. ವಿದ್ಯಾರ್ಥಿಗಳ ದುಡಿಮೆಯ ಅವಧಿಯನ್ನು ಕೇಳಿದರೆ ಅದೂ ಬೆರಗು ಮೂಡಿಸುವ ವಿಚಾರ. ಐದು ವರ್ಷಗಳ ಕಾಲ ಒಂದು ದಿನ ಕೂಡ ಬಿಡುವಿಲ್ಲದೆ ಒಂಬತ್ತು ಮಂದಿಯೂ ದಿನದ 18 ತಾಸುಗಳನ್ನು ಅದರ ಬರವಣಿಗೆಗಾಗಿಯೇ ವಿನಿಯೋಗಿಸಿದರಂತೆ.

**ನಡೆದಾಡುತ್ತಾ ಓದಬಹುದು!**

2004 ಸೆಪ್ಟಂಬರ್ ತಿಂಗಳಿನಲ್ಲಿ ಆರಂಭಗೊಂಡ ಕುರಾನ್ ರಚನೆಯ ಕೆಲಸ ಪೂರ್ಣವಾದುದು 2009ರ ಅದೇ ತಿಂಗಳಿನಲ್ಲಿ. ವಿಧಿಯುಕ್ತವಾಗಿ ಅದು ಜನರ ಮುಂದೆ ತೆರೆದುಕೊಂಡದ್ದು 2012ರಲ್ಲಿ. ಗೊರಿಜಿಯಾ ಮೂಲದ ಸ್ಲಾವೇನಿಯನ್ ಸ್ವಾಮ್ಯದ ಚಾಪ್‌ಗ್ರೂಪ್ ಎಂಬ ಇಟಲಿಯನ್ ಕಂಪೆನಿ ಇದರ ಮುದ್ರಣದ ಹೊಣೆ ನಿರ್ವಹಿಸಿತ್ತು. ಇದಕ್ಕಾಗಿ 1.3 ದಶಲಕ್ಷ ಅಮೆರಿಕನ್ ಡಾಲರ್‌ಗಳು ಖರ್ಚಾಗಿವೆಯಂತೆ. ಈ ಮಹಾನ್ ಗ್ರಂಥವನ್ನು ಸಲೀಸಾಗಿ ಎತ್ತಿಕೊಂಡು ಹೋಗಬಹುದೆಂದು ಖಂಡಿತ ಭಾವಿಸಬೇಡಿ. ಇದರ ತೂಕ ಎಂಟು ಕ್ವಿಂಟಾಲುಗಳಷ್ಟಿದೆ!

ಇನ್ನು ಕುಳಿತಲ್ಲಿಯೇ ಈ ಕುರಾನಿನ ಸಾಲುಗಳನ್ನು ಓದಬಹುದೆಂದು ಯೋಚಿಸಿದರೆ ಅದೂ ಸಾಧ್ಯವಿಲ್ಲ. ಪುಸ್ತಕದ ಪುಟಗಳನ್ನು ಬಿಡಿಸಿ ಬಲದಿಂದ ಎಡಭಾಗಕ್ಕೆ ನಡೆಯುತ್ತ ಓದಬೇಕಾಗುತ್ತದೆ. ಚಾಪೆಯಂತೆ ಬಿಡಿಸಬಹುದಾದ ಪುಟಗಳು ಐದು ಅಡಿ ಅಂದರೆ ಸುಮಾರಾಗಿ ಒಬ್ಬ ವ್ಯಕ್ತಿ ಮಲಗಿದಷ್ಟು ದೂರಕ್ಕೆ ಅಗಲವಾಗಿ ಹರಡಿಕೊಳ್ಳುತ್ತವೆ. ಮಡಚಿಟ್ಟರೆ ಒಬ್ಬನಿಗಿಂತ ಅಧಿಕ ಅಂದರೆ, ಏಳು ಅಡಿ ಎತ್ತರ ಕಾಣುತ್ತದೆ. ಇದರ ಹೊರ ರಕ್ಷಾಪತ್ರವೇ 120 ಕಿಲೋಗಳಷ್ಟು ಭಾರವಿದೆಯಂತೆ.

ಕುರಾನ್ ಧರ್ಮಗ್ರಂಥದ 30 ಭಾಗಗಳನ್ನು 30 ಬಗೆಯ ಕ್ಯಾಲಿಗ್ರಫಿ ಪುಟ ವಿನ್ಯಾಸಗಳಲ್ಲಿ ರೂಪಿಸಿರುವ ಈ ಗ್ರಂಥದ ರಕ್ಷಾಪತ್ರದ ರಚನೆಗೆ 21 ಆಡುಗಳ ಚರ್ಮಗಳನ್ನಲ್ಲದೆ ಕಾಗದ, ರೇಷ್ಮೆ ಬಟ್ಟೆಗಳನ್ನು ಉಪಯೋಗಿಸಲಾಗಿದೆ. ಬೆಳ್ಳಿ ಮತ್ತು ಬಂಗಾರದ ಜೊತೆಗೆ ವಜ್ರಗಳು ಮುಂತಾದ ನವರತ್ನಗಳ ಹರಳುಗಳನ್ನು ಅಚ್ಚುಕಟ್ಟಾಗಿ ಕೂಡಿಸಿ ಮುಖಪುಟದ ಕುಸುರಿ ಕೆಲಸ ಮಾಡಲಾಗಿದೆ. ಒಳಪುಟಗಳಲ್ಲಿ ಚುಕ್ಕೆಯಂತಿರುವ ಅಕ್ಷರಗಳಿಗೆ ಶುದ್ಧ ಬಂಗಾರವನ್ನೇ ಬಳಸಿದ್ದಾರೆ. ಇಂಥ ಬೆಲೆ ಬಾಳುವ ಗ್ರಂಥದ ರಕ್ಷಣೆಗೆ ಸಾಕಷ್ಟು ಭದ್ರತೆಯನ್ನೂ ನೀಡಲಾಗಿದೆ.

ಹಾಗೆಂದು ಇಂಥ ಬೃಹತ್ ಗ್ರಂಥಗಳ ರಚನೆ ಇದೇ ಮೊದಲ ಪ್ರಯತ್ನವೇನಲ್ಲ. 1930ರಲ್ಲಿ ಲಾಸ್‌ಏಂಜೆಲ್ಸ್‌ನಲ್ಲಿ ತಯಾರಾದ ಒಂದು ಬೈಬಲ್ ಗ್ರಂಥವು 43 ಇಂಚು ಎತ್ತರವಾಗಿತ್ತು. 98 ಇಂಚು ಅಗಲವಾಗಿತ್ತು. 804 ಪುಟಗಳ ಈ ದಾಖಲೆಯ ಬೈಬಲ್ 1094 ಪೌಂಡ್ ತೂಕವಾಗಿತ್ತು. ಇದನ್ನು ಸಿದ್ಧಗೊಳಿಸಲು ಸುಮಾರು 8700 ಗಂಟೆ ಬೇಕಾಗಿತ್ತು. **(ತರಂಗ 6–10–2016)**

===========================================================================

## ನಿಯಂತ್ರಣದ ನೈಸರ್ಗಿಕ ವಿಧಾನಗಳು – ಸೊಳ್ಳೆಗಳಿಂದ ಸದೂರ

**ಆರೋಗ್ಯ**

### ಕಹಿಬೇವಿನ ಎಣ್ಣೆ

ಕಹಿಬೇವಿನ ಎಣ್ಣೆ ಒಂದು ಪರಿಣಾಮಕಾರಿ ಸೊಳ್ಳೆ ನಿಯಂತ್ರಕ ಅನ್ನುವುದು ಬಹುತೇಕರಿಗೆ ಗೊತ್ತಿಲ್ಲ. ಅಮೇರಿಕನ್ ಮಾಸ್ಕಿಟೋ ಕಂಟ್ರೋಲ್ ಅಸೋಸಿಯೇಶನ್‌ನ ನಿಯತಕಾಲಿಕದಲ್ಲಿ ಪ್ರಕಟವಾದ ಒಂದು ಅಧ್ಯಯನ ವರದಿಯ ಪ್ರಕಾರ ತೆಂಗಿನೆಣ್ಣೆ ಮತ್ತು ಕಹಿಬೇವಿನ ಎಣ್ಣೆಗಳನ್ನು 1:1 ಪ್ರಮಾಣದಲ್ಲಿ ಮಿಶ್ರ ಮಾಡಿ ಉಪಯೋಗಿಸಿದರೆ ಸೊಳ್ಳೆಗಳನ್ನು ಯಶಸ್ವಿಯಾಗಿ ದೂರವಿಡಬಹುದು. ಆ್ಯಂಟಿ ಬ್ಯಾಕ್ಟೀರಿಯಲ್, ಆ್ಯಂಟಿ ಫಂಗಲ್, ಆ್ಯಂಟಿ ಪ್ರೊಟೊಜೋಲ್ ಗುಣ ಹೊಂದಿರುವ ಕಹಿಬೇವಿನ ಎಣ್ಣೆಯನ್ನು ಹಚ್ಚಿಕೊಂಡರೆ ಅದು ಬೀರುವ ವಿಶಿಷ್ಟ ಪರಿಮಳ ಸೊಳ್ಳೆಯನ್ನು ದೂರ ಓಡಿಸುತ್ತದೆ. ತೆಂಗಿನ ಎಣ್ಣೆ ಮತ್ತು ಕಹಿಬೇವಿನ ಎಣ್ಣೆಯನ್ನು ಸಮ ಪ್ರಮಾಣದಲ್ಲಿ ಮಿಶ್ರಮಾಡಿ ಹಚ್ಚಿಕೊಳ್ಳುವುದು ಒಳ್ಳೆಯ ವಿಧಾನ.

### ಯೂಕಾಲಿಪ್ಟಸ್ ಮತ್ತು ಸಿಟ್ರೊನೆಲ್ಲಾ ಎಣ್ಣೆ ಮಿಶ್ರಣ

ಯೂಕಾಲಿಪ್ಟಸ್ ಮತ್ತು ಸಿಟ್ರೊನೆಲ್ಲಾ ಅಥವಾ ಮಜ್ಜಿಗೆ ಹುಲ್ಲಿನ ಎಣ್ಣೆಗಳ ಮಿಶ್ರಣವೂ ಸೊಳ್ಳೆಗಳನ್ನು ನಿಯಂತ್ರಿಸುತ್ತದೆ. ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಮನೆಯೊಳಗೆ ಸೊಳ್ಳೆ ನಿಯಂತ್ರಣಕ್ಕೆ ಈ ವಿಧಾನವನ್ನು ಶಿಫಾರಸು ಮಾಡುತ್ತದೆ. ಈ ಎರಡು ಎಣ್ಣೆಗಳಲ್ಲಿರುವ ಸಿನೆಯೋಲ್ ಅಂಶ ಸೊಳ್ಳೆ ಪ್ರತಿಬಂಧಕವಾಗಿ ಕೆಲಸ ಮಾಡುತ್ತದೆ. ಇದು ಆ್ಯಂಟಿಸೆಪ್ಟಿಕ್ ಮತ್ತು ಕೀಟ ನಿರೋಧಕ ಗುಣ ಹೊಂದಿದೆ. ಈ ಎರಡೂ ಎಣ್ಣೆಗಳನ್ನು ಸಮ ಪ್ರಮಾಣದಲ್ಲಿ ಮಿಶ್ರ ಮಾಡಿ ಉಪಯೋಗಿಸಬಹುದು.

### ಕರ್ಪೂರ

ಸುಲಭವಾಗಿ ಸಿಗುವ, ಪ್ರತೀ ಮನೆಯಲ್ಲೂ ಇರುವ ಕರ್ಪೂರ ಸೊಳ್ಳೆಗಳನ್ನು ದೂರ ಇರಿಸಲು ಮಾತ್ರ ಅಲ್ಲ. ಸೊಳ್ಳೆ ನಾಶಕ್ಕೂ ಉಪಯೋಗಿ. ಇತರ ನೈಸರ್ಗಿಕ ಉತ್ಪನ್ನಗಳಿಗೆ ಹೋಲಿಸಿದರೆ ಇದರ ಸೊಳ್ಳೆ ವಿಕರ್ಷಣ ಗುಣ ದೀರ್ಘಕಾಲ ಬಾಳಿಕೆ ಬರುವಂಥದ್ದು.

ಕರ್ಪೂರದ ಕೆಲವು ತುಣುಕುಗಳನ್ನು ತೆಂಗಿನೆಣ್ಣೆಯಲ್ಲಿ ಹಾಕಿ ಕೆಲ ಗಂಟೆ ಇರಿಸಿದರೆ ಅವು ಕರಗುತ್ತವೆ. ಅದನ್ನು ಮಲಗುವಾಗ, ಸೊಳ್ಳೆ ಹೆಚ್ಚಿರುವ ಸಂಧ್ಯಾಕಾಲ ಇತ್ಯಾದಿ ಸಂದರ್ಭಗಳಲ್ಲಿ ಈ ಎಣ್ಣೆ ಹಚ್ಚಿಕೊಳ್ಳುವುದರಿಂದ ಸೊಳ್ಳೆಗಳಿಂದ ತಪ್ಪಿಸಿಕೊಳ್ಳಬಹುದು. ಕರ್ಪೂರವನ್ನು ಮನೆಯೊಳಗೆ ಉರಿಸಿಡುವುದರಿಂದಲೂ ಸೊಳ್ಳೆಗಳ ಓಡಾಟ ತಪ್ಪಿಸಬಹುದು.

### ಬೆಳ್ಳುಳ್ಳಿ

ಬೆಳ್ಳುಳ್ಳಿ ತಿಂದರೆ ಮೈ ಬೆವರಿಗೆ ವಿಶಿಷ್ಟ ವಾಸನೆ ಇರುತ್ತದೆ. ಸೊಳ್ಳೆಗಳು ಇದಕ್ಕೆ ಹೆದರುತ್ತವೆ. ಬೆಳ್ಳುಳ್ಳಿಯನ್ನು ಜಜ್ಜಿ ಕೋಣೆಯಲ್ಲಿ ಇರಿಸಿದರೂ ನಡೆಯುತ್ತದೆ.

### ಪುದಿನ

ಪುದಿನ ಎಲೆಯ ಆಹ್ಲಾದಕರ ಪರಿಮಳ ಅಂದರೆ ಸೊಳ್ಳೆಗಳಿಗೆ ಅಲರ್ಜಿ. ಪುದಿನ ಯಾವುದೇ ಸೊಳ್ಳೆ ನಿವಾರಕದಷ್ಟೇ ಪರಿಣಾಮಕಾರಿ ಎಂದು ಅನೇಕ ಅಧ್ಯಯನಗಳು ತಿಳಿಸಿವೆ. ಪುದಿನ ಎಲೆಯನ್ನು ನೀರಿನಲ್ಲಿ ಹಾಕಿಡಬಹುದು, ಹಿತ್ತಿಲಲ್ಲಿ ಪುದಿನ ಗಿಡ ಬೆಳಸಬಹುದು, ಪುದಿನ ಎಣ್ಣೆಯನ್ನು ಮೈಗೆ ಹಚ್ಚಿಕೊಳ್ಳಬಹುದು. ಪುದಿನ, ತುಳಸಿ ಇತ್ಯಾದಿಗಳನ್ನು ಕಿಟಕಿಯ ಸನಿಹ ಬೆಳೆಸಿದರೆ ಪ್ರಯೋಜನ ಹೆಚ್ಚು.

### ಲ್ಯಾವೆಂಡರ್

ಲ್ಯಾವೆಂಡರ್ ಹೂವಿನ ಮಾತ್ರ ಅಲ್ಲ. ಸೊಳ್ಳೆಗಳನ್ನು ಮಾರು ದೂರ ಇರಿಸುವುದಕ್ಕೂ ಸಹಕಾರಿ. ಲ್ಯಾವೆಂಡರ್ ಎಣ್ಣೆಯನ್ನು ಮೈ ಕೈಗೆ ಹಚ್ಚಿಕೊಳ್ಳುವುದರಿಂದ ಪ್ರಯೋಜನವಿದೆ.

### ಸಿಟ್ರೋನೆಲ್ಲಾ

ಸಿಟ್ರೋನೆಲ್ಲಾ ಅಥವಾ ಮಜ್ಜಿಗೆ ಹುಲ್ಲು ಸೊಳ್ಳೆ ತಡೆಯಲ್ಲಿ ಅದ್ಭುತ ಪರಿಣಾಮ ಬೀರುವ ಸಸ್ಯ. ಇದರ ತೀಕ್ಷ್ಣ ಸುವಾಸನೆಗೆ ಸೊಳ್ಳೆಗಳು ಹೆದರುತ್ತವೆ. ಸಿಟ್ರೋನೆಲ್ಲಾ ಎಣ್ಣೆಯನ್ನು ಹಚ್ಚಿಕೊಳ್ಳಬಹುದು, ಈ ಹುಲ್ಲನ್ನು ಮನೆಯ ಆಸುಪಾಸಿನಲ್ಲಿ ಬೆಳಸಬಹುದು.

### ತುಳಸಿ

ತುಳಸಿಯ ಆರೋಗ್ಯ ಉಪಯೋಗಗಳ ಬಗೆಗೆ ನಮಗೆ ಗೊತ್ತೇ ಇದೆ. ಅದು ಸೊಳ್ಳೆ ನಿವಾರಕವೂ ಹೌದು. ಸೊಳ್ಳೆಗಳ ಲಾರ್ವಾಗಳನ್ನು ಕೊಲ್ಲಲು ಮತ್ತು ಪ್ರೌಢ ಸೊಳ್ಳೆಗಳನ್ನು ದೂರವಿರಿಸಲು ತುಳಸಿಯನ್ನು ಯಶಸ್ವಿಯಾಗಿ ಬಳಸಬಹುದು. ತುಳಸಿಯನ್ನು ಕಿಟಕಿಯ ಆಸುಪಾಸಿನಲ್ಲಿ, ಹಿತ್ತಿಲಿನಲ್ಲಿ ಬೆಳೆಸುವುದರಿಂದ ಸೊಳ್ಳೆಗಳನ್ನು, ಅವುಗಳ ಸಂತಾನೋತ್ಪತ್ತಿಯನ್ನು ತಡೆಯುತ್ತದೆ. ಮನೆಯೊಳಗೆ, ಕಿಟಕಿ ಬದಿ, ಬೆಡ್‌ರೂಮ್ ಇತ್ಯಾದಿ ಕಡೆಗಳಲ್ಲಿ ತಾಜಾ ತುಳಸಿ ಎಲೆಗಳನ್ನು ನೀರಿನಲ್ಲಿ ಹಾಕಿರಿಸಿದರೆ ಅದಕ್ಕೆ ಹೆದರಿ ಸೊಳ್ಳೆ ಒಳಬರುವುದೇ ಇಲ್ಲ.

**(ಉದಯವಾಣಿ 26–7–2016)**

---

**ನಿಧನ ವಾರ್ತೆ**


## ಜನಾಬ್ ಮುಹಮ್ಮದ್ ಶಫೀಉಲ್ಲಾಹ್ ಸಾಹೇಬ್



ಬೆಂಗಳೂರು: ಕಳೆದ ಆಗಸ್ಟ್ 18ರಂದು ಕರ್ನಾಟಕ ಮತ್ತು ಗೋವಾ ಮಾಜಿ ಅಹ್ಮದಿಯಾ ಅಮೀರ್ ಜನಾಬ್ ಮುಹಮ್ಮದ್ ಶಫೀಉಲ್ಲಾಹ್ ಸಾಹೇಬ್ ನಿಧನರಾದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.") ಅವರಿಗೆ 85 ವರ್ಷ ಪ್ರಾಯವಾಗಿತ್ತು. ಅವರು 1906ರಲ್ಲಿ ಪತ್ರ ಮೂಲಕ ಹಝ್ರತ್ ಮಸೀಹ್ ಮೌಊದರ(ಅ) ಬೈಅತ್ ಮಾಡಿದ ಬೆಂಗಳೂರಿನ ಪ್ರಥಮ ಅಹ್ಮದೀ ಜನಾಬ್ ಮೂಸಾ ರಝಾ ಸಾಹೇಬರ ಪೌತ್ರರಾಗಿದ್ದಾರೆ.

ಅವರು ಖಾಯಿದ್ ಖುದ್ದಾಮುಲ್ ಅಹ್ಮದಿಯಾ, ಸೆಕ್ರೆಟರಿ ಮಾಲ್, ಸೆಕ್ರೆಟರಿ ಉಮೂರೆ ಆಮ್ಮ, ಸದರ್ ಮತ್ತು ಅಮೀರ್ ಜಮಾಅತ್ ಅಹ್ಮದಿಯಾ ಬೆಂಗಳೂರು ಇತ್ಯಾದಿ ಸ್ಥಾನಗಳನ್ನು ವಹಿಸಿ ದೀರ್ಘಕಾಲ ಜಮಾಅತಿಗೆ ಸೇವೆ ಸಲ್ಲಿಸಿದ್ದಾರೆ. 1991ರಲ್ಲಿ ಬೆಂಗಳೂರಿನ ಅಹ್ಮದಿಯಾ ಮಸ್ಜಿದ್ ನಿರ್ಮಾಣದಲ್ಲಿ ಅವರು ತುಂಬಾ ಮಹತ್ತಾದ ಪಾತ್ರ ವಹಿಸಿದ್ದರು. ಮೃತರು ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಮತ್ತು ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

20ರಂದು ಖಾದಿಯಾನಿನ ಬಿಹಿಶ್ತಿ ಮಖ್‌ಬರದಲ್ಲಿ ಮೃತದೇಹವನ್ನು ದಫನ ಮಾಡಲಾಯಿತು. ಮೃತರಿಗೆ ಅಲ್ಲಾಹನು ಮಗ್‌ಫಿರತ್ ಮತ್ತು ಜನ್ನತನ್ನು ಅನುಗ್ರಹಿಸಲಿ – ಆಮೀನ್.





ಅಹ್ಮದಿಯಾ ಮುಸ್ಲಿಂ ಜಮಾಅತಿನ
ವತಿಯಿಂದ ಪ್ರಕಟಿಸಲ್ಪಟ್ಟ

# ಪವಿತ್ರ ಖುರ್‌ಆನ್

ಕನ್ನಡ ಭಾಷಾಂತರ

**ಬೆಲೆ : ರೂ. 200/-**




# ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ

ಗ್ರಂಥಕರ್ತ : ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್

**ಪುಟಗಳು - 320. ಬೆಲೆ : 100/-**

## ದೊರೆಯುವ ವಿಳಾಸ

AHMADIYYA MUSLIM MISSION
No.1, 3rd Cross Road,
Wilson Garden, Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

**National Toll Free Number : 1800 3010 2131**
**National Website : ahmadiyyamuslimjamaat.in**
**International Website : alislam.org**
**Email : info@ahmadiyyamuslimjamaat.in**




ಲಂಡನ್:
ಯು.ಕೆ. ಅಹ್ಮದಿಯಾ
50ನೇ ವಾರ್ಷಿಕ ಸಮ್ಮೇಳನ
(ಜಲ್ಸಾ ಸಾಲಾನ) 2016






ಬೆಂಗಳೂರು:
ಖುದ್ದಾಮುಲ್
ಅಹ್ಮದಿಯಾ, ಅತ್ಫಾಲುಲ್
ಅಹ್ಮದಿಯಾ ಕರ್ನಾಟಕ
ದಕ್ಷಿಣ ವಲಯ ಇಜ್ತಿಮಾ



ಮಡಿಕೇರಿ:
ಮಜ್ಲಿಸ್ ಅನ್ಸಾರುಲ್ಲಾಹ್
ಇಜ್ತಿಮಾ

Registered with the Registrar of Newspapers for India No. R.N. 27354/75
**Yugarashmi** Kannada Quarterly, **November - 2016.** Price : Rs. 15/-

# Ahmadiyya Muslim Community

## Apps for mobile devises

Download free apps developed by Ahmadiyya Muslim Community for your iphone,ipode, and Android

**Quran**
Read the Holy Quran in easy Yassarnal Quran Font

**Conditions of Bai'at**
A pocket reference of Shara't-e-Bai'at in 7 languages

**Sermons**
Huzoor's Friday Sermons In 15 languages

**MTA**
Watch MTA Live, view Schedule and much more

**Ahmadiyya News**
Stay up to date with the Latest jama'at news

View these apps at
alislam.org/apps
or scan the QR code below



Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001. Typing by : U. Basheer Ahmad
Printed at 'Karavali Printers', Azizuddin Road, Mangalore on behalf of Jubilee Printing Press, Mangalore